

ನೀಲಿಮಾ ತೀರ

ಶಾಂತಾದೇವಿ ಕಣವಿ

ಶ್ರೀಲತಿಂಮ ಕರುಣಾ, ವಿಶಾಖಾರಿಗೆ

ಹೊಸ ವರುಷದ ಶುಭಾಶಯಗಳೊಂದಿಗೆ

— ಅಪ್ಪನಿಂದ

೨೨-೧-೬೩.

ನೀಲಿಮಾ ತೀರ

ಶಾಂತಾದೇವಿ ಕಣವಿ

ಸ್ನೇಹ ಪ್ರಕಾಶನ
ಬೆಂಗಳೂರು–40

NEELIMA TEERA : Short Story Collection by Smt. Shantadevi Kanavi, 'Chembelaku', Kalyananagar, Dharwad - 580 007 Pub by : Sneha Prakashana, 7th 'C' Main, Vijayanagar 2nd Stage, Bangalore - 560 040.

Pages : x + 112 Price : Rs. 15/-

First Edition : 1992

ಬೆಲೆ : ಹದಿನೈದು ರೂಪಾಯಿಗಳು

ಮುದ್ರಕರು : ಲಾವಣ್ಯ ಮುದ್ರಣಾಲಯ
ವಿದ್ಯಾಪೀಠ ಸರ್ಕಲ್,
ಬೆಂಗಳೂರು-50

ಮುನ್ನುಡಿ

ಶ್ರೀಮತಿ ಶಾಂತಾದೇವಿ ಕಣವಿಯುವರ ಆರು ಸಂಗ್ರಹಗಳಲ್ಲಿ ಒಂದು ಲಘು ಬರಹಗಳಾದರೆ ಉಳಿದ ಐದೂ ಸಣ್ಣ ಕತೆಗಳು. ಕಳೆದ ನಲವತ್ತು ವರ್ಷಗಳಿಂದ ಅವರು ಸಣ್ಣ ಕತೆಗಳನ್ನು ಬರೆಯುತ್ತ ಬಂದಿರುವರು. ಇಲ್ಲಿಯ ವರೆವಿಗೆ ಬಂದಿರುವ ಒಟ್ಟು ಕತೆಗಳೇ 94 ಆಗುತ್ತಿವೆ. ದಿವಂಗತ ಕಟ್ಟೀಮನಿ ಯವರಂತೆ ಸುತ್ತಲ ಬದುಕನ್ನು ಪರಿಶೀಲಿಸುತ್ತಾ ತಮ್ಮ ದೃಷ್ಟಿಕೋನದಿಂದ ರೂಪಿಸಿದ ಕತೆಗಳು ಇಲ್ಲಿವೆ. ಆದುದರಿಂದ ಈ ಕತೆಗಳಲ್ಲಿನ ಶೈಲಿ ಧಾರವಾಡದ ನೆಲದ ಪರಿಮಳದಿಂದ ಕೂಡಿರುವುದಲ್ಲದೆ ಚಿತ್ರಿತವಾದ ವಿಷಯುಗಳೂ ಪ್ರಾದೇಶಿಕ ಧ್ವನಿಯಿಂದ ಕೂಡಿವೆ. ಇವರು ಕತೆಗಳನ್ನು ಪ್ರಗತಿಶೀಲದಿಂದ ಪ್ರಾರಂಭ ಮಾಡಿದರೂ ನವ್ಯ ಮತ್ತು ಬಂಡಾಯ ಮನೋಧರ್ಮಗಳಿಗೆ ಒಗ್ಗಿದವರಾಗಿ ತಮ್ಮ ಕಥಾನಕ ಪ್ರಗತಿಯನ್ನು ಸಾಧಿಸಿದಂತೆ ಕಂಡುಬರುತ್ತಿದೆ. ಇಲ್ಲಿ ಗಮನಿಸಬೇಕಾದ ಒಂದು ವಿಷಯವೆಂದರೆ, ಈ ಕತೆಗಾರ್ತಿ ತನ್ನತನ ವನ್ನು ತುಂಬ ಎಚ್ಚರಿಕೆಯಿಂದ ಕಾಪಾಡಿಕೊಂಡು ಬಂದಿರುವುದು. ಇವರು ತಮ್ಮ ಚಿಂತನೆಯನ್ನೂ ವರ್ಣಕ ಸಾಮರ್ಥ್ಯವನ್ನೂ ಹತೋಟಿಯಲ್ಲಿರಿಸಿ ಕೊಂಡು ಓದುಗನ ಮನಸ್ಸನ್ನು ತುಂಬಿ ಕಾಡಬಲ್ಲ ಕಲಾತ್ಮಕ ಕೃತಿಗಳನ್ನು ರಚಿಸಿದ್ದಾರೆ.

ಪ್ರಸ್ತುತ ಕಥಾ ಸಂಕಲನ – 'ನೀಲಿಮಾ ತೀರ'ವು ಹನ್ನೆರಡು ಕತೆಗಳ ನ್ನೊಳಗೊಂಡಿದ್ದು ಇಲ್ಲಿನ ಮೂರು ನಾಲ್ಕು ಕಲಾತ್ಮಕ ಕೃತಿಗಳು ಸಣ್ಣ ಕತೆ ಗಳಾಗಿ ತುಂಬ ಶ್ರೇಷ್ಠ ಮಟ್ಟದವಾಗಿವೆ. ಇವುಗಳಲ್ಲಿ ನವ್ಯಪ್ರಜ್ಞೆಯೂ ಹೊಳೆಯುತ್ತದೆ. ವಸ್ತುವಿನಲ್ಲಿ ಪ್ರಗತಿಯ, ಸ್ತ್ರೀಪಕ್ಷದ, ಬಂಡಾಯದ ಹಾಗೂ ವ್ಯಂಗ್ಯದ ಅಂಶಗಳು ಹಾಸುಹೊಕ್ಕಾಗಿ ಕಂಡುಬರುತ್ತವೆ.

ಈ ಕತೆಗಾರ್ತಿಗೆ ಪ್ರಾರಂಭದಲ್ಲಿ ಪ್ರಗತಿಶೀಲ ಧೋರಣೆಯು ಸರಿ ಯೆಂದು ಕಾಣಲು, ಸ್ತ್ರೀ ಪಕ್ಷವು ಸಹಜವಾಗಲು ಪರಿಸರವೇ ಕಾರಣವೆನ್ನ ಬಹುದು. ಆದರೆ ಇವೆರಡೂ ಅಂಶಗಳಲ್ಲಿಯೂ ಎಚ್ಚರಿಕೆಯಿಂದ ನಡೆದು ಕೊಂಡಿದ್ದಾರೆ. ಪ್ರಗತಿಯ ವಿಷಯದಲ್ಲಿ ಶೋಷಣೆಯನ್ನೂ ಬಂಡಾಯ

ವನ್ನೂ ಜೊತೆಗೆ ಬದುಕಿನ ಸಹಜ ಪ್ರಭಾವದಲ್ಲಿ ಕಾಲವು ಹಿಡಿಯುವ ಸಹಜ ಮಾರ್ಪಾಡಿನ ಅಂಶಗಳನ್ನೂ – ಕಡೆಗೆ ಸಂಕೇತ ರೂಪದ ಗೆಲುವನ್ನೂ ಪ್ರಾಮುಖ್ಯವನ್ನೂ ಗುರುತಿಸಿದ್ದಾರೆ. ಆದುದರಿಂದಲೇ ಈ ಕತೆಗಳು ಕನ್ನಡದ ಶ್ರೇಷ್ಠಮಟ್ಟಕ್ಕೆ ಮುಟ್ಟಲು ಇವರ ಪ್ರಯೋಗಶೀಲ ಮನೋಧರ್ಮವೇ ಮುಖ್ಯ ಆಧಾರವಾಗಿದೆ. ಇಷ್ಟು ಸ್ವತಂತ್ರವಾಗಿ 'ಚಿಂತಿಸುವ' ಶೈಲಿಯನ್ನೂ ವಿಷಯ ವೈವಿಧ್ಯವನ್ನೂ ಕುರಿತ ಕತೆಗಾರ್ತಿಯರು ಕನ್ನಡದಲ್ಲಿ ಮೂರು ನಾಲ್ಕು ಮಂದಿಯಷ್ಟೇ ಸಿಕ್ಕಬಹುದಾಗಿದೆ. ಬದುಕಿನ ಸಂಕೇತಗಳ ಶಕ್ತಿಯಲ್ಲಿಯೂ ತಮ್ಮದೇ ಆದ ಆಶಯಗಳನ್ನು ಸಾಧಿಸಿದ್ದಾರೆ. ಇವರ ಗದ್ಯ ಶೈಲಿಯಂತೂ ಮನೋಜ್ಞವಾಗಿದೆ. ಈ ಗದ್ಯವು ಕಥನಕ್ಕೆ ತುಂಬ ಸೊಗಸಾಗಿದ್ದು ಬರಿಯ ರಂಜನೀಯವಾಗದೇ ಸಹಜ ಸರಳ ಚಿಂತನದ ವಾಹಕವಾಗಿದೆ. ಧಾರವಾಡದ ಆಡುಮಾತಿನ ಧಾಟಿ ಕತೆಗಳಲ್ಲಿ ಸಹಜವಾಗಿ ಬಂದಿದೆ. ಆಡಂಬರರಹಿತವಾದ ಶೈಲಿಯೊಂದು ಈ ಕತೆಗಳಲ್ಲಿ ಧ್ವನಿಸುತ್ತದೆ.

ಇಲ್ಲಿಯ ಮೂರು ನಾಲ್ಕು ಕತೆಗಳಲ್ಲಿ (ಉದಾಹರಣೆಗೆ ದೇವಿ, ಒಂದು ಮೂಗುತಿಯ ಕತೆ ಮತ್ತು ನೀಲಿಮಾ ತೀರ) ಕನ್ನಡದ ಶ್ರೇಷ್ಠ ಕತೆಗಳ 'ಸ್ಟಚ್ಚರ್' ಕಂಡುಬರುತ್ತದೆ. ಇವುಗಳು ದಿವಂಗತ ಮಾಸ್ತಿಯವರ, ವೀಣಾ ಶಾಂತೇಶ್ವರರ, ರಾಜಲಕ್ಷ್ಮಿಯವರ ಹಾಗೂ ನವ್ಯ ಮತ್ತು ಬಂಡಾಯ ಕತೆಗಳ ಸಮಾನತೆಯನ್ನು ಪಡೆದುಕೊಳ್ಳುತ್ತವೆ. ನನಗೆ ಮೆಚ್ಚಿಗೆಯಾಗಿರುವುದು ಈ ಮೂರು ಕತೆಗಳಲ್ಲಿ ಸ್ಪಂದಿಸುತ್ತಿರುವ ನಮ್ಮ ಬದುಕಿನ ಮಾರ್ಮಿಕತೆ ಮತ್ತು ವ್ಯಂಗ್ಯ. ಇಂತಹ ಚಿಂತನೆಯ ಶೈಲಿಯು ಒಂದು ವಿಶಿಷ್ಟವಾದ, ಅಪರೂಪವಾದ ಮತ್ತು ಅಪರೂಪವಾಗುತ್ತಿರುವ ಆರೋಗ್ಯಕರ ಮನಸ್ಸನ್ನು ಗುರುತುಮಾಡಿ ತೋರಿಸುತ್ತದೆ.

ಮೊದಲಿಗೆ ದೇವಿ ಎಂಬ ಕತೆಯಲ್ಲಿ ಹೆಸರೇ ಹೇಳುವಂತೆ ಇದು ಮದ್ಯಪಾನದ ಕತೆ. ಆದರೆ ಒಂದು ತೀರ ಬಡ ಜೀವ ಒಂದು ಬಾಟಲಿನಲ್ಲಿ ಇದರ ಮುಖವನ್ನು ಕಂಡು 'ದೇವಿ' ಯೆಂದು ಆರಾಧನೆಗೆ ತೊಡಗಿ ಇಡೀ ಊರಿನ ಜನತೆಯು ಮೂಢನಂಬಿಕೆಯಲ್ಲಿ ಮುಳುಗಿ ಹೋದಾಗ ಅದರ ಮಿತಿಯನ್ನು ಅರಿತು ಹೊರಕ್ಕೆ ಧಾವಿಸುವ ಕಥಾನಕವು ಸಂದರ್ಭದ ವರ್ಣನೆ ಮತ್ತು ಹಸುಳೆತನದಿಂದ ತುಂಬಿದ ಒಂದು ಹಳ್ಳಿಯ ಜೀವವು ಕಂಡುಕೊಳ್ಳುವ ಸತ್ಯದ

ಆವಿಷ್ಕಾರವೇ ಸೊಗಸಾಗಿದೆ. ನಮ್ಮ ಮನಸ್ಸಿನಲ್ಲಿ ಉಳಿಯುವುದು ಒಂದು 'ಬಾಟಲು' ಸಂಕೇತವಾಗಿ ಧ್ವನಿಪೂರ್ಣವಾಗಿ ನಮ್ಮ ಜನತೆಯ ಸ್ಥಿತಿಗತಿಯ ಪ್ರತೀಕವಾಗಿ ಪರಿಣಮಿಸುತ್ತದೆ. ಈ ಕತೆಯ ಯೋಜನೆ ಕೂಡ ಮುಗ್ಧತೆಯ ಪರಿಣಾಮವಾಗಿ ಈವರೆಗೆ ನಾನು ಓದಿರುವ-ನೋಡಿರುವ-ಅರಿತಿರುವ ಕುಡುಕತನವನ್ನು ಸೋಲಿಸಿಬಿಡುತ್ತದೆ. ಅಂದರೆ ಇದರ ಸಾಮಾಜಿಕ ಮೌಲ್ಯಮಾಪನ ಶಕ್ತಿಯು ಆಶ್ಚರ್ಯಕರವಾಗಿದೆ. ಕತೆಯ ಶೈಲಿಯು ಕಥಾನಕದ ಚೌಕಟ್ಟನ್ನು ಹರಿದುಕೊಂಡಂತೆ ಅರಿವಿನ ಬೊಗಸೆಯಲ್ಲಿ ತುಂಬಿಕೊಳ್ಳುತ್ತದೆ. ಈ ಕತೆಯು ಕೊನೆಯಾಗುವಲ್ಲಿ ನಮ್ಮ ಹಳ್ಳಿಯ ಜೀವವೊಂದು ಮಿಡಿಯುತ್ತಿರುವಂತೆಯೇ ಆಗುತ್ತದೆ—'ಬಾಟಲಿ' ಯನ್ನು ಬಾವಿಗೆ ಒಗೆದು ಬಂದ ಸಂಗಣ್ಣ ಖಾಲಿ ಆದ ಜಗುಲಿಗೆ ಸನಮಾಡಿ ಬಾವಿಯತ್ತ ಹೊರಟ. ತಿರುಗಿ ಬಂದ ಮಗನಿಗೆ ಪಾರವ್ವ "ಚಕಡೀ ಕೊಳ್ಳ ಕಟ್ಟು ಸಂಗಣ್ಣಾ, ಡಾಕ್ತರ ಹಂತ್ಯಾಕ ಹೋಗೂಣ" ಎಂದಳು. ಹೀಗಿರುವ ಮುಗಿತಾಯದಲ್ಲಿ ಇಡೀ ಕತೆಯು ಧ್ವನಿಸುತ್ತದೆ ಮತ್ತು 'ದೇವಿ'ಯ ಮೌಲ್ಯಮಾಪನವಾಗುತ್ತದೆ. ಇದರ ಪರಿಣಾಮವು ತಾರ್ಕಿಕವಾಗದೆ ಮಾರ್ಮಿಕವಾಗಬಲ್ಲುದು ಮತ್ತು ಓದುಗರ (ಅಥವಾ ಕೇಳುಗರ) ಮೇಲೆ ಅಚ್ಚೊತ್ತಬಲ್ಲುದು. ಇದೊಂದು ಹೆಣ್ಣು ಜೀವದ ಅನುಭವ.

ಎರಡನೆಯ ಕತೆಯಾಗಿ ಒಂದು ಮೂಗುತಿಯ ಕತೆ—ಪ್ರಾರಂಭದಿಂದಲೇ ಕತೆಯು ಮೂಗುತಿಯ ಹುಡುಕಾಟದಿಂದ ಒಂದು ಸಂಸಾರದ ಗುಟ್ಟನ್ನು ಬಯಲಿಗೆಳೆಯುವಂತೆ ವಿಷಮ ಸಂದರ್ಭದಿಂದ ಶೋಷಣೆಯು ಒಂದು ಬಗೆಯಾಗಿ ಬೆಳೆಯುವುದಲ್ಲದೆ, ಮೂಗುತಿಯ ಅರ್ಥವಂತಿಕೆಯೂ ಮಾರ್ಪಡುತ್ತದೆ. ಕಡೆಗದು ಒಂದು ಗಂಡಕೂಸಿನ ಸಮಾನ ಮೌಲ್ಯವಾಗಿ ಬದುಕಿನ ಸಹಜವಾದ ಸಮಾಧಾನಕ್ಕೆ ಹೊರಳುತ್ತದೆ. ಇದನ್ನು ಎಂತಹ ಮತ್ತು ಹೇಗೆ ಒಂದು ಜೀವಂತ ಮೌಲ್ಯಮಾಪಕವಾದ ಸಂಕೇತವೆಂದು ಬಿಡಿಸಿ ಹೇಳಬೇಕಾಗುವುದಿಲ್ಲ.

ಇದೊಂದು ಬೆರಗನ್ನುಂಟುಮಾಡಬಲ್ಲ ರಚನೆ – ಸಣ್ಣ ಕತೆ. (ಓಹೆನ್ರಿಯನ್ನು ನೆನಪಿಗೆ ತರಬಲ್ಲುದು.) ನಮ್ಮ ಅಂದರೆ ಧಾರವಾಡದ ಪರಿಸರದಲ್ಲಿನ ಬದುಕನ್ನು, ಅದರ ದಾರುಣತೆಯನ್ನು ತೋರಿಸುವಲ್ಲಿ ಒಂದು 'ರಿಚುಯಲ್'

ಎಂಬಂತೆ ದುಡಿಯುತ್ತದೆ. ಮೂಗುತಿಯೇ ನಮ್ಮ ಸ್ತ್ರೀಯರ 'ಮೂಗುದಾರದ ಒಡವೆ' ಎನ್ನುವುದಾದರೆ 'ಶೋಷಣೆಯ ಹೊರೆ'ಯಾಗುತ್ತದೆ. ಇಂಥ ಅರ್ಥವಂತಿಕೆಯನ್ನು ಕತೆಗಾರ್ತಿಯು ತುಂಬು ಜಾಣತನದಿಂದ ಚಿಂತನದ ಸಹ ಜತೆಗೆ ಕುಂದು ಬಾರದಂತೆ ಸಾಧಿಸಿದ್ದಾರೆ. ಆದರೆ ಅದು ಆಭರಣವಾದರೆ ಅಲಂಕಾರವಾಗುವಂತೆಯೇ ಒಂದು ಕೂಸಿನ ಬೆಲೆಯಾಗುವುದಾದರೆ ಅದು ನಮ್ಮ ಗೊಂದಲಗಳ ನಡುವೆಯೂ ಹಿತಕರವಾಗುವ, ಮಾರ್ಪಡುವ ನೋವಾದೀತು ಎನ್ನುವಂತೆ ಕೂಸನ್ನು ಹೆರುವ ಬೇನೆಯನ್ನೂ ಸೂಚಿಸುತ್ತದೆ. ಇಲ್ಲಿ ಕತೆಯು ಸುಧಾರಣೆಯನ್ನು ಹೇಳುವುದಕ್ಕಾಗಿ ಬಳಕೆಯಾಗುವುದಿಲ್ಲ. ಶೋಷಣೆಯ ಪ್ರತೀಕವೂ ಆಗಿ ಉಳಿಯುವುದಿಲ್ಲ. ನಮ್ಮ ಈಚಿನ ದಿನಗಳಲ್ಲಿ ಬದುಕು ನಿರಾಡಂಬರವಾಗಿ ಗದ್ದಲವಿಲ್ಲದೆ ಮಾರ್ಪಡುವ ಶಕ್ತಿಯನ್ನು ಪಡೆದಿರುವಂತೆ ಅರಿವಿನ ಕಡೆಗೆ ಬೆಳಕು ಚೆಲ್ಲುತ್ತದೆ. ಇಂಥ ಯಶಸ್ಸು ಎಲ್ಲ ಸಾಹಿತ್ಯ ಸಿದ್ಧಾಂತಗಳನ್ನೂ ಮುರಿಯುವಂಥದು. ಬದುಕು ಬಂಗಾರವಾಗಲು ನಮ್ಮ ನಂಬಿಕೆಯಲ್ಲಿ ಮಾತ್ರವೇ ಸಾಧ್ಯವೆಂದರೂ ಸರಿಯಾದೀತು. ಓದುಗರು ಹೀಗೆ ವಿಚಾರ ಮಾಡಬಹುದಾಗಿದೆ. ಒಮ್ಮೆ ಓದಿದ ಮೇಲೆ ಮೂಗುತಿಯ ಸಮಾನಾರ್ಥಗಳನ್ನು ಕಂಡುಕೊಳ್ಳುವುದಕ್ಕಾಗಿಯೇ ಮತ್ತೆ ಕತೆಯನ್ನು 'ಮೆಲುಕು' ಹಾಕಬೇಕಾಗುತ್ತದೆ.

ಮೂರನೆಯ ಮಾದರಿಯ ಕತೆಯೆಂದು ನಾನು ನೀಲಿಮಾ ತೀರವೆಂಬುದನ್ನು ಗುರುತಿಸುತ್ತೇನೆ. ಇದು ಉಳಿದೆರಡರಂತಲ್ಲ. ತನ್ನ ಒಂದು ಸಾಂದರ್ಭಿಕ ವಿವರದಿಂದಲೇ ಅರ್ಥಪೂರ್ಣವಾಗಿ ಮನಸ್ಸನ್ನು ತುಂಬಿಕೊಂಡಾಗ ಮಾತು ಮೌನವಾಗುತ್ತದೆ ! ಒಂದು ದಾರುಣ ಘಟನೆಯ ವಿವರವೇ ಸಾಕಾಗಿ ಕತೆಯಾಗುತ್ತಿತ್ತು. ಆದರೆ ಈ ಕತೆಯಲ್ಲಿ ಹುದುಗಿರುವ 'ಹುರುಳಿನಂಥ ಮತ್ತೊಂದು ಕಥೆ'– ಅದು ಒಂದು ಕೂಸಿನದು. ಆರೋಗ್ಯಕರವಾಗಿ ತನ್ನ ಹಸುಳೆತನದಿಂದ ನೆರವಾಗಲು ಹೋಗಿ 'ಕಣ್ಣು ಮುಚ್ಚಿದ' ಕತೆ ಓದುಗರ ಹೃದಯವನ್ನು ಹಿಂಡಬಲ್ಲುದು. ಇದರಲ್ಲಿ ಒಂದು ನೋವಿನ ಆವೇಶವು ತುಂಬಿಕೊಳ್ಳಲು ಅವಕಾಶವಿರುವುದಾದರೂ ಭಾವುಕತೆಯನ್ನು ಗೆದ್ದು ವಿಚಾರಕ್ಕೆ ಹೊರಳುತ್ತದೆ. ಮಾಸ್ತಿಯವರಲ್ಲಿ ಇಂಥ 'ಕರುಣೆ' ಯನ್ನು ಗುರುತಿಸಬಹುದು. ಇದರ ರಚನೆಯಲ್ಲಿ ಬರಹಗಾರ್ತಿ ಬಳಸಿರುವ 'ಸಂಯಮ'ವೇ ಕತೆಯನ್ನು ಕಲಾತ್ಮಕಗೊಳಿಸಿದಂತಿದೆ. ಇದರ ವಿವರವು ಒಂದು ಹಿತ-ಮಿತ ಹದದಲ್ಲಿರುವುದೇ ಇದರ ಗೆಲುವಿಗೂ ಪರಿಣಾಮಕ್ಕೂ ಕಾರಣವೆನ್ನಬಹುದು.

ರೈಲು ಒಂದು ಮಬ್ಬುಗತ್ತಲಲ್ಲಿ ಹಳಿ ತಪ್ಪಿ ನೀರಿಗೆ ಉರುಳುವುದು- ಅದರಲ್ಲಿ ಜೀವಕ್ಕೆ ಜೋತುಬೀಳುವ ಅಮಾಯಕರ ಪರದಾಟವಂತೂ ಒಂದು ಭಾವ ಗೀತೆಯಂತೆ ಕೂಡಿದೆ. ಆ ನೋವಿಗಾಗಿ ತೋರಬೇಕಾದ ಮರುಕಕ್ಕೆ ಸಮಾನ ಗೊಳಿಸಿ ಅಥವಾ ಅದಕ್ಕೂ ಹೆಚ್ಚಿಸದಾಗಿಸಿದ ಹಸುಳೆಯೊಂದರ ಸಾರ್ಥಕತೆ ಯನ್ನು ಕೂಡಿಕೊಂಡ ಈ ಕತೆಯು ನೆನಪಿನಲ್ಲಿ ಉಳಿಯಬಲ್ಲ ಶಕ್ತಿಯನ್ನೂ ಪಡೆದುಕೊಂಡಿದೆ. ಆದುದರಿಂದ ಒಳ್ಳೆಯ ಕತೆಯ ಬೇಡಿಕೆಯು ಇದೇ ಆದಂತಿದೆ.

ಶ್ರೀಮತಿ ಶಾಂತಾದೇವಿ ಕಣವಿಯವರ ಕತೆಗಳ ಹಿಂದೆ ಮಿಡಿಯು ತ್ತಿರುವ ಜೀವ ಒಬ್ಬ ತಾಯಿಯದಾಗಿದೆ. ಆದುದರಿಂದ ಈ ಕತೆಗಳ ವಸ್ತು ವೆಲ್ಲದರಲ್ಲೂ ಹೆಣ್ಣಿನ ಚಿಂತನೆಯು ನಾಲ್ಕು ಗೋಡೆಗಳ ಒಳಗೇ ಸರಿದಾಡು ವಂತೆ ಕಾಣುತ್ತದೆ. ಆದರೆ ಅದು ಒಂದು 'ತಾಯಿಯ ನೋಟ' ವಾಗಿ ಸ್ಪಂದಿ ಸುವುದರಿಂದಾಗಿ ತುಂಬ ಆರೋಗ್ಯಕರವಾದ ಪರಿಣಾಮವನ್ನುಂಟುಮಾಡಬಲ್ಲ ವಾಗಿವೆ. ಈ ಕತೆಗಳ ಆಶಯಗಳು ಸೀಮಿತವಾಗಿರುವಂತೆ ಕಂಡುಬಂದರೂ ಒಬ್ಬ ಬರಹಗಾರ್ತಿ ತನ್ನ ಸೀಮಿತ ವಲಯ ಹಾಗೂ ಕಾಲಧರ್ಮದಲ್ಲಿ (ನಮ್ಮ ಪರಿಸರವನ್ನು ನೋಡಿದಾಗ) ಇಷ್ಟು ಜೀವಂತವಾಗಿ ಪ್ರತಿಕ್ರಿಯಿ ಸಿರುವುದೇ ಹೆಚ್ಚೆಂದು ತೋರುತ್ತದೆ. ಇಂಥಹ ಗತಿ-ಸ್ಥಿತಿಯು ನಮ್ಮ ಬರಹಗಾರ್ತಿಯಲ್ಲಿ ವಿರಳವೇ ಆಗಿದೆ. ಬರಹಗಾರರಲ್ಲಿ ಕೂಡ ಕಾಣಲು ಸಾಧ್ಯ ವಾಗದಂಥ ಸಹಜತೆಯು ಇವರಲ್ಲಿ ವಿಶೇಷವಾಗಿರುವುದಂತೂ ಮರೆಯ ಬಾರದ ವಿಷಯವಾಗಿದೆ.

ಕಳೆದ ಐದು ವರ್ಷಗಳಲ್ಲಿ ಈ ಕತೆಗಾರ್ತಿಯ ಕಲಾತ್ಮಕತೆ ತನ್ನ ಪರ ಮಾರ್ಥವನ್ನು ಸಾಧಿಸಿಕೊಂಡಿರುವುದಲ್ಲದೆ ಮುಂದೆಯೂ ಇದೇ ಪ್ರಜ್ಞೆಯು ದುಡಿದು ಕಾರ್ಯೋನ್ಮುಖವಾಗಬಲ್ಲುದೆಂಬ ಭರವಸೆ ನನಗಿದೆ.

ಕ. ವೆಂ. ರಾಜಗೋಪಾಲ

ಲೇಖಕಿಯ ಮಾತು

ನನ್ನ ಈ ಆರನೆಯ ಕಥಾಸಂಕಲನವನ್ನು ಓದುಗರ ಕೈಯಲ್ಲಿಡಲು ಸಂತೋಷವೆನಿಸುತ್ತದೆ. ಇದನ್ನು ವಿಶ್ವಾಸದಿಂದ ಪ್ರಕಟಣೆಗೆ ಎತ್ತಿಕೊಂಡ ಸ್ನೇಹ ಪ್ರಕಾಶನದವರಿಗೆ ಮೊದಲು ನನ್ನ ಕೃತಜ್ಞತೆಗಳು ಸಲ್ಲಬೇಕು. ಕರಡು ತಿದ್ದುವುದರಿಂದ ಮೊದಲುಗೊಂಡು ಆಕರ್ಷಕವಾದ ಮುಖಪುಟದೊಂದಿಗೆ ಈ ಪುಸ್ತಕ ಹೊರಬರುವವರೆಗೂ ಅವರು ತೋರಿದ ಶ್ರದ್ಧೆ ಅವಿಸ್ಮರಣೀಯವಾದದ್ದು.

ನನ್ನ ಕಥೆಗಳ ಬಗ್ಗೆ ಆಗಾಗ ಮೆಚ್ಚುಗೆ ಸೂಚಿಸುತ್ತಲೂ, ವಿಮರ್ಶೆಯ ಮಾತುಗಳನ್ನು ಹೇಳುತ್ತಲೂ ಬಂದ ಪ್ರೊ॥ ಕ. ವೆಂ. ರಾಜಗೋಪಾಲ ಅವರು ಇಲ್ಲಿಯ ಕಥೆಗಳನ್ನು ಮತ್ತೊಮ್ಮೆ ಆಸ್ಥೆಯಿಂದ ಓದಿ ಮುನ್ನುಡಿ ಬರೆದಿದ್ದಾರೆ. ಗಣ್ಯ ವಿಮರ್ಶಕರಾದ ಡಾ॥ ಜಿ. ಎಸ್. ಆಮೂರ ಅವರು ತಮ್ಮ ಅನೇಕ ಕೆಲಸಗಳಲ್ಲಿ ಬಿಡುವು ಮಾಡಿಕೊಂಡು ಬೆನ್ನುಡಿಯ ರೂಪದಲ್ಲಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ಇಬ್ಬರಿಗೂ ನನ್ನ ಆತ್ಮೀಯ ವಂದನೆಗಳು.

ಇಲ್ಲಿ ಪ್ರಕಟವಾಗಿರುವ ಕೆಲವು ಕಥೆಗಳು 'ಸುಧಾ', 'ತರಂಗ' ಹಾಗೂ 'ಪ್ರಜಾವಾಣಿ', 'ಉದಯವಾಣಿ' ವಿಶೇಷಾಂಕಗಳಲ್ಲಿ ಮೊದಲು ಬೆಳಕು ಕಂಡಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಪ್ರಕಟಿಸುವ ಆಯಾ ವರ್ಷದ ಕಥಾಸಂಕಲನದಲ್ಲಿ ಎರಡು ಕಥೆಗಳು ಪುನರ್ಮುದ್ರಣವಾಗಿದೆ. ಈ ಎಲ್ಲ ಸಂಪಾದಕರಿಗೆ ನಾನು ಆಭಾರಿಯಾಗಿದ್ದೇನೆ.

ಪುಸ್ತಕ ಸಕಾಲದಲ್ಲಿ ಅಚ್ಚುಕಟ್ಟಾಗಿ ಬರುವಂತೆ ನೋಡಿಕೊಂಡ ಲಾವಣ್ಯ ಮುದ್ರಣಾಲಯದ ಮಾಲೀಕರನ್ನು ಹಾಗೂ ಕಾರ್ಮಿಕ ವರ್ಗದವರನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಎಂದಿನಂತೆ ಸಲಹೆ. ಸೂಚನೆಗಳಿಂದ ಪ್ರೋತ್ಸಾಹ ನೀಡುತ್ತಿರುವ ಕವಿ ಕಣವಿಯವರಿಗೆ, ಮಕ್ಕಳಿಗೆ, ಬಂಧು–ಬಳಗಕ್ಕೆ ಹಾಗೂ ಸಹೃದಯ ವಾಚಕ ವೃಂದಕ್ಕೆ ನಾನು ಋಣಿ.

'ಚೆಂಬೆಳಕು'
ಕಲ್ಯಾಣನಗರ,
ಧಾರವಾಡ–೫೮೦ ೦೦೭

ಶಾಂತಾದೇವಿ ಕಣವಿ

ಪರಿವಿಡಿ

ಒಂದು ಮೂಗುತಿಯ ಕಥೆ

ಧಡ್....ಧಡಲ್....ಬಡಲ್....ಟಪ್....ಠಪ್....ಚರ್‍ರ್‍ರ್....ಆ ಚಿಕ್ಕ ಕೋಣೆಯಲ್ಲಿದ್ದ ವಸ್ತುಗಳೆಲ್ಲ ಕೈ ಕಾಲು ಬಂದವರಂತೆ ಅತ್ತ-ಇತ್ತ ಹಾರಾಡುತ್ತಿದ್ದವು. ಪಾತ್ರೆಗಳು ಜಿಗಿದಾಗ ಠಣ್ ಎಂದು ಸಪ್ಪಳಿಸಿದವು. ಹಾಸಿಗೆಯನ್ನೆತ್ತಿ ಚಟಪಟ ಝಾಡಿಸಿದಾಗ ಹರಕು ಚಾಪೆಯ ಕಡ್ಡಿಗಳು ಡೊಂಕಾಗಿ ನಡು ಮುರಿಯಿತು. ತೂತು ಬಿದ್ದ ಚಾದರದಿಂದ ಕೈತೂರಿ ಹೊರಗೆ ಬಂದಿತು. ಕೋಣೆಯ ನಾಲ್ಕೂ ಮೂಲೆ ಖಾಲಿ ಮಾಡಿ ಕಸಬರಿಗೆ ಆಡಿಸಿದಾಗ ಜೊಂಡಿಗ, ಹಲ್ಲಿಗಳು ಸರಸರ ಗೋಡೆ ಏರಿ ಹಂಚಿನಲ್ಲಿ ಸುರಕ್ಷಿತವಾದವು.

ಬೆಳಕು ಹರಿದಾಗಿನಿಂದ ವಟಗುಡುತ್ತ, ತನ್ನ ಕೋಣೆಯ ತಳ-ಬುಡವನ್ನೆಲ್ಲ ಹುಡುಕುತ್ತಿದ್ದ ಮಾನವ್ವ ಹೊತ್ತೇರಿ ಬಹಳ ಹೊತ್ತಾಗಿದೆ. ಮನೆ ಕೆಲಸಕ್ಕೆ ಹೋಗಬೇಕು ಎನ್ನುವುದು ಮರೆತು ತನ್ನ ಕೆಲಸದಲ್ಲಿಯೇ ಗರ್ಕಾಗಿದ್ದಳು. ಆದರೂ ಅವಳ ವಸ್ತು ಸಿಕ್ಕಿರಲಿಲ್ಲ. ಇಷ್ಟಕ್ಕೆ ಸೋಲಲು ತಾನು ಸಿದ್ಧಳಿಲ್ಲವೆನ್ನುವುದನ್ನು ಸಾರುವಂತೆ ಅವಳೀಗ ದನಿ ಎತ್ತಿದ್ದಳು.

“ನೀ ಒಳೇ ಗಂಟುಬಿದ್ದೀ ನನಗ ಬಿಕನಾಶಿ. ಕೂಲಿ ಇಲ್ಲಾ ಕುಂಬಳ ಇಲ್ಲಾ. ದುಡ್ಡು-ದುಗ್ಗಾಣಿ ದುಡಿಯಾಂಗಿಲ್ಲಾ. ತಾಳಿ ಕಟ್ಟಿದ್ದಟ ಖರೇವು. ಗಂಡ ಅಂತ ಗಂಡಾ. ಒನಕೀ ತುಂಡ ಆಗೀದಿ. ಅದರೆ ಉಪಯೋಗಕ್ಕೆ ಬಂದೀತು. ನೀ ಯಾತಕ್ಕೂ ಇಲ್ಲಾ. ಮದುವಿ ಆದಾಗಿಂದ ನಾನsa ದುಡೀಬೇಕು. ಮುಸುರಿ ತಿಕ್ಕಿ, ಅರಿವಿ ಹಿಂಡಿ, ನೆಲಾ ತೊಳದು ನನ್ನ ಕೈಯಾನ ನರಾ ಸಾಯುಕ ಹತ್ಯಾವ. ಮುಂಜಾಲಿಂದ ಚಂಜೀತನಾ ದುಡದು ತಂದು ಕೂಳ

ಕುದಿಸಿ ಇಟ್ಟಾಗ ಮುಕ್ಕಾಟಲೇ ಶಿನ್ನಾಕ ಬರತೀ. ತಿಂದು ಬಕಬಾರಲೀ ಬೀಳತೀ. ನೀ ಗಂಡಸೇನೋ. ಹೊಂಟೆದ್ದ ಹೋಗ್ ಅತ್ತಾಗ. ಅಣ್ಣಾ–ಅತಿಗಿ ಅಂತ ಭಾಳ ಬಡಕೊಂತಿ. ಯಾವಾಕಿ ಕೂಳ ಹಾಕ್ಯಾಳ ನಿನಗ ನೋಡತೇನಿ. ನೀ ಮನೀ ಬಿಟ್ಟ ಹೋಗಿಬಿಡು ನಿನ್ನಿಂದ ಏನೂ ಹರಕತ್ತಿಲ್ಲಾ. ಕೂಳು ದಂಡ ನಿನಗ. ಕಡದರ ನಾಕ ಆಳ ಆಗೂ ಹಾಂಗ ಅದೀ, ದುಡಿಯಾಕ ಬ್ಯಾಡಾ. ಹೇಣ್ತಿ ಮಕ್ಕಳ ಸುಕ–ದುಕ್ಕ ನೋಡಾಕ ಬ್ಯಾಡಾ. ಚೈನೀ ಬೇಕು ಚೈನೀ. ಬೀಡಿಗ ಸುದ್ದಾ ನನಗ ಕೈ ಒಡ್ಡತೀ ನಾಚಿಕಿ ಬರಾಂಗಿಲ್ಲ ನಿನಗ? ಮನ್ಯಾಗಿನ ಚಿಲ್ಲರ ರೊಕ್ಕ ಅಂತೂ ಎಲ್ಲಿ ಇಟ್ಟಲ್ಲೆ ಮಾಯ ಆಕ್ಕಾವ. ನನ್ನ ಮೂಗುತಿ ಎಲ್ಲಿ ಐತಿ ಹೇಳ ಈಗ. ಮನೀಯಂತ ಮನೀಎಲ್ಲಾ ಹುಡುಕಿದರೂ ಸಿಗವಾಲ್ದು. ನಿನ್ನೆ ರಾತ್ರಿನ್ಯಾಗ ಮೂಗಿನ್ಯಾಗ ಇತ್ತು. ಬೆಳಕ ಹರಿದಾಗ ಇಲ್ಲ ಅಂದರ ಅದು ಎಲ್ಲಿ ಬಿದ್ದ ಹೊಕ್ಕತಿ? ನನಗ ನಿದ್ದಿ ಹತ್ತಿದಾಗ ನೀನಃ ತಗದೀ. ನನಗ ಎಲ್ಲಾ ಗೊತ್ತೈತಿ. ನಿನ್ನ ಐದೇಶಿ ಬಲ್ಲೆ ನಾನು. ಕತ್ತಲದಾಗ ಎದ್ದಾಕಿ ರಾತ್ರಿ ಆದರೂ ನನ್ನ ಕೆಲಸ ಮುಗಿಯುವುದಿಲ್ಲ. ದುಡದು ದುಡದು ಮೈಮಾಲಿನ ಖಬರು ಇಲ್ಲದ ನೆಲಾ ಸಿಕ್ಕರ ಸಾಕಂತ ಕೊಡ್ಡ ಬಿದ್ದಾಂಗ ಬಿದ್ದಿರತೇನಿ. ನೀನಃ ನನ ಮೂಗುತಿ ಬಿಚಿಕೊಂಡೀದಿ ಹೌದಲ್ಲೊ ಆಣೀ ಮಾಡಿ ಹೇಳು, ಖರೇ ಹೇಳು. ನಿನ್ನ ಯಾವ ಗೆಣತಿಗೆ ಕೊಡಕ ಬಿಚಗೊಂಡೀ ಹೇಳು. ತ ತಾ ಇಲ್ಲೆ ಮೂಗುತಿ. ನನ್ನ ಕಣ್ಣ ತಪ್ಪಿಸಿ ಯಾವಾಕಿಗೆ ಕೊಟ್ಟರೂ ಆ ಬೋಸುಡಿ ಸೀರಿ ಕಳದು, ಮುಚ್ಚೀಲೆ ಬಡದು ಕಸಗೊಂಡ ಬರ್ತೀನಿ. ಹೇಳು."

ಈ ಹೊತ್ತಿನಲ್ಲಿ ಮಾನವ್ವನನ್ನು ಕೆಲಸಕ್ಕೆ ಕರೆದರೂ ಉಪಯೋಗವಿಲ್ಲವೆಂದು ತಿಳಿದ ಸುನಂದ ತನ್ನ ಅಡಿಗೆ ಕೋಣೆಯಿಂದಲೇ ಮಾನವ್ವನ ಅಸ್ತವ್ಯಸ್ತ ಕೋಣೆಯನ್ನು, ಒಂಟಿ ಯುದ್ಧವನ್ನು ನೋಡುತ್ತಿದ್ದಳು. ಅಶಿಕ್ಷಿತೆಯಾಗಿದ್ದರೂ ಸುಂದರ ಮನಸ್ಸಿನ ಮಾನವ್ವ ಬೇರೆ ಗಂಡಸರ ಮುಂದೆ ಮುಖ ಎತ್ತದೆ, ಮೈತುಂಬ ಸೆರಗು ಹೊದ್ದು, ತಲೆ ತಗ್ಗಿಸಿ ನೆಲ ನೋಡುತ್ತ, ಬದಿಗೆ ಸರಿದು ನಿಲ್ಲುವ ಹೆಂಗಸು. ಕಿವಿಯಿಂದ ಕೇಳಬಾರದ ಬಾಯಿಂದ ಬರಬಾರದ ಬೈಗುಳಗಳನ್ನೆಲ್ಲ ಸುರಿಸುತ್ತಿದ್ದ ಮಾನವ್ವನ ದುಃಖದ ಆಳವನ್ನು ಸುನಂದ ಚೆನ್ನಾಗಿ ಬಲ್ಲಳು. ಗುಡುಗಿನ ಹಿಂದೆ ಬರುವ ಮಳೆಯಂತೆ ನೆಲಕ್ಕೆ ಕೈ ಅಪ್ಪಳಿಸಿ ಶಪಿಸುತ್ತ ಮಾನವ್ವ ಈಗ ಅಳತೊಡಗಿದ್ದಳು.

"ಸಣ್ಣ ಮಗಳು ಸುಕದಿಂದ ಇರಲೆಂತ ಪಿರೀತಿಲೆ ನೋಕರದಾರಗ ನನ್ನ ಮದಿವೀ ಮಾಡಿಕೊಟ್ಟು ಮಣ್ಣಾಗಿ ಹ್ವಾದೆಲ್ಲ ಯವ್ವಾ. ಇವನಿಂದ ನಾ ಏನ ಸುಕಾ ಕಂಡ್ನೇ. ನೀ ಕೊಟ್ಟ ಬೆಳ್ಳೀ ಪಟ್ಟಿ, ಗುಂಡಿನ ಸರಾ, ಎಲ್ಲಾ ಇವನ ಹೆಣಕ್ಕ ಬಡದ್ನೇ ಯವ್ವಾಃ. ಈಗ ಮೂಗ್ತಿನೂ ಹೋತು. ನೋಕರಿ ಹ್ವಾದ ವ್ಯಾಲೆ ಕೂಳಿಗೆ ದಂಡ ಆಗ್ಯಾನ ಯವ್ವಾ. ಶೇಕೀ ಮದಿವಿ ನಾ ಹ್ಯಾಂಗ ಮಾಡಲೇ. ನಾ ದುಡದದ್ದು ಈ ಬ್ರಮರಾಕ್ಸಸಗ ಸಾಲೂದಿಲ್ಲ ಯವ್ವಾ. ಕಿಸೇದಾಗ ರೊಕ್ಕ ಇಲದಿದ್ರೂ ಇವಂದ ದಿಮಾಕ್ ಭಾಳ ಯವ್ವಾ. ಇವಂಗ ನಾ ಒಬ್ಬಾಕಿ ಸಾಲೂದಿಲ್ಲ. ಗೆಣತೇರಿಗೆ ಮಾಡ್ಯಾನ ಯವ್ವಾ. ನನ್ನ ಎಡ್ಡ ಗಂಡ ಮಕ್ಕಳ್ನೂ ಮಣ್ಣಾಗಿಟ್ಟು ನಾ ಬಂಜಿ ಆಗೀನಿ ಯವ್ವಾ."

ಗೇಟಿನ ಸಪ್ಪಳವಾಯಿತು. ಬಿಳಿ ದೋತರ, ಶರ್ಟ್, ಗಾಂಧಿ ಟೊಪ್ಪಿಗೆ ಯಿಂದ ಅಲಂಕೃತನಾದ ಕರೀಮೂರ್ತಿಯು ನಿಂಗಪ್ಪ ತುಟಿ ಪಿಟಿಕ್ಕೆನ್ನದೆ, ಸ್ಥಿತ ಪ್ರಜ್ಞನಂತೆ ಗಂಭೀರವಾಗಿ ಹೊರಗೆ ಹೋಗುತ್ತಿದ್ದ. ನಾಲ್ಕಾರು ವರುಷ ಗಳಿಂದ ಈ ಜೋಡಿ ಅಥವಾ ಇಜ್ಜೋಡಿಯ ದಾಂಪತ್ಯ ವೈಖರಿಯನ್ನು ಸಮೀಪದಿಂದ ನೋಡಿದ ಸುನಂದೆಗೆ ಈ ದೃಶ್ಯವೇನೂ ಹೊಸದಾಗಿರಲಿಲ್ಲ.

"ನಂದಾ, ಚಹಾ ಆತೇನು" ಕೇಳುತ್ತಾ ಅಡಿಗೆ ಮನೆಗೆ ಬಂದ ವಿಶ್ವನಾಥ ಸುನಂದೆಯ ಭುಜದ ಸುತ್ತ ಕೈಹಾಕಿ ಹತ್ತಿರ ಎಳೆದುಕೊಂಡು "ಇವತ್ತ ಮಾನವ್ವನ ಸುಪ್ರಭಾತಕ್ಕ ಎಚ್ಚರಾತು" ಎಂದು ನಕ್ಕ. ಅವನಿಗೆ ಅದೊಂದು ನಗುವ ವಿಷಯವೇ. ಸುನಂದೆಯ ಮನಸ್ಸಿಗೆ ಬೇಸರವಾದರೂ ತೋರಿಸಿ ಕೊಳ್ಳದೇ ಶುಭ್ರವಾಗಿ ಹೊಳೆಯುತ್ತಿದ್ದ ಗಂಡನ ತಂಪು ಕೆನ್ನೆಯ ಮೇಲೆ ಬೆರಳಾಡಿಸಿದಳು.

"ಪಾಪ! ಮಾನವ್ವಂದೂ ಒಂದು ಕಷ್ಟದ ಜೀವನಾ. ಬರೀ ಹೋರಾಟ. ಹಿಂದಿನ ಜನ್ಮದೊಳಗ ನನಗ ವಿಶ್ವಾಸ ಇಲ್ಲಾ ವಿಶೂ. ಆದರೂ ಒಮ್ಮೊಮ್ಮೆ ಇಂಥಾ ಒಳ್ಳೇ ಹೆಂಡತಿಗೆ ಅಂಥಾ ಗಂಡನ್ನ ದೇವರು ಯಾಕ ಗಂಟ ಹಾಕಿದ್ದಾನು. ಹೋದ ಜನ್ಮದೊಳಗ ಏನು ಪಾಪಾ ಮಾಡಿದ್ದಾಳು ಅನಸ್ತದ."

"ಸಿಲ್ಲಿ, ನೀವು ಹೆಂಗಸರು ಹಿಂಗಃ ವಿಚಾರ ಮಾಡ್ತೀರಿ. ಅವರ ಭವಿಷ್ಯ, ಸುಖಾ–ದುಃಖಾ ಎಲ್ಲಾ ಅವರ ಕೈಯೊಳಗ ಇರ್ತದ. ನನ್ನ ಕೇಳಿದರ ಆಕೀ ಗಂಡನ್ನ ಹೊರಗ ಹಾಕಬೇಕು. ಒದ್ದು ಹೊರಗ ಹಾಕಬೇಕು. ನೀ ಇಲ್ಲೆ

ಇರೂದು ಜರೂರಿಲ್ಲ. ಇರೂದ ಇದ್ದರ ಹೇಳಿದ್ದು ಕೇಳಿಕೊಂಡು ಬಿದ್ದಿರು ಅನಬೇಕು."

"ಇದು ಜೀವನಾ ವಿಶೂ. ಲಗ್ನಾ ಮಾಡಿಕೊಂಡ ವ್ಯಾಲೆ ಹೆಣ್ಣಿಗೆ ಅಳ ಕೋತ ಆದರೂ ಜೀವನಾ ಕಳೀಬೇಕಾಗತದ. ಹೋಗಿಬಿಡು ಅಂತ ಕೊಡಿವಿ ಕಳಿಸಾಕ ಅಂವಾ ಮೂಲ್ಯಾಗಿನ ಕಸಾ ಅಲ್ಲ, ಗಂಡ ಅದಾನ. ತಾಳೀ ಕಟ್ಟಿದಾಂವ ತನ್ನ ಹಕ್ಕು ಸಾಧಸತಾನ."

"ಸರಿಯಾಗಿ ಸಂಸಾರಾ ಮಾಡಿದರ ಅಂವಾ ಗಂಡ. ಇಲ್ಲಾಂದರ ಗುಂಡು ಕಲ್ಲು. ಆ ಒಜ್ಜೆ ಯಾಕ ಹೊರಬೇಕು ? ನಾ ದುಡದು ನಂದು, ಮಗಳ್ದು ಹೊಟ್ಟೀ ತುಂಬಿಸಿಕೋತೇನಿ. ನಿನಗ ಕೂಳು ಹಾಕೂದಿಲ್ಲ, ಹೋಗಿ ಬಿಡು ಅನಬೇಕು."

ಸಿಟ್ಟು ಬಂದಾಗ ಮಾನವ್ವ ಹೀಗೆ ಎಷ್ಟೋ ಸಲ ಹೇಳಿದ್ದನ್ನು ಸುನಂದೆ ಕೇಳಿದ್ದಳು. ಆದರೆ ಭಂಡ ನಿಂಗಪ್ಪ ಯಾವ ಎಗ್ಗಿಲ್ಲದೆ, ಅವಳ ಮಾತುಗಳನ್ನೆಲ್ಲ ಗಾಳಿಗೆ ತೂರಿ, ಅವಳ ಬಯ್ಗುಳಕ್ಕೆ ಬೆಲೆ ಕೊಡದೆ, ಇದ್ದ ರೊಟ್ಟಿಗಳನ್ನು ತಿಂದು ತಿರುಗಲು ಹೋಗುತ್ತಿದ್ದ. ಓದು ಬರಹ ತಿಳಿಯದ, ಬರೀ ಮೈಮುರಿ ದುಡಿತವನ್ನೇ ತಿಳಿದಿದ್ದ ಅಮಾಯಕ ಮಾನವ್ವ ತಾನಿಲ್ಲದೆ ಬಾಳಲಾರಳು ಎನ್ನುವ ಗುಟ್ಟನ್ನು ಆ ಪುಂಡ ಗಂಡ ಚೆನ್ನಾಗಿ ತಿಳಿದುಕೊಂಡಿದ್ದ.

ವಿಚಾರ ಮಾಡುತ್ತ ಸುನಂದ ಗಂಡನನ್ನು ಕೂಗಿದಳು. "ವಿಶೂ, ಲಗೂನ ಬಾ, ವಿಶಾಲನ್ನ ಸಾಲಿಗೆ ಬಿಟ್ಟು ನೀನು ಆಫೀಸಿಗೆ ಹೋಗಬೇಕು. ತಿಂಡಿ ತೊಗೊಂಡು ತಯಾರಾಗು."

ಸುನಂದೆಯ ಮುಖ ಗಂಭೀರವಾಗಿದ್ದರೆ ವಿಶ್ವನಾಥನಿಗೆ ಅಸಮಾಧಾನ. ಅವಳು ಈಗಲೂ–ಎರಡು ಮಕ್ಕಳ ತಾಯಿಯಾದ ಮೇಲೂ–ನಗುತ್ತ ಅವನ ಹಿಂದೆ ಮುಂದೆ ಸುತ್ತುತ್ತ ಇರಬೇಕು. ತಾನು ಅವಳನ್ನು ಮುದ್ದು ಮಾಡುತ್ತಾ ಇರಬೇಕು. ಸಮಸ್ಯೆಗಳನ್ನು ತಲೆಯಲ್ಲಿ ಇಟ್ಟುಕೊಂಡರೆ ತಲೆ ಬಿಸಿಯಾಗುತ್ತದೆ. ಸಾಧ್ಯವಿದ್ದಷ್ಟು ಬೇಗ ಅದಕ್ಕೆ ಪರಿಹಾರ ಹುಡುಕಬೇಕು; ಇಲ್ಲವಾದರೆ ಅದರ ಬಗ್ಗೆ ಯೋಚಿಸಲೇಬಾರದು. ಜೀವನ ಇರುವದೇ ಎಂಜಾಯ್ ಮಾಡಲಿಕ್ಕೆ. ಅದು ಬಿಟ್ಟು ತಮಗೆ ಸಂಬಂಧವಿಲ್ಲದ

ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳುವದಕ್ಕಲ್ಲ ಎನ್ನುವದೇ ವಿಶೂನ ಜೀವನ ಸಿದ್ಧಾಂತ. ಅದನ್ನೇ ಮತ್ತೊಮ್ಮೆ ಸುನಂದೆಗೆ ಹೇಳಿದ.

" 'ಪರ ಚಿಂತೆ ಎಮಗೆ ಏಕೆ ಅಯ್ಯಾ' ಅಂತ ಬಸವಣ್ಣನವರು ವಚನಾ ಹೇಳ್ಯಾರಲ್ಲ. ಭಾಳ ಒಳ್ಳೇ ಮಾತು. ಮಾನವ್ವ–ನಿಂಗಪ್ಪ ಜಗಳಾ ಆಡಿದರಂತ. ನೀ ಯಾಕ ಮಾರೀ ಕೆಟ್ಟ ಮಾಡತೀ. ಹಗಲೆಲ್ಲಾ ಇವರ ಜಗಳಾ ಕೇಳಲಿಕ್ಕೆ ಆಗೂದಿಲ್ಲ. ಆಕೀಗೆ ನಿಂಗಪ್ಪನ ಕೂಡ ಸಂಸಾರಾ ಮಾಡಲಿಕ್ಕೆ ಸಾಧ್ಯ ಆಗದಿದ್ದರ ಸೋಡಚೀಟಿ ಕೊಟ್ಟು ಬಿಡು ಅನ್ನು. ಒಮ್ಮೆ ನಿಕಾಲಿ ಆಗಿ ಹೋಗ್ತದ. ನಾನು ಆಫೀಸಿಗೆ ಈಗ ಹೋದಾಂವ ಸಂಜಿಗೆ ಬರ್ತೀನಿ. ನಾ ಹೊರಗ ಹೊರಡೂ ಮುಂದ ಹಿಂಗ ಅಳಮಾರಿ ಮಾಡಬ್ಯಾಡಾ. ನಗನಗ್ತಾ ಇರೂ."

ವಿಶ್ವನಾಥ ಒಳ್ಳೆಯ ಗಂಡ ಹೌದು. ಆದರೆ ಸ್ವಾರ್ಥಿ. ಯಾವಾಗಲೂ ನಗ್ತಾ ಇರಬೇಕಂತೆ. ಅದು ಹೇಗೆ ಸಾಧ್ಯ ? ನಾನೇನೂ ಯಂತ್ರ ಅಲ್ಲವಲ್ಲ. ನನಗೂ ಭಾವನೆಗಳಿವೆ. ವಿಚಾರಗಳಿವೆ. ಸಂವೇದನೆಗಳಿವೆ. ಹೊರ ಜಗತ್ತಿಗೆ ಕಣ್ಣು, ಕಿವಿ ಮುಚ್ಚಿಟ್ಟುಕೊಂಡು ತನ್ನನ್ನು, ತನ್ನ ಮನೆಯನ್ನು ಮಾತ್ರ ನೋಡಿಕೊಂಡಿರಬೇಕು ಅನ್ನೋದು ಸ್ವಾರ್ಥದ ಪರಮಾವಧಿ. ಸುನಂದ ಅವನ ಆಲೋಚನೆಯ ರೀತಿಯನ್ನೇ ಮೆದುವಾಗಿ ಪ್ರಶ್ನಿಸಿದಳು.

"ವಿಶೂ. ನೀ ಹೇಳೋದು ಒಂದು ರೀತಿ ಖರೇ. ಆದರ ನಾನೂ ಬರೇ ಮಾನವ್ವನ ಬಗ್ಗೇನೆ ವಿಚಾರ ಮಾಡೂದಿಲ್ಲ. ಗಂಡನಿಂದ ಶೋಷಿತರಾಗುವ ಎಲ್ಲ ಹೆಣ್ಣುಗಳ ಬಗ್ಗೆ ವಿಚಾರ ಮಾಡ್ತೀನಿ. ಅವರ ಸಮಸ್ಯೆಗಳನ್ನು ತಿಳಿದು ಕೊಳ್ಳೋದಕ್ಕ ಪ್ರಯತ್ನಪಡ್ತೀನಿ. ಸಮಾಜಶಾಸ್ತ್ರ ಓದಿರೋದರಿಂದ ಈ ಸಮಸ್ಯೆಯ ಆಳ ನನಗ ಅರ್ಥ ಆಗ್ತದ. ಆದರ ಇದಕ್ಕ ಡೈವೋರ್ಸನ ಪರಿಹಾರ ಅನ್ನೂದು ತಪ್ಪು. ಈಗ ನೀನs ನೋಡು. ನಿನ್ನ ದೊಡ್ಡಮ್ಮನ ಮಗಳು ಕುಮುದಿನಿ ಅದಾಳಲ್ಲ. ಗ್ರಾಜುಯೇಟ್ ಆಗಿ ನೌಕರಿ ಮಾಡ್ತಾಳ. ಆಕೀಗೆ ಗಂಡ, ಮಾವ ಬಹಾಳ ತ್ರಾಸ ಕೊಡ್ತಾರಲ್ಲ. ಆಕೀಗೆ ಯಾಕ ಗಂಡನ್ನ ಡೈವೋರ್ಸ ಮಾಡಲಿಕ್ಕೆ ನೀನು ಸಲಹಾ ಕೊಡೂದಿಲ್ಲಾ. ಆರ್ಥಿಕವಾಗಿ ಸ್ವತಂತ್ರ ಇದ್ದಾಳ. ಗಂಡನ್ನ ಬಿಟ್ಟು ಬಿಡಬಹುದಲ್ಲಾ."

"ನಂದಾ ಛೀ ಛೀ. ನೀ ಸಮಸ್ಯೆಯನ್ನ ಸರಿಯಾಗಿ ಅರ್ಥಾ ಮಾಡಿ ಕೊಳ್ಳುದಿಲ್ಲಾ ಸುಮ್ಮನ ಮಾತಾಡ್ತಿ. ಕುಮುದಿನಿ ಯಾರು ? ಮಾನವ್ವ

ಯಾರು ? .... ಕಸಬರಿಗೆ ಹಿಡಿದು ಒಳಬರುತ್ತಿದ್ದ ಮಾನವ್ವನನ್ನು ನೋಡಿ ಮಾತು ನಿಲ್ಲಿಸಿ ಶೂಸಿನ ಲೇಸು ಕಟ್ಟಿಕೊಂಡು ವಿಶ್ವನಾಥ ಎದ್ದುಹೋದ.

ಸುನಂದೆ ಕೊಟ್ಟ ಚಹ ಕುಡಿಯುತ್ತ ಮಾನವ್ವ ಮತ್ತೊಮ್ಮೆ ಮೂಗು ಸೀಟುತ್ತ ಕಣ್ಣೀರು ಹರಿಸಿದಳು. "ನಮ್ಮವ್ವ ಸಾಯೂ ಮುಂದ ನನ್ನ ಸಣ್ಣ ಮಗಳಿಗೆ ಮೂಗುತಿ ಕೊಡ್ರಿ ಅಂತ್ಹೇಳಿ ಅಣ್ಣ–ಅತ್ತಿಗಿಗೆ ಕೆಟ್ಟ ಆಗಿ ನನಗ ಕೊಟ್ಟಳ್ರಿ, ಅವ್ವಾರ. ಈಗ ಅದನ್ನೂ ನುಂಗಿ ನೀರು ಕುಡದಾ."

ಮಾನವ್ವನ ಮೂಗುತಿಯೆಂದರೆ ಸುನಂದೆಗೇನೂ ಹೊಸ ವಸ್ತುವಲ್ಲ. ಜೋಳದ ಕಾಳಿನಷ್ಟು ದೊಡ್ಡ ಒಳ್ಳೆಯ ಮುತ್ತಿನ ಮೂಗುತಿ. ಬಂಗಾರದ್ದು. ಅಂಥದನ್ನು ಮಾಡಿಸಲು ಈ ದಿನಗಳಲ್ಲಿ ಐದಾರು ನೂರು ರೂಪಾಯಿ ಬೇಕಾದೀತು. ಭದ್ರವಿಲ್ಲದ ಕೋಣೆ, ಕೈ ಶುದ್ಧ ಇಲ್ಲದ ಗಂಡ. ಪಾಪ, ಮಾನವ್ವ ಏನು ಮಾಡಿಯಾಳು ? ಅವ್ವ ಕೊಟ್ಟ ಆಸ್ತಿಯನ್ನು ಜೋಪಾನವಾಗಿಟ್ಟುಕೊಳ್ಳಲು ಸುನಂದೆಯ ಕೈಯಲ್ಲಿಯೇ ಕೊಟ್ಟಿದ್ದಳು. ತಾನು ಮಾತ್ರ ಸಂತೆಯಲ್ಲಿ ಜೋಗೇರ ಹತ್ತಿರ ಕೊಂಡ ಕೆಂಪುಹರಳಿನ ಮೂಗುಬೊಟ್ಟು ಇಟ್ಟುಕೊಂಡು 'ನಾಳೆ ನಮ್ಮ ಶೇಕವ್ವನ ಮದುವ್ಯಾಗ ಮೂಗುತಿ ಆಕೀಗೆ ಕೊಡ್ತೀನಿ' ಎಂದು ಹಿಗ್ಗುತ್ತಿದ್ದಳು.

ಒಂದೆರಡು ತಿಂಗಳ ಹಿಂದೆ ಶೇಕವ್ವ ಮೈನೆರೆದಾಗ ಇದ್ದೊಬ್ಬ ಮಗಳ ಸಡಗರ ನೋಡಲು ಮಾನವ್ವ ಅವಳನ್ನು ಐದು ದಿನ ಕೂಡ್ರಿಸಿ ಆರತಿ ಮಾಡಿದಳು. ಕೆಲಸ ಮಾಡುವ ಮನೆಗಳಲ್ಲಿ ಕೈಗಡ ತಂದು ಮಗಳಿಗೆ ಸೀರೆ, ಕುಬಸ, ಉತ್ತತ್ತಿ, ಕೊಬ್ಬರಿ–ಬೆಲ್ಲ ತರಿಸಿದ್ದಳು. ತಂದು ಕೊಟ್ಟವನು ನಿಂಗಪ್ಪನೇ. ತನ್ನ ಹೊಟೇಲ್ ಖರ್ಚು, ಬಸ್ಸು, ಬೀಡಿ ಎಂದು ಅವಳಿಂದ ಹತ್ತಿಪ್ಪತ್ತು ರೂಪಾಯಿ ಹೆಚ್ಚಿಗೆ ಕಿತ್ತಿದ್ದ. ತನ್ನ ಮನೆಯ ಶುಭ ಕಾರ್ಯಕ್ಕೆ ಹಳ್ಳಿಯಿಂದ ಬಳಗವನ್ನೂ ಕರೆಸಿದ್ದಳು. ಆಗ ಸುನಂದೆಯೇ ಶೇಕವ್ವನಿಗೆ ಹಾಕಲು ಮೂಗುತಿ ತೆಗೆದು ಕೊಟ್ಟಿದ್ದಳು. ಶೇಕವ್ವನ ಮೇಲೆ ಹುಟ್ಟಿದ ಎರಡೂ ಗಂಡು ಮಕ್ಕಳು ಸತ್ತು ಹುಟ್ಟಿದ್ದವಂತೆ. ಅವಳಿಗೆ ಇನ್ನು ಮಕ್ಕಳೇ ಬೇಡವೆಂದು ಡಾಕ್ಟರರೇ ತೀರ್ಮಾನಿಸಿ ಆಪರೇಷನ್ ಮಾಡಿದ್ದರು. ಅವನ್ನು ನೆನೆಸಿ ಸುನಂದೆಯ ಮುಂದೆ ಆಗಾಗ ಕಣ್ಣೀರು ಹಾಕುತ್ತಿದ್ದಳು ಮಾನವ್ವ. ಈಗಂತೂ

ಶೇಕವ್ವನೇ ಅವಳಿಗೆ ಗಂಡು-ಹೆಣ್ಣು ಎಲ್ಲಾ. ಅವಳಿಗೆ ಸಾಲೆ ಕಲಿಸಿ ಒಳ್ಳೆಯ ವರನಿಗೆ ಕೊಟ್ಟು ಮದುವೆ ಮಾಡುವುದೇ ಅವಳ ಜೀವನದ ಗುರಿ.

ಮಗಳು ದೊಡ್ಡವಳಾದ ದಿನದಿಂದ ನಿಂಗಪ್ಪನಿಗೆ ವರ ಹುಡುಕಲು ಹೇಳಿದ ಮಾನವ್ವ, ಮದುವೆಯಾದ ಮೇಲೆ ಮಗಳೊಡನೆ ಮೂಗುತಿಯು ಹೋಗುವದೆಂದು ತಿಳಿದು ತಾನೊಂದಿಷ್ಟು ದಿನ ಇಟ್ಟುಕೊಂಡು ಅಕ್ಕರತೆ ಮುಗಿಸಿಕೊಳ್ಳಲು ಬಯಸಿದ್ದಳು. ಅಂಥ ಮೂಗುತಿಯೇ ಮಾಯ ವಾಗಿದೆಯಲ್ಲ !

ಒಂದು ದಿನ ಸುನಂದೆಯ ಬಳಿಗೆ ಬಂದು ಮಾನವ್ವ ಬ್ಯಾಂಕ್ ಪಾಸ್ ಬುಕ್ ತೋರಿಸಿದಳು. ಎಂಥ ಸಾಹಸಿ ಈ ಹಳ್ಳಿ ಹೆಣ್ಣು ಎಂದು ಅಚ್ಚರಿ ಸುನಂದೆಗೆ. 'ಅವ್ವಾರ ಶೇಕವ್ವನ ಮದುವಿಗೆ ರೊಕ್ಕಾ ಕೂಡಸಾಕ ಹತ್ತೇನ್ರಿ. ತಿಂಗಳಾ ಇಪ್ಪತ್ತು ರೂಪಾಯಿ ಪಿರ್ಯಾನ ಹೋಗಿ ತುಂಬಿ ಬರತಾನ್ರಿ. ಒಂದೀಟು ಲೆಕ್ಕ ಏಟ ಆಗೇತಿ ನೋಡ್ರಿ.'

ಪಾಸ್‌ಬುಕ್ ನೋಡಿದಾಗ ಸುನಂದೆಯ ಮನಸ್ಸಿಗೆ ಪಿಚ್ಚೆನಿಸಿತು. ಅವಳು ಹೇಳಿದ ಲೆಕ್ಕಕ್ಕಿಂತ ಐವತ್ತು ರೂಪಾಯಿ ಕಡಿಮೆ ಇದ್ದವು. ನಿಂಗಪ್ಪ ಇಲ್ಲೂ ತನ್ನ ಕೈಚಳಕ ತೋರಿಸಿದ್ದ. ತಾನು ಅವಳಿಗೆ ಯಾವ ರೀತಿ ತಾನೇ ಸಹಾಯ ಮಾಡಬಲ್ಲಳು. 'ನಿನಗೆ ಬೇಕಾದರೆ ಇನ್ನೂ ಐದ್ವತ್ತು ರೂಪಾಯಿ ಹೆಚ್ಚಿಗೆ ಸಂಬಳ ಕೊಡು. ಸೀರೆ, ಕುಪ್ಪಸ, ಚಹ, ತಿಂಡಿ ಅಂತೂ ಕೊಟ್ಟೇ ಕೊಡುತ್ತೀ. ಇದಕ್ಕೂ ಹೆಚ್ಚಿಗೆ ಏನೂ ಹಚ್ಚಿಕೊಳ್ಳಲು ಹೋಗಬೇಡ' ಎಂದು ವಿಶ್ವನಾಥ ತನಗೆ ಮೊದಲೇ ಎಚ್ಚರಿಸಿದ್ದ. ಸಿಟ್ಟು ಬಂದರೆ ಅವರಿಗೆ ಕೋಣೆ ಬಿಟ್ಟು ಹೋಗಲು ಗಂಡ ಹೇಳುವವನೇ. ತನ್ನ ಗಂಡನನ್ನು ಶಪಿಸುತ್ತ, ಅಳುತ್ತ ಹೊರಟ ಮಾನವ್ವನಿಗೆ ಹೇಗೆ ಸಮಾಧಾನ ಹೇಳಬೇಕೆನ್ನುವದು ತಿಳಿ ಯದೆ ಮಂಕಾದಳು ಸುನಂದೆ.

ತಮ್ಮ ಕೋಣೆಯ ಕೀಲಿ ಹಾಕಿದ್ದರಿಂದ ಶಾಲೆಯಿಂದ ಬಂದ ಶೇಕವ್ವ ಸುನಂದೆಯೊಡನೆ ಅಕ್ಕಿ ಆರಿಸುತ್ತ ಕುಳಿತವಳು ಗೇಟಿನತ್ತ ನೋಡಿ 'ಅವ್ವ ಬಂದಳ್ರಿ' ಎನ್ನುತ್ತ ಓಡಿದಳು. ಮಾನವ್ವನ ಆಕಾರ ಕಂಡು ಗಾಬರಿಯಿಂದ ಸುನಂದೆಗೆ ಮಾತೇ ಹೊರಡಲಿಲ್ಲ. ಅವಳ ಮೈಮೇಲಿನ ಸೀರೆ, ಕುಪ್ಪಸಗಳು ಅಲ್ಲಲ್ಲಿ ಹರಿದಿದ್ದವು. ತುರುಬು ಬಿಚ್ಚಿ ಕೂದಲು ಹಾರಾಡುತ್ತಿದ್ದವು.

ಮುಖ, ಕೈಗಳ ಮೇಲಾದ ಗೀರು ಗಾಯಗಳಿಂದ ರಕ್ತ ಒಸರುತ್ತಿತ್ತು. ಒಂದು ಕೈಯಲ್ಲಿ ಚಪ್ಪಲಿ ಇತ್ತು. ಎದೆಯ ಮೇಲಿನ ಸೆರಗಿನ ಖಬರು ಇರಲಿಲ್ಲ. ಮುಖ ಸಿಟ್ಟಿನಿಂದ ಕೆಂಪಾಗಿ ಉರಿಯುತ್ತಿತ್ತು. ಶೇಕವ್ವನನ್ನು ತಬ್ಬಿಕೊಂಡು ನೆಲಕ್ಕೆ ಕುಳಿತು ಅಳ ಹತ್ತಿದಳು ಮಾನವ್ವ. ಅವಳ ದುಃಖ ಹರಿದು ಹೋಗುವ ವರೆಗೆ ತುಟಿ ಎರಡು ಮಾಡದೆ ಸುನಂದೆ ಸುಮ್ಮನೆ ನೋಡುತ್ತಿದ್ದಳು.

"ಆ ಬೋಸುಡಿ ಕಡಿಗೂ ನನ ಮೂಗ್ತಿ ಕೊಡಲೇ ಇಲ್ರೀ ಅವ್ವಾರ."

"ಏನಿದು ? ಯಾರು ಆಕಿ ?" ನಾಲ್ಕಾರು ತಿಂಗಳ ಹಿಂದೆ ಕಳೆದುಹೋದ ಮೂಗುತಿಯ ವಿಷಯ ಮತ್ತೆ ಬಂದಾಗ ಸುನಂದೆಯ ಕುತೂಹಲ ಹೆಚ್ಚಿತು.

"ಈ ಊರ ಭಾಡ್ಯಾ ನನ್ನ ಮೂಗ್ತಿ ಬಿಚಿಗೊಂಡು ಆಕೀಗೆ ಕೊಟ್ಟಿದ್ದಾನು ಅನ್ನೂ ಸಂಶೀ ನನಗ ಇತ್ರಿ ಅವ್ವಾರ. ಇವತ್ತ ಚಿನ್ನವ್ವ ಹೇಳಿದ್ಳು. ಆ ಮಲ್ಲಿ ನಿನ್ನ ಮೂಗಿನ್ಯಾಗಿಂದು ಇಟಕೊಂಡಾಳ ಅಂತ."

"ಮುಂದ ? ನೀ ಆಕೀ ಕೂಡ ಜಗಳಾ ಮಾಡಿದೇನ ?"

"ಮತ್ತ ಕೇಳಿ ಸುಮ್ಮನ ಇರಲೇನ್ರಿ. ಹಾಲು ಕೊಡೂ ಬಸಪ್ಪನ ತಂಗಿರಿ ಆಕಿ. ಪೋಸ್ಟಿನ ಹಂತ್ಯಾಕ ಐತ್ರಿ ಅವರ್ಮನಿ. ಆಕೀ ಕಟಿಗ್ಗ ಹೋಗೂ ಮುಂದ ಬರೂಮುಂದ ಹಾದ್ಯಾಗ ಕುಂತಿರತಾನಲ್ರಿ ಇವಂಗ ಗಂಟು ಬಿದ್ದಾಳ್ರಿ. ಆ ಮನಿಹಾಳ ಮೂಳಿ."

"ಆಕೀನ ಎಂದೂ ನಮ್ಮ ಕಂಪೌಂಡಿನ್ಯಾಗ ನೋಡಿಲ್ಲಾ. ಆಕಿ ಹ್ಯಾಂಗ ಬಂದು ಗಂಟು ಬಿದ್ದಳು ನಿಂಗಪ್ಪಗ" ಸುನಂದೆ ಛೇಡಿಸಿದಳು.

ಕಣ್ಣೀರಿನಲ್ಲೇ ನಗುತ್ತ ಮಾನವ್ವ "ಚ್ಯಾಷ್ಟಿ ಮಾಡ್ತಿರೇನ್ರಿ ಅವ್ವಾರ. ಇದಃ ನಮ್ಮ ಮೂಳ ಹೊಕ್ಕತ್ರಿ ಆಕಿ ಹಂತ್ಯಾಕ. ಗಂಡಸರ ಕಚ್ಚಿ ಬದ್ರ ಇರೊದಿಲ್ಲ ಬಿಡ್ರಿ. ಆದರ ಆಕಿ ಮುಕ್ಕಾಟಲೆ ಮಾನವಂತಿ ಆಗಿ ಇರಬೇಕಲ್ರಿ."

ಸುನಂದೆಯ ಕುತೂಹಲ ವಿಚಿತ್ರ ಭಯಕ್ಕೆ ತಿರುಗುತ್ತಿತ್ತು. ತನ್ನ ಗಂಡ ಬೇರೆ ಹೆಣ್ಣಿನ ಸಂಗ ಮಾಡಿದರೆ ಕ್ಷಮಿಸಬಲ್ಲಳು ಮಾನವ್ವ. ಆದರೆ ಗಂಡನಿಲ್ಲದ ಮಲ್ಲಿ ಮಾಡಿದ್ದು ಮಾತ್ರ ಮಾನಗೇಡಿಯ ಕೆಲಸ. ನಿಂಗಪ್ಪನನ್ನು ದೂರವಿಟ್ಟು ನಿನ್ನ ವಸ್ತು ನೀನು ತೆಗೆದುಕೋ ಎಂದು ಇವಳ ಮನೆಗೆ ತಂದು ಒಪ್ಪಿಸಬೇಕಾಗಿತ್ತೇನೋ ಮಾನವ್ವನಿಗೆ. ತಪ್ಪು ಮಾಡಿದ್ದು ಗಂಡಸಾದರೋ ಹೆಣ್ಣು ಇನ್ನೊಂದು ಹೆಣ್ಣನ್ನೇ ದೂರಬೇಕೇ ? ಅವಳ ಬಗ್ಗೆ ಸಹಾನುಭೂತಿ

ಅವಳಲ್ಲಿ ಹುಟ್ಟದೇ ? ಸುನಂದೆಯು ಒಡಲೊಳಗೆ ಒಂದು ನೋವು ಹುಟ್ಟಿತು. ಅದಕ್ಕೆ ರೆಕ್ಕೆ–ಪುಕ್ಕಗಳೂ ಮೂಡಿಕೊಂಡು ಚಿತ್ರವಾಯಿತು.

ಮೂರ್‍ನಾಲ್ಕು ವರ್ಷಗಳ ಹಿಂದೆ ಸಂಗೀತಳು ಬಸಿರಿನಲ್ಲಿದ್ದಾಗಿನ ಮಾತು. ಅಗಸನಿಗೆ ಕೊಡಲೆಂದು ಗಂಡನ ಪ್ಯಾಂಟು–ಶರ್ಟು ಖಾಲಿ ಮಾಡುತ್ತಿದ್ದ ಸುನಂದೆಯ ಕೈಗೊಂದು ಪತ್ರ ಸಿಕ್ಕಿತು. ಅವರ ಆಫೀಸಿನ ಹುಡುಗಿಯೊಬ್ಬಳು ಬರೆದದ್ದು. ವಿಶ್ವನಾಥ ಟೂರಿಗೆ ಹೋಗಿದ್ದ ಸಮಯದಲ್ಲಿ ಅಲ್ಲಿ ಅವಳ ತಂದೆಗೆ ಹುಷಾರಿಲ್ಲದಾಗ ಇವನು ಸಹಾಯ ಮಾಡಿದ್ದ. ಕೃತಜ್ಞತೆ ಸಲ್ಲಿಸಿ ಇನ್ನೊಮ್ಮೆ ಬಂದಾಗ ಖಂಡಿತ ತಮ್ಮ ಮನೆಗೆ ಬರಬೇಕೆಂದು ಬರೆದಿದ್ದಳು.

ಮಾತೇನೋ ಸಣ್ಣದು. ಆದರೂ ಸುನಂದೆಗೆ ಏಕೋ ಸಂಕಟವಾಗಿತ್ತು. ಪತ್ರ ಬಂದಾಗ ಇವಳಿಗೆ ತೋರಿಸಿ ಆ ಹುಡುಗಿಯ ವಿಷಯ ಹೇಳಿಬಿಟ್ಟಿದ್ದರೆ ನಿರುಂಬಳವಾಗುತ್ತಿತ್ತು. ಇವಳಾಗಿಯೇ ಕೇಳಿದಾಗ ಮರೆತು ಬಿಟ್ಟಿದ್ದೆ. ಅದೇನು ದೊಡ್ಡ ವಿಷಯ ಅಲ್ಲ. ಅದನ್ನು ಬೆಳೆಸಬೇಡ ಎಂದು ದನಿ ಏರಿಸಿ ಮಾತನಾಡಿದ್ದ ವಿಶ್ವನಾಥ. ಆ ಮಾತಿನ ಹಿಂದೆ ನಾನೇನು ಮಾಡಿದರೂ ಪ್ರಶ್ನಿಸಲು ನೀನಾರು ಎನ್ನುವ ಧ್ವನಿ ಇತ್ತು. ಇವಳೂ ಕೂಗಾಡಿ ಮಾತು ಬಿಟ್ಟು ತವರು ಮನೆಗೆ ಹೊರಟು ಹೋಗಿದ್ದಳು. ಆದರೆ ಮುಂದೆ ಆದದ್ದೇನು ? ಮಗಳು ಹುಟ್ಟಿದ ಮೇಲೆ ಕರೆಯಲು ಬಂದ ಗಂಡನೊಡನೆ ಸುಮ್ಮನೆ ಬಂದುಬಿಟ್ಟಿದ್ದಳು. ಆದರೆ ಆ ನೋವು ಬೆರಳಾಡಿಸುತ್ತ ಇರುತ್ತಿತ್ತು.

"ಅವ್ವಾರ ಇರಲಿ ಬಿಡ್ರಿ. ಅಳತೀರ್‍ಯಾಕ"

ವಿಶ್ವನಾಥ ಹೇಳುವ ಹಾಗೆ ತಾನು ಅಗತ್ಯಕ್ಕಿಂತ ಹೆಚ್ಚು ವಿಚಾರ ಮಾಡುತ್ತಿದ್ದೇನೆ ಎಂದುಕೊಂಡು ನಕ್ಕಳು ಸುನಂದೆ. "ಮುಂದ ಏನಾತು ?"

"ನನ್ನ ಮೂಗುತಿ ತಿರಗಿ ಕೊಡು ಅಂತ ಮಲ್ಲಿಗೆ ಕೇಳಿದ್ನಿ. ಆಕಿ ಹೊಯ್ಮಾಲಿ. ಹಾಂಗ ಕೊಟ್ಟಾಳ್ರಿ. ನಿನ್ನ ಗಂಡನ್ನ ಕೇಳ ನನಗ್ಗೊತ್ತಿಲ್ಲ ಅಂದು ಹೊಂಟಳ್ರಿ. ನಾ ಯಾಕ ಬಿಡಲಿ. ತುರುಬು ಹಿಡದು ಜಗ್ಗಿ ಪಟಾ ಪಟಾ ಬಡದಿನ್ರಿ. ಆಕೀನೂ ನಾಕ ಏಟ ಬಡಿದು ನನ್ನ ಸೀರಿ, ಕುಬಸಾ ಹರದಳ್ರಿ. ಮೂಗತೀ ಜಗ್ಗಾಕ ಹೋದೆ ಸಿಗಲಿಲ್ಲಾ. ಮೂಗ ಕಡದಿನ್ರಿ. ಲಬಾ ಲಬಾ ಹೊಯ್ಕೊಂಡಳ್ರಿ. ಹೊಟ್ಟ್ಯಾಗಿನ ಸಂಕಟಕ ಕಾಲಾಗಿಂದು ತೊಗೊಂಡು

ಬಾರಿಸಿದಿನ್ರಿ. ಬಸರ ಹೆಣಮಗಳ್ರಿ, ಏನಾರ ಆದೀತು ಅಂತ ಓಣ್ಯಾನ್ನವರು ಬಂದು ಬಿಡಿಸಿದ್ರಿ. ಆದರೂ ನನ್ನ ಮೂಗತಿ ಸಿಗಲಿಲ್ಲಾ."

"ನಿಂಗಪ್ಪ ಇದ್ನೇನ ಅಲ್ಲೆ ?"

"ಅಂವಾ ಯಾಕ ಸಾಯಾಕ ಬರತಾನ್ರಿ ಅಲ್ಲೆ. ಎಲ್ಲಿ ಹೋಗ್ಯಾನೋ ಎಡ್ಡ ದಿನಾ ಆತು ಮನೀಗೆ ಬಂದಿಲ್ಲಾ. ಸಂತೀನೂ ಮಾಡಿಲ್ರಿ. ನಡೀ ಶೇಕೂ, ಒಲಿ ಹೊತ್ತಸು. ಹಸದಿದ್ದೀ. ಒಂದೀಟ ರೇಶನ್ ಅಕ್ಕಿ ಅದಾವ ಹಾಕ್ತೀನಿ." ಮಾನವ್ವ ಎದ್ದಳು.

*　　　*　　　*

"ನಿಮ್ಮ ಮನೀ ಹಿಂದಿನ ಕ್ವಾಣೆ ಕೊಡ್ತೀರೇನ್ರಿ ನಮಗ ಇರಾಕ." ಒಂದು ಸಂಜೆ ನಿಂಗಪ್ಪ ಬಂದು ಕೇಳಿದ್ದ. ಮಾನವ್ವ ಅವನ ಹಿಂದೆ ನಿಂತಿದ್ದಳು. "ನನ್ನ ಹೆಣ್ತಿ ನಿಮ್ಮ ಮನೀ ಕಸಾ–ಮುಸರಿ ಮಾಡ್ತಾಳು. ಹೇಳಿದ್ದ ಕೆಲ್ಸಾ ಮಾಡ್ತಾಳು. ಕೊಟ್ಟರ ನಿಮ್ಮ ಉಪಕಾರ ಭಾಳ ಆಕ್ಕತಿ. ನಾವು ಇದ್ದ ಕ್ವಾಣಿ ಮುನಸಿಪಾಲಿಟಿಯವರು ಕೆಡವತಾರ್ರಿ. ಇರಾಕ ಜಾಗಾ ಇಲ್ಲ ನಮಗ." ನಿಂಗಪ್ಪ ವಿನಯದಿಂದ ಬೇಡಿಕೊಂಡಿದ್ದ. ಒಳ್ಳೆಯ ಕೆಲಸದವರು ಸಿಗದೆ ಪರದಾಡುತ್ತಿದ್ದ ವಿಶ್ವನಾಥ–ಸುನಂದೆಯರು ಒಂದೆರಡು ದಿನ ವಿಚಾರ ಮಾಡಿ ಒಪ್ಪಿಗೆ ಕೊಟ್ಟಿದ್ದರು. ಬರಬರುತ್ತ ಅವರ ಸಂಸಾರದ ಸಂದಿಗೊಂದಿಗಳೆಲ್ಲ ಪರಿಚಯವಾಗಿದ್ದವು. ಹತ್ತು ಹನ್ನೆರಡು ವರುಷಗಳ ಹಿಂದೆ ವಾಚ್‌ಮನ್ ಆಗಿದ್ದ ನಿಂಗಪ್ಪ ಹೆಣ್ಣಾಳನ್ನು ಕೆಣಕಿ ಕೂಲಿಯವರಿಂದ ಹೊಡೆತ ತಿಂದು ಆಸ್ಪತ್ರೆ ಸೇರಿದ್ದ. ಮಾನವ್ವ ದುಡಿದು ಜೋಪಾನ ಮಾಡಿದ್ದಳು. ತಾನು ಆಮುವು ಮನುಷ್ಯನೆಂದು ನಿಂಗಪ್ಪ ಈಗಂತೂ ದುಡಿತವನ್ನೇ ಸಂಪೂರ್ಣ ಬಿಟ್ಟು ಕೊಟ್ಟಿದ್ದ. ವಿಷಯ ತಿಳಿದ ಮೇಲೆ ವಿಶ್ವನಾಥ ಕೂಗಾಡಿ ಈಗ ಸುಮ್ಮನಾಗಿದ್ದ. ತಿಂಗಳುಗಳು ಕಳೆದರೂ ಮಾನವ್ವ ತನ್ನ ಮೂಗುತಿ ನೆನೆಸಿಕೊಂಡು ಅಳುವುದನ್ನು, ಗಂಡನನ್ನು ಶಪಿಸುವುದನ್ನು ಬಿಟ್ಟಿರಲಿಲ್ಲ.

"ಅವ್ವಾರ." ಮಾನವ್ವ ಒಂದು ಬಟ್ಟೆಯ ಗಂಟನ್ನು ಹಿಡಿದುಕೊಂಡು ಒತ್ತಿಲ ಬಾಗಿಲಿಗೆ ನಿಂತಿದ್ದಳು. ಏನೆಂದು ಕೇಳಲು ಹೋದ ಸುನಂದೆ ಮಾತು

ಬಾರದೆ ನಿಂತಳು. ಕಣ್ಣು ಮುಚ್ಚಿ ಬೆಚ್ಚಗೆ ಮಲಗಿದ್ದ ಗಂಡು ಮಗು ಅವಳ ಉಡಿಯಲ್ಲಿತ್ತು.

"ಮಲ್ಲಿಗೆ ಈಗೊಂದ ತಿಂಗಳಿಂದ ಆರಾಮು ಇದ್ದಿದ್ದಿಲ್ಲಂತ್ರಿ. ದಿನಾ ತುಂಬಿದ್ದವು. ಅದೇನೋ ಬಡ್‌ಪಶರ್, ಅದು ಹೆಚ್ಚಾಗಿತ್ತಂತ. ಅಶಕ್ತನೂ ಆಗಿದ್ದಳ್ರಿ. ಗಂಡ ಇಲ್ದ ಮಿಂಡಗ ಬಸರಾದ್ರ ಯಾರ ಕೇಳಬೇಕ್ರಿ. ತಾನ್ಯ ದುಡದು ತಿನಬೇಕು. ನೆಟ್ಟಗ ಹೊಟ್ಟಿಗಿ ಇರತಿದ್ದಿಲ್ಲ. ಮೊನ್ನೆ ಬ್ಯಾನಿ ಎದ್ದಾಗ ಮುನಿಸಿ ಪಾಲ್ಟಿ ದವಾಖಾನಿಗೆ ಇಂವನಽ ಕರಕೊಂಡ ಹೋಗಿದ್ದಂತ. ಖರ್ಚಿಗೆ ಮೂಗುತಿ ಮಾರಿದ್ನಂತ. ಹಡ್ಯಾಣ ತರಾಸು ಆಗಿ ಮಲ್ಲಿ ಸತ್ತಳ್ರಿ. ಆದರ ಈ ದಿಕ್ಕೇಡಿ ಕೂಸಾ ಬದಕೀತು. ಇಂವಾ ತೊಗೊಂಡು ಬಂದು 'ನನ್ನ ತೆಪ್ಪಾತು ಹೊಟ್ಟ್ಯಾಗ ಹಾಕೋ. ಇದು ನಂದಽ ಕೂಸು, ಪರದೇಶಿ. ಈ ನಿನ್ನ ಕೈಯು ಕಾಲಂತ ತಿಳಕೊಂಡ ಹಿಡೀತೀನಿ. ಇದಕ್ಕ ತಾಯಿ ಆಗು. ಜ್ವಾಪಾನಾ ಮಾಡು' ಅಂತ ಅಳಾಕ ಹತ್ತಿದನ್ರಿ. ನನಗೂ ದುಕ್ಕ ಆತು. ಆ ಹೊಲಸ ರಂಡಿ ಸತ್ತುಹೋದಳು. ಈ ಕೂಸು ಏನೂ ಪಾಪಾ ಮಾಡೇದ. ನನಗೂ ಗಂಡು ಮಕ್ಕಳು ಇಲ್ಲಾ. ಇರಲಿ ಬಿಡು ಅಂದಿನ್ರಿ. ಹಾಂಗಽ ಬಿಟ್ರ ಅನಾತ ಆಕ್ಕತ್ರಿ. ಕೂಸಿಗೆ ಒಂದು ತುತ್ತು ಹಾಕಿ ಬೆಳೆಸಿದರ ಶಿವಾ ಮೆಚ್ಚಾನು ಅಲ್ರೀ ಅವ್ವಾರ ?"

ಗೊಂಬೆಯಂತೆ ಗದ್ದಕ್ಕೆ ಕೈಕೊಟ್ಟು ಸುನಂದೆ ಮೂಕಳಾಗಿ ನಿಂತೇ ಇದ್ದಳು. ಚಳಿಗೆ ಬೆದರಿ ಕಣ್ಣು ತೆಗೆದು ಅಳುತ್ತಿದ್ದ ಮರಿನಿಂಗಪ್ಪನನ್ನು ಸೆರಗು ಮುಚ್ಚಿ ಎದೆಗೆ ಒತ್ತಿಕೊಂಡಳು ಮಾನವ್ವ.

ಎರಡೂ ಧ್ರುವಗಳೇ

ತುಪ್ಪ ಕುಡಿದು ನೊಣಗಳೆಲ್ಲ ಹಾರಿ ಹೋಗಿ ಬರಿದಾದ ಜೇನುಗೂಡಿನಂತೆ ಅವನ ತಲೆ ಖಾಲಿಯಾಗಿತ್ತು. ಮನಸ್ಸು ಹಗುರಾಗಿ ತೇಲುತ್ತಿತ್ತು. ಈ ಮನಸ್ಸೊಂದು ವಿಚಿತ್ರವಾದದ್ದು. ತಾನು ಕಣ್ಣಿಗೆ ಕಾಣದ್ದಾದರೂ ಯಾರ ಕಣ್ಣಿಗೂ ಕಾಣದ ವಿಚಾರಗಳು, ಕಲ್ಪನೆಗಳು, ಚಿಂತೆಗಳನ್ನು ಹೊತ್ತುಕೊಂಡು ನಮಗೇ ಒಜ್ಜೆಯಾಗಿಬಿಡುತ್ತದೆ. ಆ ಭಾರ ಇಳಿದ ಮೇಲೆ ಬಹಳ ಕಾಲ ಹಾಸಿಗೆ ಹಿಡಿದು ಮಲಗಿದ ರೋಗಿಯಂತೆ ನಿಶ್ಶಕ್ತವಾಗಿ ಜೋಲಿ ಹೊಡೆಯುತ್ತದೆ. ಉಂಡದ್ದನ್ನೆಲ್ಲ ಕಾರಿಕೊಳ್ಳುವ ಎಳೆ ಬಸುರಿಯಂತೆ ತಿಂಗಳುಗಳಿಂದ ಅವನು ತಲೆಯಲ್ಲಿದ್ದುದನ್ನೆಲ್ಲ ಪೆನ್ನಿನ ಮೂಲಕ ಹಾಳೆಗೆ ಇಳಿಸಿಬಿಟ್ಟಿದ್ದ.

ಪ್ರಕಾಶಕನಿಂದ ಆಗಲೇ ನಾಲ್ಕಾರು ಪತ್ರಗಳೂ ಬಂದಿದ್ದವು. ಅವನಿಂದ ಮುಂಗಡ ತೆಗೆದುಕೊಂಡ ಹಣ ಖರ್ಚಾಗಿ ಹೋಗಿತ್ತು. ಇನ್ನೇಕೆ ಸುಮ್ಮನಿದ್ದಾನವನು–ಹೆಚ್ಚೂ ಕಡಿಮೆಯಾದರೆ ಕೋರ್ಟಿಗೆ ಹೋಗಲೂ ಹಿಂಜರಿಯುವವನಲ್ಲ. ಅವನ ಸಿಟ್ಟಿಗೆ ಬಲಿಯಾಗಿ ಅವನು ಮಾಡುವುದಾದರೂ ಏನು ? ಕೊನೆಯ ಪ್ಯಾರಾ ಇನ್ನೊಮ್ಮೆ ಓದಿ, ತಿದ್ದಿದ. ಕಾದಂಬರಿಯ ಹೆಸರಿನ ಬಗ್ಗೆ ತಲೆ ಕೆಡಿಸಿಕೊಳ್ಳುವವನಲ್ಲ. ಓದುಗರಿಗೆ ತನ್ನ ಹೆಸರೇ ಸಾಕು, ಪೆನ್ನು ಮುಚ್ಚಿ ಬೆರಳು ನೆಟಿಗೆ ಮುರಿದ. ಎರಡೂ ಕೈ ಹೆಣೆದು ತಲೆಯ ಹಿಂಭಾಗದಿಂದ ಮೇಲೆತ್ತಿ, ಇದ್ದಷ್ಟು ಬಾಯನ್ನು ಮತ್ತಷ್ಟು ಅಗಲಿಸಿ ಆಕಳಿಸಿದ. ಎದ್ದು ನಡೆಯತೊಡಗಿದ. ನಡಿಗೆ ಕುಣಿತವಾಯಿತು. ಉಸಿರು ಕಟ್ಟಿಸುವ ಆ ಕೋಣೆ

ಯಿಂದ ಹೊರಬಂದ. ಮನೆ ಸುಮ್ಮನಿತ್ತು–ಹಂ. ಅವನ ಮನೆಯ ಹೆಸರೇ ನಿಶ್ಶಬ್ದ.

ಬರೆಯಲು ಕುಳಿತೊಡನೆ ಎಲ್ಲ ಧ್ವನಿಗಳೂ ಅವನ ಕಿವಿಯಲ್ಲೇ ಸದ್ದು ಮಾಡುವ ಜಾಗದಿಂದ ದೂರ–ಬಲು ದೂರ ಬಂದು ಮನೆ ಕಟ್ಟಿಕೊಂಡಿದ್ದ. ಒಂದೊಂದು ಕೋಣೆ, ಕಿಟಕಿ, ಬಾಗಿಲುಗಳಿಗಾಗಿ ಕಾದಂಬರಿಗಳನ್ನೂ ಬರೆದಿದ್ದ, ಡೈನಿಂಗ್ ಟೇಬಲ್ ಮೇಲಿನ ಫ್ಲಾಸ್ಕ ಎತ್ತಿದ. ಕೆಳಗೊಂದು ಚೀಟಿ–

'ನಾನು ಶ್ಯಾಮಸೊಡನೆ ಮ್ಯಾಟಿನಿ ಶೋಗೆ ಹೋಗುತ್ತಿದ್ದೇನೆ. ದಿಲೀಪನ ಫಿಲ್ಮು. ಬಿಡುವ ಹಾಗಿಲ್ಲ. ಹಾಗೇ ಮಾರ್ಕೆಟಿಂಗ್ ಮುಗಿಸಿ ಬರುತ್ತೇನೆ.'

ಸರಿ–ಹೆಂಡತಿ, ಮಗಳು ಇಲ್ಲದ್ದು ಒಳ್ಳೆಯದೇ ಆಯಿತು. ಕಪಾಟಿನಲ್ಲಿಯ ವಿಸ್ಕಿ ತೆಗೆದು ಗ್ಲಾಸಿಗೆ ಸುರುವಿದ. ಚಿಪ್ಸ ತಿನ್ನುತ್ತ ಗುಟುಕಾಗಿ ಹೀರ ತೊಡಗಿದ.

'ಸರ್, ಪ್ಲೀಜ ಆಟೋಗ್ರಾಫ್ ಕೊಡಿರಿ' ವೀಣೆ ಬಾರಿಸಿತೇನೋ–

ಗುಲಾಬಿ ಬೆರಳು ಕೈ ಮುಂದೆ ಚಾಚಿತ್ತು. ಸಾಮಾನ್ಯವಾಗಿ ಯಾರನ್ನೂ ನೋಡದೆ ಸಹಿ ಗೀಚುವ ಅವನು ಕತ್ತೆತ್ತಿದ. ಕಣ್ಣು, ತುಟಿಗಳೆರಡೂ ನಕ್ಕವು.

'ನಾನು ಸುಪ್ರಿಯಾ.'

'ಭಾವಗೀತೆಗಳನ್ನು ಹಾಡಿದವರು ನೀವs ಅಲ್ಲ ?'

'ಹೌದ್ರಿ, ಅದು ನೀವs ಬರೆದ ಕವಿತಾ.'

'ನಿಮ್ಮ ದನಿ ಭಾಳ ಇಂಪ ಅದ. ಚೆನ್ನಾಗಿ ಸಂಗೀತ ಅಭ್ಯಾಸ ಮಾಡಿದರ ಹೆಸರು ಪಡೀತೀರಿ. ಭಾವಪೂರ್ಣ ಆಗಿ ಹಾಡ್ತೀರಿ. ನನ್ನ ಕವಿತಾ ಇಷ್ಟ ಛಂದ ಅದ ಅಂತ ನನಗ ಅನಿಸಿದ್ದಿಲ್ಲಾ.'

'ಓs ನೀವು ಕವಿಗಳು ಸಾರ್, ಉತ್ಪ್ರೇಕ್ಷಾ ಮಾಡ್ತೀರಿ ಅನಸ್ತದ.' ಗುಲಾಬಿ ಹೂವೋ ಛೇ ಅಲ್ಲ ಕೆಂಪುಕೆಂಪಾಗಿದೆಯಲ್ಲ ! ತನ್ನ ಕೈಗೆ ಸಿಕ್ಕಿದ್ದರೆ ಎತ್ತಿ ಕೆನ್ನೆಗೆ ಒತ್ತಿಕೊಳ್ಳುತ್ತಿದ್ದೆ.

'ನೋ....ನೋ....ನಾ ಹಾಂಗ ಯಾರನ್ನೂ ಹೊಗಳೂದಿಲ್ಲ, ನನ್ನ ಮನಸ್ಸಿಗೆ ಬಂದsದ ಅಂದ ಮ್ಯಾಲ ರಿಯಲಿ ಗುಡ್.'

ಸರ್ ನಂದು, ಸರ್ ನಂದು ತೊಗೊಳ್ರಿ. ಬೆಳೆಯುತ್ತಿರುವ ಕೈಗಳ ನಡುವೆ ಗುಲಾಬಿ ಕೈ ಮರೆಯಾಯಿತು.

ಪೆನ್ನು ಎತ್ತಿದ. ಕಾದಂಬರಿಯ ಹೆಸರು, ತನ್ನ ಹೆಸರು, ಅರಿಕೆ-ಅರಿಕೆ ಯಲ್ಲಿ ತಾನೇ ಹೊಸದೇನು ? ಮಾಮೂಲು.

ಇದು ನನ್ನ ಇಪ್ಪತ್ತೆಂಟನೆಯ ಕಾದಂಬರಿ. ಈ ಕಾದಂಬರಿಯಲ್ಲಿ ಹೊಸ ವಸ್ತುವನ್ನು ಆರಿಸಿಕೊಂಡಿದ್ದೇನೆ. ಇಂದಿನ ಜಗತ್ತಿನಲ್ಲಿ ಎಲ್ಲರ ಕಣ್ಣಿಗೆ ಕಾಣುವ ದಾರಿದ್ರ್ಯ, ರೋಗ-ರುಜಿನ, ಬರಗಾಲ, ಮಹಾಪೂರ ಇವೆಲ್ಲ ಶೋಷಣೆಗಳ ಮೂಲ ದ್ರವ್ಯ. ಆದರೆ ಶೋಷಣೆಗೂ ವಿವಿಧ ಮುಖಗಳಿವೆ. ಅವರಲ್ಲಿ ಹೆಣ್ಣಿಗೆ ಆಗುವ ಶೋಷಣೆಯೇ ನನ್ನ ಕಾದಂಬರಿಯ ಮುಖ್ಯ ವಸ್ತು. ಓದುಗರೇ ನನ್ನ ಜೀವಾಳ. ನನ್ನ ಇತರ ಕೃತಿಗಳನ್ನು ಓದಿ ಪ್ರೋತ್ಸಾಹಿಸಿದಂತೆ ಸಹೃದಯ ಓದುಗರು ಈ ಕೃತಿಯನ್ನೂ ಸ್ವಾಗತಿಸುತ್ತೀರಿ ಎನ್ನುವ ನಂಬಿಕೆ ನನಗಿದೆ.

ಇನ್ನು ನನ್ನ ಸಾಹಿತ್ಯ ಕೃತಿಗಳಿಗೆ ಸ್ಫೂರ್ತಿಯ ಸೆಲೆಯಾಗಿದ್ದು, ನನ್ನ ಬರವಣಿಗೆಗೆ ಸಹಕಾರ ನೀಡುತ್ತಿರುವ ಸಹಧರ್ಮಿಣಿ ವಿಜಯಾಳನ್ನು ಇಲ್ಲಿ ನೆನೆಯದಿರಲಾರೆ-

ಸ್ಫೂರ್ತಿನೂ ಇಲ್ಲಾ, ಸೆಲೆ ಅಂತೂ ಮೊದಲೇ ಇಲ್ಲಾ-ಮಣ್ಣು, ಸುಡು ಗಾಡು. ನನ್ನ ಕಾದಂಬರಿಗಳ ಸಂಖ್ಯಾ ಕೂಡ ಅವಳಿಗೆ ನೆನಪು ಇರಲಿಕ್ಕಿಲ್ಲ. ಸಹಕಾರ ಮಾತ್ರ ಚೆನ್ನಾಗಿ ಕೊಡ್ತಾಳ. ನನ್ನ ಜೊತೆ ಸಹಕರಿಸೋದು ಬಿಟ್ಟರೆ ಅವಳಿಗೆ ಬೇರೆ ದಾರೀನೇ ಇಲ್ಲಲ್ಲ. ಮದುವೆಯಾದ ಹೊಸದರಲ್ಲಿ ಹೆದರುತ್ತ ಒಮ್ಮೆ ಬಾಯಿ ಬಿಟ್ಟಿದ್ದಳು–

'ನೀವು ಪ್ರೇಮ ವಿವಾಹ ಮಾಡಿಕೊಂಡಿದ್ದಿರಿ ಅಂತ ಕೇಳಿದ್ದೆ. ಮೆಚ್ಚಿ ಮದುವೆಯಾದ ಕಥಿ ನಿಮ್ಮ ಎಷ್ಟೋ ಕಾದಂಬರಿಯೊಳಗ ಓದೇನಿ. ಆದರ ಆಕಿನ್ನ ಬಿಟ್ಟಿರಿ ಯಾಕ ?'

ಎಲ್ಲಿಯೋ ದೂರದಿಂದ ನಿ.ಸಾ.ಗ.ಮ. ಧನಿಸಾ. ತಂಬೂರಿಯ ಝೇಂಕಾರ, ಮಾಲಕೌಂಸ ಆಲಾಪನೆ ಕೇಳುತ್ತಿತ್ತು. ಸನಿಹಕ್ಕೆ ಬರುತ್ತಾ ಕಿವಿ

ಯೊಳಗೇ ಹೊಕ್ಕು ಕೊರೆಯತೊಡಗಿತ್ತು. ಬೆಳಗಿನವರೆಗೆ ಕೂತು ಬರೆದು ಅದೇ ತಾನೇ ಮುಚ್ಚಿದ ದಣಿದ ಕಣ್ಣು ಥಟ್ಟನೆ ತೆರೆದುಕೊಂಡವು.

'ಸಾಕು ನಿಲ್ಸು' ಚೀರಿಬಿಟ್ಟ–

'ಇರಲಿ ಬಿಡ್ರಿ ಅಷ್ಟ್ಯಾಕ ಸಿಟ್ಟಿಗೇಳತೀರಿ. ನಿಮಗ ಮನಸ್ಸಿಲ್ಲದಿದ್ದರ ಹೇಳಬ್ಯಾಡ್ರಿ. ನಿಮ್ಮ ಮೊದಲಿನ ಹೆಂಡತಿ–ಏನವಳ ಹೆಸರು, ಹಾಂ ಸುಪ್ರಿಯಾ ನೋಡಲಿಕ್ಕೂ ಛಂದ ಇದ್ಲು. ಹಾಡೂ ಛಂದ ಅಂತಿದ್ಲು ಅಂತ ಕೇಳಿದವರೆಲ್ಲ ಹೇಳತಾರ.

'ಹಂ, ಸಾರಿ ವಿಜೀ ನಾ ಅಂದದ್ದು ನಿನಗ ಅಲ್ಲಾ. ನನಗ ಯಾಕೋ ಆ ವಿಷಯಾ ಎತ್ತೋದು ಮನಸ್ಸಿಗೆ ಬರೂದಿಲ್ಲ. ನನ್ನ ಸಾಹಿತ್ಯಸೇವೆಗೆ ಆಕಿ ಸಹಕಾರ ಸಿಗಲಿಲ್ಲಾ. ಅಷ್ಟು ತಿಳಕೋ. ಅದಕ್ಕs ಬಿಟ್ಟುಬಿಟ್ಟೆ.'

ಮೊದಲಿನವಳನ್ನು ಬಿಟ್ಟ ಹಾಗೆ ತನ್ನನ್ನೂ–ಸುಪ್ರಿಯಾಳನ್ನು ನಾನು ಬಿಟ್ಟೆನೋ, ಅವಳೇ ನನ್ನ ಜೊತೆ ಏಗಲಾರದೆ ಬಿಟ್ಟು ಹೋದಳೋ ಗೊತ್ತಿಲ್ಲ. ಆದರೂ ಭಯ-ಆ ಭಯವನ್ನು ಅವಳಲ್ಲಿ ಹುಟ್ಟು ಹಾಕಿದವನೂ ತಾನೇ. ಅವಳ ಮೇಲೆ ನಂಬಿಕೆ ಬರುವವರೆಗೂ ಆ ಭಯವನ್ನು ಹಾಗೆಯೇ ಪೋಷಿಸಿದ್ದೆ. ಆಮೇಲೆ ಆ ಜೀವನವೇ ಅವಳಿಗೆ ರೂಢಿಯಾಯಿತು. ಕಾದಂಬರಿಯ ಮೊದಲ ಪುಟದಲ್ಲೇ ತನ್ನ ಹೆಸರು ಅಚ್ಚಾಗುವುದು ಅವಳಿಗೊಂದು ಹೆಮ್ಮೆಯ ವಿಷಯ. ಬಳಗದವರಲ್ಲಿ, ಸ್ನೇಹಿತೆಯರಲ್ಲಿ ಎಲ್ಲರೂ ಅವಳ ಈ ಭಾಗ್ಯವನ್ನು ಹೊಗಳುವವರೇ. ಸರಿ-ಇನ್ನೇನು ಬೇಕು ? ಮನೆ, ಮಕ್ಕಳು, ಪೇಟೆ, ಸಿನಿಮಾ, ಮದುವೆ, ಪಿಕ್‌ನಿಕ್ ಎಲ್ಲ ಕಡೆಗೆ ಸುತ್ತಾಡುತ್ತ ಸುಖವಾಗಿ ಇರುವಳು. ಲೇಖನಿಯೊಂದಿಗೆ ಗುದ್ದಾಡಲು ನನ್ನಷ್ಟಕ್ಕೆ ಬಿಟ್ಟಿರುವಳು.

ಆಯಿತು. ಇದನ್ನು ನಾಳೆ ಆ ಪ್ರಕಾಶಕನಿಗೆ ಕೊಟ್ಟು ಬಂದರಾಯಿತು ಅವನೊಬ್ಬ ಶನಿ ! ನಕ್ಷತ್ರಿಕನಂತೆ ಬೆನ್ನು ಹತ್ತಿದ್ದಾನೆ. ನೌಕರಿ ಬಿಟ್ಟ ಮೇಲೆ ನನಗಾದರೂ ಇನ್ನೇನು ಕೆಲಸ ? ಬರವಣಿಗೆಯೇ ಉದ್ಯೋಗ.

'ನೀವು ಕವಿತೆ ಬರೆಯುವುದನ್ನೇ ಬಿಟ್ಟುಬಿಟ್ಟಿರಿ' ಸುಪ್ರಿಯಾ ಆಕ್ಷೇಪಿಸಿದ್ದಳು ಒಮ್ಮೆ.

'ಕವಿತೆಗೆ ತುಂಬಾ ಕಷ್ಟಪಡಬೇಕು ಸುಪ್ಪೀ, ಹಣವೂ ಸಿಗುವದಿಲ್ಲ. ನೋಡು, ಕಾದಂಬರಿಗಳಿಗೆ ಬಹಾಳ ಬೇಡಿಕೆ ಅದೆ.' ಅವಳು ತಿರಸ್ಕಾರದಿಂದ ನಕ್ಕು ನನ್ನ ಎದೆಗೆ ಇರಿದಿದ್ದಳು.

ಥೂ ಯಾಕೋ ಬಹಳ ಬೇಜಾರು. ವಿಸ್ಕಿ ಸಂತೋಷ ಕೊಡಲಿಲ್ಲ. ಮನೆಯಲ್ಲಿದ್ದು ಬಹಳ ದಿನಗಳಾದವು. ಹೊಸ ಕಾರಿನಲ್ಲಿ ಸುತ್ತಾಡಿ ಬರಲಾ! ದೃಷ್ಟಿ ಮೇಜಿನ ಮೇಲೆ ಬಿದ್ದ ಪತ್ರಗಳತ್ತ ಹಾಯಿತು. ಹದಿನೈದು ದಿನಗಳ ರಾಶಿ. ಹೆಚ್ಚಿನವು ಓದುಗರಿಂದ ಬಂದ ಮೆಚ್ಚಿಗೆಯ ಪತ್ರಗಳು. ಅವುಗಳ ಒಕ್ಕಣಿಕೆ ಅವನಿಗೆ ಕಂಠಪಾಠ. ಒಂದೊಂದಾಗಿ ಎತ್ತಿದ-ಮಾಧುರಿ, ಕೇತಕಿ, ಚಾರುಲತಾ, ನೀಹಾರಿಕಾ ಇತ್ಯಾದಿ ತೆಗೆದು ಬೇರೆ ಇಟ್ಟ. ಇವರಿಗೆಲ್ಲ ಅವನು ಉತ್ತರ ಬರೆಯಲೇಬೇಕು. ಸುಂದರ ಹೆಣ್ಣುಗಳು-ಅವನ ದೌರ್ಬಲ್ಯ. ಹೆಸರುಗಳೇನೋ ಸುಂದರವಾಗಿವೆ. ಅಷ್ಟಕ್ಕೆ ಅವರೂ ಸುಂದರಿಯರೇ ? ಸಂದೇಹ. ಭೆಟ್ಟಿಯಾದ ಮೇಲೆ ಬೆಪ್ಪಾದದ್ದೂ ಉಂಟು.

ಕೆಲ ಆಮಂತ್ರಣ ಪತ್ರಿಕೆಗಳೂ ಅಲ್ಲಿದ್ದವು. ಮನರಂಜನ ಕಾರ್ಯಕ್ರಮ ಏನಾದರೂ ಇವೆಯೆ ? ಇದೇನು ಸಂಗೀತ ಸೌರಭ. ಇಂದೇ. ಟೌನಹಾಲಿನಲ್ಲಿ. ಏಳು ಗಂಟೆಗೆ 'ಕಿರಣ ಮನೋಹರ' ಅವರಿಂದ ಶಾಸ್ತ್ರೀಯ ಸಂಗೀತ. ಕಿರಣ ಮನೋಹರ ಸುಂದರ ಹೆಸರು. ಇವಳು ಸುಂದರಿಯೆ ? ಕಂಠ ಇಂಪಾಗಿದ್ದರೂ ಕೋಗಿಲೆ ಕಪ್ಪಲ್ಲವೇ ?ಛೇ ಇರಲಿಕ್ಕಿಲ್ಲ. ಹೆಸರಿನಲ್ಲಿಯೇ ಏನೋ ಮೋಡಿ ಇದೆ. ಸಂಗೀತಕ್ಕೆ ಹೋಗುವದು. ಅವಳ ಮುಖ ನೋಡುವ ಹಾಗಿದ್ದರೆ ಸ್ವಲ್ಪ ಹೊತ್ತು ಕೂತು ಬಂದರಾಯಿತು. ಸಿಡಿಯುತ್ತಿರುವ ತಲೆಗೆ ಬದಲಾವಣೆ ಬೇಕಿತ್ತು. ರೇಶಿಮೆಯ ಜುಬ್ಬಾ, ಪಾಯ್‌ಜಾಮದೊಳಗೆ ತೂರಿಕೊಂಡ.

'ಈ ಡ್ರೆಸ್ ನಿಮಗೆ ಬಹಾಳ ಒಪ್ಪತದ. ಈ ಹರವಾದ ಎದೆ, ಎತ್ತರ ನಿಲುವು' ಗುಲಾಬಿ ಬೆರಳುಗಳನ್ನು ಎದೆಯ ಮೇಲೆ ಆಡಿಸುತ್ತ ಒಂದು ವೀಣೆಯ ದನಿ ಕಿವಿಯಲ್ಲಿ ಗುನುಗುನಿಸಿತು.

ಕಾರ್ಯದರ್ಶಿ ತುಂಬ ಗೌರವದಿಂದ ಸ್ವಾಗತಿಸಿ ಪ್ರತಿಷ್ಠಿತರಿಗೆ ಮೀಸಲಾದ ಮೊದಲ ಸಾಲಿನಲ್ಲಿಯೇ ಕೂಡ್ರಿಸಿದ. ಪರಿಚಯದ ಮುಗುಳ್ನಗೆ, ನಮಸ್ಕಾರ, ಗುಸುಗುಸು ಮಾತು-ಪರದೆಯ ಹಿಂದಿನಿಂದ ತಂಬೂರಿಯ

ಝೇಂಕಾರ ಕೇಳುತ್ತಿತ್ತು. ಜೊತೆಗೆ ಸುತ್ತಿಗೆಯ ಬಡಿತ. ತಬಲಾದ ಬದಲು ತನ್ನ ಎದೆಯ ಮೇಲೆ ಬೀಳುತ್ತಿರುವಂತೆ ಅನ್ನಿಸಿ ಕಸಿವಿಸಿಯಾಯಿತು. ಮೊದಲಿನ ಸಂತೋಷ ಉಳಿಯಲಿಲ್ಲ. ಕುಳಿತಲ್ಲಿಯೇ ಮಿಸುಕಾಡಿದ. ಸೀಟು ಬಿಟ್ಟು ಎದ್ದ. ಈಗ ಗಾಯಕಿಯ ಪರಿಚಯ-ಕಿರಣ ಮನೋಹರ ಅವರ ಗುರು, ಘರಾಣೆ ದೇಶ ವಿದೇಶಗಳಲ್ಲಿ ಹಾಡಿ ಖ್ಯಾತಿ ಪಡೆದ ಕಲಾವಿದೆ.

ಪರದೆ ಸರಿಯುತ್ತಿದ್ದಂತೆ ತಂಬೂರಿಯ ಶೃತಿಯೊಡನೆ ಸಣ್ಣದಾಗಿ ಆಲಾಪ-ಎದೆ ಬಡಿತ ತಪ್ಪಿತು. ಎವೆ ಇಕ್ಕದೆ ಗಾಯಕಿಯನ್ನು ನೋಡುತ್ತ ಸೀಟಿಗೆ ಅಂಟಿಕೊಂಡ. ಚಪ್ಪಾಳೆಯ ಸುರಿಮಳೆ ಆಗುತ್ತಿದ್ದಾಗ ಎಚ್ಚರ. ಎದ್ದು ಕೈಮುಗಿದು ಹೋಗುವಾಗಲೂ ತನ್ನನ್ನು ನೋಡಲಿಲ್ಲವೇ ? ಎದೆ, ಹೆಜ್ಜೆ ಭಾರವಾಗಿದ್ದವು. ಕಾರ್ಯದರ್ಶಿ ಓಡೋಡಿ ಬಂದ.

'ಸರ್ ಬರ್ರಿ, ಚಹಾ ತೊಗೋಳ್ಳೂಣು. ಕಿರಣ ಅವರ ಪರಿಚಯ ಮಾಡಿ ಕೊಡ್ತೀನಿ.' ಬೇರೆಯವರ ಭಾವನೆಗಳನ್ನು ರೂಪಿಸಿ, ಬರೆಯುವ ತನಗೆ ಏನಾಯಿತು ? ಏನಿಲ್ಲ ಶೂನ್ಯ, ಯಂತ್ರದಂತೆ ಅವನ ಹಿಂದೆ ಹೋದ.

'ಮೇಡಂ, ಇವರು ಖ್ಯಾತ ಕಾದಂಬರಿಕಾರ ಜಯಚಂದ್ರ....'

'ಓ ಬರ್ರಿ, ನಮಸ್ಕಾರ, ಕೂಡ್ರಿ, ಭಾಳ ವರ್ಷ ಆದವು ಭೆಟ್ಟಿ ಆಗಿ.'

'ನೀವು ಮಾತಾಡ್ತಾ ಇರ್ರಿ. ನಾನು ಈಗ ಬಂದೆ' ಗಡಿಬಿಡಿಯಲ್ಲಿ ಓಡುತ್ತಿದ್ದ ಕಾರ್ಯದರ್ಶಿ.

'ಅಶೋಕ ನಿಲ್ರಿ. ಅವರು ಬರ್ತೀನಿ ಅಂದಾರ. ನಾ ಇಲ್ಲೇ ಅದೀನಿ ಅಂತ ಹೇಳ್ರಿ ಅವರಿಗೆ' ಮಾತಿನಲ್ಲಿ ಗತ್ತು, ಆತ್ಮವಿಶ್ವಾಸವಿತ್ತು.

'ಆಗಲಿ ಮೇಡಂ ಬರಲಿ, ಅವರು ಇಲ್ಲಿಗೆ ಬರೋದೇ ದೊಡ್ಡ ಮಾತು. ಎಲ್ಲಾರೂ ಊಟಾ ಮಾಡಿಕೊಂಡೇ ಹೋಗೀರಂತ. ನಾ ಸ್ವಲ್ಪ ವ್ಯವಸ್ಥಾ ನೋಡಿಕೊಂಡು ಬರ್ತೀನಿ. ಹದಿನೈದು ನಿಮಿಷದೊಳಗ ಎಲ್ಲಾ ರೆಡಿ ಯಾಗಿರ್ತದ.'

ಹೋಗು ಮಾರಾಯಾ ಹೋಗು...ನಿನ್ನ ಹದಿನೈದು ನಿಮಿಷದೊಳಗ ಹದಿನೈದು ವರುಷದ ಮಾತು ಆಡಬೇಕಾಗೇದ ನಾವಿಬ್ಬರೂ–

'ಆಂ. ಏನಂದಿರಿ !'

'ಏನಿಲ್ಲಾ, ಕಿರಣ ಮನೋಹರ ಹೆಸರು ಓದಿ, ಮರುಳಾಗಿ ನಾ ಸಂಗೀತಕ್ಕ ಬಂದೆ. ನೀ ಹೆಸರ ಯಾಕ ಬದಲಾಯಿಸಿದಿ ?'

'ಯಾಕಂದರ ನನ್ನ ಗಂಡ ಮನೋಹರಗ ಕಿರಣ ಅನ್ನೊ ಹೆಸರು ಸೇರಿತು. ನನಗೂ ಹೊಸಾ ಹೆಸರು, ಹೊಸಾ ವಾತಾವರಣ ಬೇಕಾಗಿತ್ತು, ಹಿಂದಿನದು ಮರೀಲಿಕ್ಕೆ' ಅವಳ ದನಿಯಲ್ಲಿ ನೋವಿತ್ತೇ ?

ಅವಳ ಸೀರೆ, ಬೆಲೆ ಬಾಳುವ ಒಡವೆ, ಮೇಕಪ್, ಹೇರಸ್ಟೈಲ ಎಲ್ಲ ನೋಡುತ್ತ ದಂಗಾಗಿ ಮೂಕನಾಗಿದ್ದ ಜಯಚಂದ್ರ.

ಮೇಡಂ, ಪ್ಲೀಜ ನನಗೂ ಆಟೋಗ್ರಾಫ್, ಪ್ಲೀಜ ನನಗೆ, ನನಗೆ ಮೇಡಂ ಹತ್ತಾರು ಕೈಗಳು ಚಾಚಿ ಸರಿದು ಹೋದವು.

'ಮೇಡಂ, ಪ್ಲೀಜ ನನಗೂ ಆಟೋಗ್ರಾಫ್' ತನ್ನ ಅಂಗೈಯನ್ನೇ ಮುಂದೆ ಚಾಚಿದ್ದ ಜಯಚಂದ್ರ. ಬಗ್ಗಿ ಅವನ ಅಂಗೈ ಮೇಲೆ ಗೀಚಿದಳು. 'ಸುಪ್ಪಿ' ಅವಳ ತುಟಿಗಳೇನೋ ನಗುತ್ತಿದ್ದವು. ಕಣ್ಣುಗಳಲ್ಲಿ ಏನದು-ನೀರ ತೆರೆಯೆ ?

'ಸುಖವಾಗಿದ್ದೀಯಾ ಸುಪ್ಪಿ !'

'ಓs....ಬೇಖುಶಾಲ್, ನನ್ನ ನೋಡಿದರ ಗೊತ್ತಾಗೋದಿಲ್ಲೇನ್ರೀ.'

'ಮನೋಹರ ಯಾರು ?'

'ಜಯ್, ನಿಮ್ಮನ್ನ ಬಿಟ್ಟ ವ್ಯಾಲೆ ನಾನು ಪುಣೇಕ್ಕ ಅಕ್ಕನ ಮನೀಗೆ ಹೋದೆ. ಅಲ್ಲೆ ಕೆಲಸಾ ಮಾಡಿಕೋತಾ ಸಂಗೀತ ಕಲೀತಿದ್ದೆ. ನಾ ಕೆಲಸಾ ಮಾಡೂ ಫರ್ಮಿನ ಬಾಸ್‌ನ ಕಾಕಾ ಮನೋಹರ ಅವರ ಗುರುತು ಆಯ್ತು. ಪರಿಚಯ ಬೆಳೀತು. ನನ್ನ ಕಥೀ ಗೊತ್ತಾತು. ಆದರೂ ಲಗ್ನಾ ಮಾಡಿ ಕೊಳ್ಳೋಣ ಅಂದರು. ಸಂಗೀತದೊಳಗ ಈಗ ನಾ ಏನಾದರೂ ಸಾಧಿಸಿದ್ದರ ಅದು ಅವರ ಪ್ರೋತ್ಸಾಹದಿಂದ, ಸಹಕಾರದಿಂದ. ದೊಡ್ಡ ಉದ್ದಿಮೆದಾರರು. ಅವರ ಜೊತಿಗೆ ದೇಶ ವಿದೇಶ ಎಲ್ಲಾ ತಿರುಗಾಡಿ ಬಂದೆ. ಇಲ್ಲೆ ಒಂದು ಬ್ರ್ಯಾಂಚ ಆಫೀಸ ಅದ. ಅಕಸ್ಮಾತ್ ಈ ಪ್ರೋಗ್ರಾಂ ಫಿಕ್ಸ ಆತು !

'ಮಕ್ಕಳು ?'

'ನನಗ ಆಗಿಲ್ಲಾ. ಮನೋಹರ ಅವರ ಮೊದಲನೆ ಹೆಂಡತಿಗೆ ಇಬ್ಬರು ಗಂಡು ಮಕ್ಕಳು ಇದ್ದಾರ. ತಾಯಿ ಇಲ್ಲದ ಮಕ್ಕಳಿಗೆ ನಾನೇ ತಾಯಿ. ಇರಲಿ, ಇವತ್ತಿನ ನನ್ನ ಸಂಗೀತ ಕೇಳಿ ನಿನಗ ಏನ ಅನ್ನಿಸಿತು ?

'ಸೂಪರ್ಬ್-'

"ಕಿರಣ, ಸಾರಿ. ಎಷ್ಟು ಪ್ರಯತ್ನ ಮಾಡಿದರೂ ಲಗೂ ಬರಲಿಕ್ಕೆ ಆಗಲಿಲ್ಲಾ. ಕಾರು ಕೈ ಕೊಟ್ಟಿತು. ದಿಲ್ಲಿಗೆ ಅರ್ಜೆಂಟಾಗಿ ಟ್ರಂಕಾಲ್ ಹಚ್ಚ ಬೇಕಾಗಿತ್ತು. ಕಾರ್ಯಕ್ರಮ ಹೇಗಾಯ್ತು ?" ಮಧ್ಯವಯಸ್ಸು ದಾಟಿದ, ಸೂಟುಧಾರಿ ಆಕರ್ಷಕ ವ್ಯಕ್ತಿ ಹತ್ತಿರ ಬಂದರು. ತುಟಿ ಓರೆ ಮಾಡಿ ನಕ್ಕಳು ಕಿರಣ.

"ಇರಲಿ ಬಿಡ್ರಿ, ಯಥಾಪ್ರಕಾರ ಸಂಗೀತ ಮುಗಿದ ಮ್ಯಾಲೇ ಬಂದಿರಿ. ಇವರು ಜಯಚಂದ್ರ. ಖ್ಯಾತ ಕಾದಂಬರಿಕಾರರು. ನನ್ನ ಸಂಗೀತ ಭಾಳ ಮೆಚ್ಚಿ ಕೊಂಡರು. ಇವರು ಮನೋಹರ."

"ಜಯಚಂದ್ರ ಓಃ- ತಿಳೀತು. ನಿಮ್ಮನ್ನ ಭೆಟ್ಟಿ ಆದದ್ದು ತುಂಬಾ ಸಂತೋಷ" ಎನ್ನುತ್ತ ಕೈ ಚಾಚಿದ ಮನೋಹರರ ಕಿವಿಯ ಯಂತ್ರವನ್ನೇ ದಿಟ್ಟಿಸುತ್ತಾ ನಿಂತ ಜಯಚಂದ್ರನಿಗೆ ಅವರಿಬ್ಬರ ಮಾತೊಂದೂ ಕೇಳಿ ಸುತ್ತಿರಲಿಲ್ಲ.

ಮತ್ತದೇ ರಾಗ

ಹಾಲಿನ ಡಬ್ಬಿಯ ಗಡಗಡ ಸಪ್ಪಳ, ಪೇಪರ್ ಹುಡುಗನ ಕರೆಗಂಟೆ, ದೂರದಿಂದ ಕೇಳುವ ಗೂಡ್ಸ್‌ಗಾಡಿಯ ಸಿಳ್ಳು–ಇಂದಿರಾ ಕಣ್ಣು ಬೇಕೋ ಬೇಡವೋ ಎನ್ನುವಷ್ಟೇ ತೆರೆದಳು. ಐದೂವರೆಯ 'ಢಣ್' ಶಬ್ದ ಇನ್ನೊಂದು ಬೆಳಗಿನ ಆಗಮನ ಸೂಚಿಸಿತು. ಬೆನ್ನು, ನಡು ಎಲ್ಲ ನೋಯುತ್ತಿತ್ತು. ಹಿಂದಿನ ದಿನ ಕಾಲೇಜಿನಲ್ಲಿ ಪರೀಕ್ಷೆಗಳ ಮೇಲ್ವಿಚಾರಣೆ ವಹಿಸಿಕೊಂಡಿದ್ದರಿಂದ ಒಂದು ನಿಮಿಷವೂ ಬಿಡುವಿಲ್ಲದೆ ಸುತ್ತಾಡಿದ್ದಳು. ದೇಹ ಇನ್ನಷ್ಟು ಹೊತ್ತು ಮಲಗಲು ಬಯಸುತ್ತಿತ್ತು. ಹಾಗೆಯೇ ಮತ್ತೆ ಹೊರಳಿ ಮಲಗಿದಳು. ಕಣ್ಣಿಗೆ ಜೊಂಪು ಹತ್ತುತ್ತಿದ್ದಂತೆ ನಿಧಾನವಾಗಿ, ಗಂಭೀರವಾಗಿ ಝೋಂ ಎಂದು ತಂಬೂರಿಯ ಝೇಂಕಾರ ಶುರುವಾಯಿತು. ಇಂದಿರೆಯ ಮಿದುಳು ತಟ್ಟನೆ ಎಚ್ಚತ್ತಿತ್ತು. ಕಣ್ಣುಮುಚ್ಚಿಕೊಂಡೇ ಕಿವಿ ತೆರೆದಳು. ತಂಬೂರಿಯ ನಾದದಲ್ಲಿ ಬೆರೆತು ಹೋದ ಮಗಳ ಆಲಾಪನೆ ವಾತಾವರಣವನ್ನು ತುಂಬತೊಡಗಿತು. ಮಧುವಿಗೆ ಹೆಸರಿಗೆ ತಕ್ಕಂತೆ ಇನಿದಾದ ಜೇನಿನಂಥ ಧ್ವನಿ ಇದೆ. ಆಲಾಪ ಬೆಳೆ ಬೆಳೆಯುತ್ತ ಹೋದಂತೆ ಮಧು ಇಂದಿನ ರಿಯಾಜ್‌ನಲ್ಲಿ ಮಾಲಕೌಂಸ ರಾಗ ಎತ್ತಿಕೊಂಡಿದ್ದಾಳೆ. ಈಚೆಗಿನ ಒಂದೆರಡು ವರುಷಗಳಲ್ಲಿ ಇದು ಇಂಥದೇ ರಾಗ ಎಂದು ಗುರುತು ಹಿಡಿಯುವ ಶಕ್ತಿ ತನಗೂ ಬಂದಿದೆ. ಇದರಲ್ಲಿ ಆಶ್ಚರ್ಯವೇನಿಲ್ಲ.

"ಇಂದೂ ನಿನ್ನ ಧ್ವನಿ ಛಂದ ಅದ. ಹಾಡು ಕಲಿ. ಸಂಗೀತ ಬರಬೇಕಾದರೆ ದೇವರ ದೇಣಿಗಿ ಅದು. ಆದರ ಅದಕ್ಕ ತಕ್ಕ ಶ್ರದ್ಧಾದಿಂದ ಕಷ್ಟ

ಪಟ್ಟು ಕಲೀಬೇಕು. ಹಾಡು ಕೇಳ್ತಾ ಅಥವಾ ಹೇಳ್ತಾ ಇದ್ದರ ಮನಸ್ಸಿಗೆ ಎಷ್ಟು ಶಾಂತಿ ಇರ್ತದ. ಅದರ ಕಲ್ಪನಾ ಇಲ್ಲ ನಿನಗ". ಚಿಕ್ಕಂದಿನಲ್ಲಿ ಅವ್ವನ ಬಲವಂತಕ್ಕೆ ತಾನೂ ಒಂದೆರಡು ವರುಷ ಹಾರ್ಮೋನಿಯಂ ಹಿಡಿದು ಮಾಸ್ತರರ ಮುಂದೆ ಕುಳಿತಿದ್ದಳು. ಅವರು ಬಾಯಿ ಓರೆ ಮಾಡಿ ಹಾಡುವ ರೀತಿ, ಬಾಯ್ತುಂಬ ತಾಂಬೂಲ ಹಾಕಿದಾಗಿನ ಅವರ ತೊದಲು ಮಾತು, ಅಣ್ಣಂದಿರ ಮುಂದೆ ಫಾರ್ಸ್ ಮಾಡಿ ತೋರಿಸುವುದರಲ್ಲಿಯೇ ತನ್ನ ಕಲಿಕೆ ಮುಗಿದಿತ್ತು. ಮನೆಯಲ್ಲಿ ಯಾವಾಗಲೂ ತನ್ನ ಸ್ವಂತ ಅಭಿರುಚಿಗೆ, ಆಯ್ಕೆಗೆ ಸ್ವಾತಂತ್ರ್ಯ ಕೊಡುತ್ತಿದ್ದ ಅಪ್ಪ ತನ್ನ ಕಾಲೇಜು ವಿದ್ಯಾಭ್ಯಾಸಕ್ಕೆ ಮಹತ್ವಕೊಟ್ಟು ಸಂಗೀತ ಬಿಡಿಸಿದ್ದರು.

ಇತಿಹಾಸ ಪುನರಾವರ್ತನೆ ತನ್ನ ಮನೆಯಲ್ಲಿಯೆ ಆಗಿದೆ. ಮಧುಮತಿಗೆ ಅಮ್ಮನಂತೆ ಸಂಗೀತವೆಂದರೆ ಹುಚ್ಚು. ಬೆಳಗ್ಗೆ, ಸಂಜೆ ಶ್ರದ್ಧೆಯಿಂದ ತನ್ಮಯಳಾಗಿ ಅವಳು ಹಾಡುವಾಗ ತನಗೆ ಆನಂದ, ಬೇಸರ ಎರಡೂ. ಈಗ ಅಡ್ಡಿಯಿಲ್ಲ. ಆದರೆ ನಾಳೆ ಮದುವೆಯಾದ ಮೇಲೆ ಹೇಗೆ ? ಅವಳಂತೆಯೇ ಅವಳ ಗಂಡನಿಗೂ ಸಂಗೀತದ ಬಗ್ಗೆ ಒಲವು ಇರಬೇಕಲ್ಲ ? ಇಲ್ಲವಾದರೆ....

ತಟ್ಟನೆ ಹಾಸಿಗೆ ಬಿಟ್ಟು ಎದ್ದಳು ಇಂದಿರಾ. ಕೆಲಸಕ್ಕೆ ಬಾರದ ಯೋಚನೆಗಳಲ್ಲಿ ಮೈಮರೆತು ವೇಳೆ ಕಳೆಯಲು ತನ್ನಂಥ ದುಡಿಯುವ ಗೃಹಿಣಿಗೆ ಸಾಧ್ಯವಿಲ್ಲ. ಎರಡು ಹೆಣ್ಣುಮಕ್ಕಳ ತಾಯಿಯಾಗಿ ತನಗೆ ಮೈತುಂಬ ಕೈಗಳಿರಬೇಕು, ಕಣ್ಣುಗಳಿರಬೇಕು. ಬೆಳಗಿನಿಂದ ಸಂಜೆಯವರೆಗೆ ಒಂದೊಂದು ದಿನ ರಾತ್ರಿಯವರೆಗೂ ಕೆಲಸ, ಕೆಲಸ, ಕೆಲಸ. ಮತ್ತೆ ಬೆಳಗು, ಮತ್ತೆ ರಾತ್ರಿ, ಇದೇ ರೀತಿ ಇಂದಿರಾ ಬದುಕಿನಲ್ಲಿ ಹದಿನೈದು ವರ್ಷ ಯಂತ್ರದಂತೆ ದುಡಿದಿದ್ದಾಳೆ. ಮನೆ ಕೆಲಸ, ಮಕ್ಕಳ ಜವಾಬ್ದಾರಿ, ಕಾಲೇಜಿನ ಕೆಲಸ, ಅಧ್ಯಾಪಕ ವೃತ್ತಿಗೆ ಅವಶ್ಯವಾದ ಓದು. ಪಿಎಚ್.ಡಿ.ಗೆ ವಿವರ ಸಂಪಾದನೆ, ಹೀಗೆ ಎಲ್ಲವನ್ನೂ ಸಾಧಿಸುವುದರಲ್ಲಿ ಶರೀರ ಕೃಶವಾಗಿ, ಕೂದಲು ಹಣ್ಣಾಗತೊಡಗಿದೆ. ಬಿಟ್ಟು ಬಂದ ಗಂಡನನ್ನು, ಅವನು ಕಟ್ಟಿಕೊಂಡವಳನ್ನು ಕುರಿತು ಚಿಂತಿಸಲೂ ಅವಳಿಗೆ ಬಿಡುವಿಲ್ಲ. ಬೇಗ ಬೇಗ ತಿಂಡಿ, ಅಡುಗೆ ಕೆಲಸ ಮುಗಿಸಿ, ಕಾಲೇಜಿಗೆ ಬಸ್ಸು ಹಿಡಿಯಲು ಓಡಬೇಕು.... ಮಮತಾ, ಏ 'ಮಮತಾ ನಿದ್ದಿ ಸಾಕು. ಏಳು,

ಹೊತ್ತಾತು' ಕಿರಿಯ ಮಗಳನ್ನು ಕರೆಯುತ್ತ ಅಡಿಗೆ ಮನೆಗೆ ಧಾವಿಸಿದಳು ಇಂದಿರಾ.

ಕುಕ್ಕರ್ ಇಟ್ಟ ಇಂದಿರಾ ಶಾಲೆಗೆ ಹೋಗಲು ತಯಾರಾಗುತ್ತಿದ್ದ ಮಗಳ ತಲೆ ಬಾಚಲು ಕುಳಿತಳು. 'ಬ್ಯಾಡ ಅವ್ವಾ, ನಾನs ಬಾಚಿಗೋತೀನಿ' ಎಂದು ಮಮತಾ ಕೇಳಿದರೂ ಬಿಡಲಿಲ್ಲ. ಮಗಳ ನುಣುಪಾದ ರೇಶಿಮೆಯಂಥ ಕೂದಲ ಮೇಲೆ ಹಣಿಗೆ ಆಡಿಸುತ್ತ ಆಡಿಸುತ್ತಾ....

ದಟ್ಟವಾದ ಉದ್ದ ಕೂದಲಿನಿಂದ ಮುಖ ಮುಚ್ಚಿಕೊಂಡ ಈಶ್ವರ. 'ಇಂದೂ, ಈಗ ಹಗಲು ಹೋಗಿ ಕತ್ತಲಾಯ್ತು' ಎಂದು ನಗುತ್ತಿದ್ದ. ಅವನ ನೀಳ ಬಲಿಷ್ಠ ಕೈಗಳು ಅವಳನ್ನು ಸುತ್ತಿಕೊಳ್ಳುತ್ತಿದ್ದವು. ಆ ಬಂಧನದಲ್ಲಿ ಅವಳು ಸುಖಿ....

'ಅವ್ವಾ, ಸಾಕು ಬಿಡು, ಎಷ್ಟೊತ್ತು ಬಾಚತೀ, ಸಾಲಿಗೆ ಹೊತ್ತಾಗ್ತದ, ಹಣಿಗಿ ತಾ ಇಲ್ಲೆ' ಮಗಳು ಸಿಡುಕುತ್ತ ಎದ್ದು ಹೋದಾಗ ಇಂದಿರಾ ಪೆಚ್ಚಾದಳು. ಅವಳ ಭಾವಲೋಕದಲ್ಲಿ ನಡೆಯುವ ತುಮುಲದ ಅರಿವು ಮಗಳಿಗಿಲ್ಲ.

ಡಾ॥ ಈಶ್ವರ ತನ್ನ ಎತ್ತರ ನಿಲುವು, ಮಿತವಾದ ಮಾತು, ಪಾಂಡಿತ್ಯ, ವಿದ್ಯಾರ್ಥಿ ವಲಯದಲ್ಲಿ ಹೆಸರು–ಇತ್ಯಾದಿ ಗುಣಗಳಿಂದ ಇಂದಿರಾಳ ಗಮನ ಸೆಳೆದಿದ್ದ. ಇಂದಿರಾ ತನ್ನ ಪಿಎಚ್‌ಡಿ.ಯ ವಿಷಯ ಸಂಗ್ರಹಕ್ಕೆ ಪ್ರೊ. ರಾಮ ಕೃಷ್ಣರೊಡನೆ ಚರ್ಚೆ ಮಾಡಲು ಆಗಾಗ ಹೋಗುತ್ತಿದ್ದಳು. ಅಲ್ಲಿ ಒಂದು ದಿನ 'ಮಿಸ್ ಇಂದಿರಾ, ನಿಮಗ ಯಾವ ಸಹಾಯಬೇಕಾದರೂ ಡಾ॥ ಈಶ್ವರ ಅವರನ್ನು ಕೇಳಿ' ಎಂದು ಪರಿಚಯ ಮಾಡಿಸಿದ್ದರು. ಸಸ್ನೇಹದಿಂದ, ದೊಡ್ಡ ದನಿಯಿಂದ ಎಲ್ಲರನ್ನೂ ಮಾತಾಡಿಸುತ್ತ ಓಡಾಡುವ ಚುರುಕು ಹುಡುಗಿ ಇಂದಿರಾಳನ್ನು ಈಶ್ವರ ಆಗಾಗ ಕ್ಯಾಂಪಸ್‌ನಲ್ಲಿ ನೋಡುತ್ತಿದ್ದ. ಆದರೆ ಪರಿಚಯವಿರಲಿಲ್ಲ. ಪಿಎಚ್.ಡಿ. ವಿಷಯದ ಬಗ್ಗೆ ಚರ್ಚೆ ಮಾಡುತ್ತ, ಜೊತೆಗೆ ತಮ್ಮ ತಮ್ಮ ಜೀವನದ ಬಗ್ಗೆಯೂ ಚರ್ಚೆ ಮಾಡುತ್ತ ಇಬ್ಬರೂ ಹತ್ತಿರ ಬಂದಿದ್ದರು. ದೂರ ಅಸಹನೀಯವಾದಾಗ ಮದುವೆಯಾಗಲು ಬಯಸಿದ್ದರು.

"ಅವ್ವಾರ, ಬೆನ್ನು ನೋವು ಅಂತಿದ್ರಿ, ಎಣ್ಣೆ ಹಚ್ಚಿ ಬಿಸಿನೀರು ಹಾಕ್ತೀನಿ, ಬರ್ರಿ" ಸಿದ್ದವ್ವ ಎಣ್ಣೆ ಬಟ್ಟಲು ಹಿಡಿದು ಬಂದಳು.

'ಮನುಷ್ಯಾ ಸಂಘಜೀವಿ, ಇಂದೂ. ಅಂವಾ ಒಂಟಿಯಾಗಿ ದ್ವೀಪದ ಹಾಂಗ ಇಲ್ಲೆ ಬಾಳಲಿಕ್ಕೆ ಸಾಧ್ಯ ಇಲ್ಲಾ. ಇಡೀ ಜೀವಕೋಟೀನ ಅವಲಂಬಿತ ಅದ. ಈ ಮನಿಯೊಳಗ ನಾವಿಬ್ಬರೂ ನೌಕರಿ ಮಾಡುವವರು. ನಮಗೂ ಯಾರರೆ ಸಹಾಯಕ್ಕ ಬೇಕಾಗ್ತಾರ. ಹಳ್ಳೀಯಿಂದ ನಮ್ಮ ಅಕ್ಕ, ದೊಡ್ಡಕ್ಕ, ಅವಳ ಮಗಾ ಚಿಂತಾಮಣಿನ್ನ ಕರಸೂಣು' ಮದುವೆಯಾದ ಹೊಸದರಲ್ಲಿ ಈಶ್ವರ ಬಹಳ ಕಷ್ಟಪಟ್ಟು ತನ್ನ ಮನ ಒಲಿಸಿದ್ದ. ಈಶ್ವರನ ಮಾತು ನಿಜ. ಕಾಲೇಜಿನ ಪ್ಯೂನ ಕಾಳಯ್ಯ, ಅವನ ಹೆಂಡತಿ ಸಿದ್ದವ್ವನನ್ನು ತಾನೀಗ ಹಚ್ಚಿ ಕೊಂಡಿಲ್ಲವೇ ? ಗಂಡಿನ ಆಸರೆ ಇಲ್ಲದ ಈ ಮನೆಗೆ ಅವರ ಸಹಾಯ ಅಪೇಕ್ಷಿತ.

ಒರಟು ಕೈಗಳ ಸಿದ್ದವ್ವ ಬೆನ್ನು ನೀವುತ್ತಿರುವಾಗ ಹಿತವಾದ ನೋವು. ಮೂವತ್ತು ವರ್ಷಕ್ಕೂ ಹಿಂದೆ ಅವ್ವ ತಲೆಗೆ ನೀರು ಎರೆಯುವಾಗ ಎಣ್ಣೆಯಲ್ಲಿ, ನೀರಿನಲ್ಲಿ ಅವಳ ಅಂತಃಕರಣ ಹರಿದು ಬರುತ್ತಿತ್ತು. ಅವ್ವ ಕ್ಷಯದಿಂದ ನರಳಿ ತೀರಿದ್ದಳು. ಮನೆಯಲ್ಲಿ ಅಪ್ಪ, ಅಣ್ಣಂದಿರ ಪ್ರೀತಿ ವಾತ್ಸಲ್ಯದಲ್ಲಿ ಮರೆವು ನೆರವಿಗೆ ಬಂದಿತ್ತು. ಖಾಲಿಯಾದ ಮನಸ್ಸು ಬೇರೆ ಏನನ್ನೋ ಬಯಸು ತ್ತಿತ್ತು. ಆಗಲೇ ಈಶ್ವರ ಗುರುತಾದದ್ದು.

"ನಿನಗೂ ಡಾ॥ ಈಶ್ವರ ಅವರಿಗೂ ಗುರುತು ಆಗಿ ಎಷ್ಟು ದಿನಾ ಆಯ್ತು ?" ಇಂದಿರೆಯ ಪ್ರೀತಿಯ ಅಣ್ಣ ಅವಳಿಗೆ ಸವಾಲು ಹಾಕಿದ್ದ.

"ಒಂದು ವರ್ಷದ ಮೇಲಾಯ್ತು"

"ಇಷ್ಟು ಕಡಿಮಿ ಅವಧಿಯೊಳಗ ಅವನನ್ನ ನೀನು ತಿಳಕೊಳ್ಳಲಿಕ್ಕೆ ಸಾಧ್ಯ ಇಲ್ಲಾ. ನಮ್ಮ ಸಮಾಜದೊಳಗ ಹುಡುಗಿಗೆ ಒಂದೇ ಸಲ ಮದುವಿ ಆಗೋದು. ಅದಕ್ಕ ನೀ ಇನ್ನೂ ವಿಚಾರ ಮಾಡಿ ನೋಡು."

"ಈಶ್ವರ ಎಲ್ಲಾ ರೀತಿಯಿಂದ ನನಗ ಅನುರೂಪ ಅದಾರ ಅಂತ ನನಗ ಗೊತ್ತಾಗೇದ. ಹೊಂದಿಕೊಂಡು ಹೋಗೋದು ನಮ್ಮ ಕೈಯೊಳಗ ಇರ್ತದ."

ತಂಗಿಯನ್ನು ಮದುವೆಯಾಗುವ ಹುಡುಗ ವಿದ್ಯಾವಂತ, ಸ್ಫುರದ್ರೂಪಿ, ಪ್ರೊಫೆಸರ ಆಗಿದ್ದರೂ ಅವನು ತಮಗಿಂತ ಕೆಳಜಾತಿಯವನು ಎಂದು ತಿಳಿ ದಾಗ ಇಂದಿರೆಯ ಮನೆಯವರೆಲ್ಲ ಅಸಮಾಧಾನಪಟ್ಟಿದ್ದರು. ಪ್ರತಿಷ್ಠಿತ,

ಒಟ್ಟು ಕುಟುಂಬದ ಶ್ರೀಮಂತ ತಂದೆಯ ಮನೆಯಲ್ಲಿ ಈಶ್ವರನಿಗೆ ಸ್ವಾಗತ, ಗೌರವ ಸಿಗುವುದಿಲ್ಲವೆನ್ನುವ ವಿಷಯ ಖಾತ್ರಿ ಮಾಡಿಕೊಂಡ ಇಂದಿರಾ ಎಲ್ಲರ ಹಿತವಚನಗಳನ್ನು ಕಡೆಗಣಿಸಿ, ಮನೆ ಬಿಟ್ಟು ಬಂದು ರಿಜಿಸ್ಟರ್ಡ್ ಮದುವೆಯಾಗಿದ್ದಳು.

ಗಂಡನೂ ತನ್ನಂತೆ ಅಧ್ಯಾಪಕ, ಬುದ್ಧಿಜೀವಿ. ಒಬ್ಬರನ್ನೊಬ್ಬರು ತಿಳಿದುಕೊಂಡು ಮದುವೆಯಾಗಿದ್ದರಿಂದ ತಮ್ಮದು ಆದರ್ಶ ದಾಂಪತ್ಯವಾಗುವುದೆಂದು ಇಂದಿರಾಳ ಕಲ್ಪನೆ. ತನ್ನ ವೃತ್ತಿ, ಮನೆ ಕೆಲಸ, ಪಿಎಚ್.ಡಿ. ಅಭ್ಯಾಸಕ್ಕೆ ಮೊದಲ ಪ್ರಾಶಸ್ತ್ಯ ಕೊಟ್ಟು, ಈಗಲೇ ಮಕ್ಕಳು ಬೇಡವೆಂದ ಇಂದಿರಾಳ ಮಾತಿಗೆ ಈಶ್ವರ ಮಣಿದಿದ್ದ. ಬದಲಾಗಿ ಮದುವೆಯಾದ ಮೇಲೆ ಇಬ್ಬರ ಸಂಬಳವನ್ನು ಜಂಟಿ ಖಾತೆಯಲ್ಲಿ ಇಡಲು ಹೆಂಡತಿಯನ್ನು ಒಪ್ಪಿಸಿದ್ದ.

'ಈ ಸಲದ ರಜಾಕ್ಕ ಅಜಂತಾ, ಎಲ್ಲೋರಕ ಹೋಗಿಬರೋಣ, ಏನು?'

'ಬ್ಯಾಡ ಇಂದೂ ನನಗ ಬರಿಯೋದ ಅದ.'

'ರೋಟರಿ, ಲಯನ್ಸ್, ಚಿತ್ರಾ ಸಂಸ್ಥೆ ಇವಕ್ಕ ಮೆಂಬರ ಆಗೋಣು ಇಬ್ಬರೂ, ಅಂದರ ಬಹಾಳ ಜನರ ಪರಿಚಯ, ಸ್ನೇಹ ಆಗ್ತದ' ಇಂದಿರಾ ಹುರುಪಿನಿಂದ ಹೇಳುತ್ತಿದ್ದಳು.

'ಉಹುಂ' ಅದೆಲ್ಲಾ ಸುಮ್ಮನ ಪ್ರತಿಷ್ಠೆಕ್ಕ. ನಮಗೆ ವೇಳೆ ಎಲ್ಲಿ ಇರ್ತದ? ಓದೋದು, ಬರೆಯೋದು ಬಹಾಳ ಇರ್ತದ' ಈಶ್ವರ ತಣ್ಣಗೆ ಹೇಳುತ್ತಿದ್ದ.

'ಕಲೀಗ್ಸ್, ಸ್ನೇಹಿತರು ಎಲ್ಲಾರೂ ಕೂಡಿ ಕನ್ಯಾಕುಮಾರಿಗೆ ಟ್ರಿಪ್ ಇಟ್ಟಕೊಂಡಾರ. ನಾವು ಹೋಗಿ ಬರೋಣಲ್ಲ. ದಕ್ಷಿಣ ಭಾರತ ನೋಡಿದಾಂಗ ಆಗ್ತದ' ಇಂದಿರಾ ಅಸೆಯಿಂದ ಗಂಡನ ಕ್ರಾಪಿನಲ್ಲಿ ಕೈಯಾಡಿಸುತ್ತಿದ್ದಳು.

'ಛೇ, ಛೇ, ಇಬ್ಬರಿಗೂ ಕೂಡಿ ಎರಡು–ಮೂರು ಸಾವಿರ ಖರ್ಚು ಆಗ್ತದ. ವಿನಾಕಾರಣ ರೊಕ್ಕಾ ಹಾಳು. ಆ ಕಡೆಗೆ ಯಾವಾಗರೆ ಸಮ್ಮೇಲನ, ಸೆಮಿನಾರು ಇದ್ದಾಗ ಹೋಗೂಣಂತ' ಈಶ್ವರ ಖಂಡಿತವಾಗಿ ನಿರಾಕರಿಸಿಬಿಡುತ್ತಿದ್ದ.

ಬಡತನದಲ್ಲಿ ಬೆಳೆದು ಬಂದ ಈಶ್ವರನಿಗೆ ಹಣವೆಂದರೆ ಪಂಚಪ್ರಾಣ. ಹಣ ಖರ್ಚು ಮಾಡುವುದಕ್ಕಿಂತ ಕೂಡಿಹಾಕುವುದರಲ್ಲಿಯೇ ಸಂತೋಷ. ಸ್ವಂತ ಮನೆಯಾಗಬೇಕು. ಹಳ್ಳಿಯಲ್ಲೊಂದು ಹೊಲ ಕೊಳ್ಳಬೇಕು. ಸಾಧ್ಯವಾದರೆ ಕಾರಿನಲ್ಲಿ ಅಡ್ಡಾಡಿ ಸಮಾಜದಲ್ಲಿ ಗಣ್ಯವ್ಯಕ್ತಿಯಾಗಬೇಕು. ಉಳಿದ ಖರ್ಚು ಕಡಿಮೆ ಮಾಡದೆ ಹಣ ಉಳಿಸಲು ಸಾಧ್ಯವಿಲ್ಲ. ಹೀಗಾಗಿ ಇಂದಿರಾಳ ವಿಚಾರಗಳೆಲ್ಲ ಕೃತಿಗಿಳಿಯಲು ಬಿಡುತ್ತಿರಲಿಲ್ಲ. ಬಹಳ ವಾದಿಸಿ, ಜಗಳವಾಡಿದರೆ "ನೀನೊಬ್ಬಳೆ ಹೋಗು, ನಾನು ಬರುವುದಿಲ್ಲ" ಎಂದುಬಿಡುತ್ತಿದ್ದ. ಅವಳ ಯಾವ ಆಸೆಯೂ ಈಡೇರದೆ ಮೂಡ್ ಕೆಟ್ಟುಹೋಗುತ್ತಿತ್ತು. ಅಭ್ಯಾಸ ಹಿಂದೆ ಉಳಿಯತೊಡಗಿತ್ತು. ತಮ್ಮದು ಆದರ್ಶ ದಾಂಪತ್ಯವೇ ? ಎಂದು ಚಿಂತಿಸುವುದರಲ್ಲಿಯೇ ಮಧುಮತಿ, ಮಮತಾ ಹುಟ್ಟಿದರು. ಎರಡೂ ಹೆಣ್ಣು ಮಕ್ಕಳಾದುದಕ್ಕೆ ಒಳಗೊಳಗೆ ಈಶ್ವರನಿಗೆ ಅಸಮಾಧಾನ. ಗಂಡು ಮಗುವಿನ ಅವನ ಆಸೆಗೆ ಇಂದಿರಾ ಮಣಿಯದೆ ಎರಡೇ ಮಕ್ಕಳು ಸಾಕು ಎನ್ನುವ ನಿರ್ಧಾರಕ್ಕೆ ಬಂದಿದ್ದಳು.

'ಅವ್ವಾs ಪಲ್ಲೆ ಬಹಾಳ ಖಾರ ಆಗೇದ. ನನಗ ಸ್ವಲ್ಪ ಮೊಸರು ಹಾಕು.'

'ಅವ್ವಾ ನನಗ ಬಾಳಿಹಣ್ಣು, ಸಕ್ಕರಿ ಕೊಡು.'

ಅನ್ಯಮನಸ್ಕಳಾಗಿ ಉಣ್ಣುತ್ತಿದ್ದ ಇಂದಿರಾ, 'ಹೌದs ಮಧು, ಮರತು ಪಲ್ಲೇಕ ಎರಡು ಸಾರೆ ಖಾರಾ ಹಾಕಿದ್ನೋ ಏನೋ ?' ಎನ್ನುತ್ತ ಎದ್ದಳು.

ಮನೆ ಮಾಡಿದೊಡನೆ ಬಂದು ತಳವೂರಿದ ನಾದಿನಿ ದೊಡ್ಡಕ್ಕ ಮಾಡುವ ಅಡಿಗೆಯೋ, ದೇವರಿಗೆ ಪ್ರೀತಿ. ಗಂಡ ಲೊಟಕೆ ಹೊಡೆದು ಉಣ್ಣುವಾಗ ಇಂದಿರೆಯ ಕಣ್ಣು, ಮೂಗುಗಳಲ್ಲಿ ನೀರು ಇಳಿಯುತ್ತಿತ್ತು. ಅತಿಥಿಗಳು ಮನೆಗೆ ಬಂದಾಗ ಚೆನ್ನಾಗಿ ತಿಂಡಿ, ಅಡಿಗೆ ಮಾಡಲೂ ದೊಡ್ಡಕ್ಕನಿಗೆ ಬರದು. ಅದಕ್ಕೆ ಮತ್ತೆ ಇಂದಿರಾನೇ ನಿಲ್ಲಬೇಕು. ದೊಡ್ಡಕ್ಕನ ವೇಷ-ಭೂಷಣ, ಒರಟು ಮಾತು, ಎಲಡಿಕೆ ತಂಬಾಕು ಹಾಕಿ ಅಲ್ಲಲ್ಲಿ ಪಿಚಿ ಪಿಚಿ ಉಗುಳುವುದು, ಕೆಲಸದವರೊಡನೆ ಹರಟೆ ಹೊಡೆಯುವುದು-ಇತ್ಯಾದಿ ಎಲ್ಲವೂ ಇಂದಿರಾಗೆ

ಅಲರ್ಜಿ. ಇದೇ ವಿಷಯಕ್ಕೆ ಗಂಡ-ಹೆಂಡತಿಗೆ ಎಷ್ಟೋ ಸಲ ಜಗಳವಾಗುತ್ತಿತ್ತು. ತನ್ನ ಮನೆಯಲ್ಲಿಯೇ ತಾನು ಪರಕೀಯಳೆನ್ನುವ ಭಾವನೆ ಹುಟ್ಟುತ್ತಿತ್ತು.

ಬಸ್‌ಸ್ಟಾಪ್‌ನಲ್ಲಿ ಕಂಡ ಮುಖಗಳಿಗೆ ಪರಿಚಿತ ನಗೆ ಬೀರಿ ಗೋಡೆಗೆ ಆತು ನಿಂತಳು ಇಂದಿರಾ.

ಗಂಡ–ಹೆಂಡಿರ ಸಂಬಳದಲ್ಲಿ, ಈಶ್ವರನ ಕೈ ಬಿಗಿ ಹಿಡಿತದಿಂದಾದ ಉಳಿತಾಯದಲ್ಲಿ, ಒಂದು ಸಣ್ಣ ಸುಂದರ ಮನೆ ಕಟ್ಟಿ ಮುಗಿಸಿದ ದಿನ,

'ಗೃಹಪ್ರವೇಶದ ದಿನಾ ನಮ್ಮ ಅಕ್ಕ–ಅಣ್ಣಂದಿರಿಗೆ ಆಮಂತ್ರಣ ಕಳಿಸೂಣು. ಅವರೂ ನೋಡಲಿ ನಮ್ಮ ಹೊಸಾ ಮನಿ' ಎಲ್ಲವನ್ನೂ ಸಾಧಿಸಿದ ಹುರುಪಿನಲ್ಲಿದ್ದ ಇಂದಿರಾ ಗಂಡನ ಹುಬ್ಬುಗಂಟನ್ನು ಗಮನಿಸಿದ್ದಿಲ್ಲ.

ಒಂದು ತರಹದ ಕೀಳರಿಮೆಯಿಂದ ತಮ್ಮಿಬ್ಬರನ್ನು ಕಂಡ ತವರಿನವರೆದುರು ತನ್ನ ಮನೆಯ ಒಪ್ಪ–ಓರಣ, ವಸ್ತ್ರ–ಒಡವೆ, ಅತ್ಯುತ್ತಮ ತಿಂಡಿ, ಊಟದ ರುಚಿ ತೋರಿಸಿ, ರಾಜೋಪಚಾರ ಮಾಡಿ, ತಾನೇ ಸ್ವತಃ ರೂಪಿಸಿಕೊಂಡ ತನ್ನ ಬದುಕಿನಲ್ಲಿ ತಾನೆಷ್ಟು ಸುಖಿಯಾಗಿದ್ದೇನೆ ಎಂದು ಮನಗಾಣಿಸಿಕೊಟ್ಟು ಅವರ ತಪ್ಪು ಕಲ್ಪನೆಯನ್ನು ಹೋಗಲಾಡಿಸಬೇಕೆನ್ನುವುದು ಇಂದಿರೆಯ ಮನದಾಳದ ಹಂಬಲ. ಆದರೆ ಈಶ್ವರನ ಮನಃಸ್ಥಿತಿ ಇದಕ್ಕೆ ತೀರ ವಿರುದ್ಧವಾದದ್ದು. ಅವನು ಮನೆಯಲ್ಲಿದ್ದಾಗ ಇಂದಿರೆಯ ತವರಿನವರು ಯಾರಾದರೂ ಬಂದರೆ, 'ಹಲೋ, ಎಲ್ಲಾ ಆರಾಮು?' ಅಲ್ಲಿಗೆ ಮುಗಿಯಿತು ಮಾತು–ಕತೆ. ತನ್ನ ಕೋಣೆ ಸೇರಿ ಬಾಗಿಲು ಹಾಕಿ ಕುಳಿತುಬಿಡುತ್ತಿದ್ದ. ತನ್ನನ್ನು ಅಳಿಯನನ್ನಾಗಿ ಸ್ವೀಕರಿಸಲು ನಿರಾಕರಿಸಿದವರ ಭೆಟ್ಟಿ, ಮಾತು, ಊಟ-ಉಪಚಾರ ಎಂದರೆ ಅವನ ಮನಸ್ಸಿಗೆ ಕಿರಿಕಿರಿ. ಅಲ್ಲದೆ ಇದೆಲ್ಲಕ್ಕೆ ಅನವಶ್ಯಕವಾಗಿ ಹಣ ಹೆಚ್ಚು ಖರ್ಚಾಗಿ ಮನೆಯ ತಿಂಗಳ ಲೆಕ್ಕದಲ್ಲಿ ಏರುಪೇರಾಗುತ್ತಿತ್ತಲ್ಲ. ಆ ದಿನವೆಲ್ಲ ಮನೆ ಮತ್ತೆ ರಣಾಂಗಣ....

ತನ್ನ ಬದುಕಿನ ಐವತ್ತು ವರ್ಷಗಳಲ್ಲಿ ಉದ್ದಕ್ಕೂ ಕುದುರೆ, ಆನೆ ಸೈನ್ಯಗಳಿಲ್ಲದೆ ಯುದ್ಧ ಮಾಡುವುದೇ ಆಯಿತು. ಇಂದಿರಾ. ದೀರ್ಘ ನಿಟ್ಟುಸಿರು ಬಿಟ್ಟು ಕ್ಲಾಸಿನೊಳಗೆ ಹೋದಳು.

* * *

ಈಶ್ವರ ತುಂಬಾ ಮುಂದಾಲೋಚನೆಯ ಮನುಷ್ಯ ಎಲ್ಲವನ್ನು ಪ್ಲ್ಯಾನ್ ಹಾಕಿಯೇ ಮಾಡುತ್ತಾರೆ ಎಂದು ಮೆಚ್ಚಿಕೊಳ್ಳುತ್ತಿದ್ದ ಇಂದಿರಾ ದಿನವೂ ಕಾಲೇಜಿಗೆ ಹೊರಡುವಾಗ ತನ್ನ ಪರ್ಸಿನಲ್ಲಿ ಹತ್ತು ರೂಪಾಯಿಗಿಂತ ಹೆಚ್ಚು ಇಡಲು ಬಿಡದ ಗಂಡನ ಬಗ್ಗೆ ಒಂದು ರೀತಿಯ ಸಂಶಯದ ಸುಳಿಯಲ್ಲಿ ಸಿಲುಕಿಕೊಳ್ಳತೊಡಗಿದಳು. ಇವರು ತಾನು ತರುವ ಸಂಬಳಕ್ಕಾಗಿಯೇ ತನ್ನನ್ನು ಮದುವೆಯಾದರೇ ? ಪ್ರೀತಿಯೆಲ್ಲ ತೋರಿಕೆಯದಾಗಿತ್ತೇ ? ತನ್ನ ಆಸೆ, ಆಕಾಂಕ್ಷೆ, ರುಚಿ–ಅಭಿರುಚಿ ಎಲ್ಲವನ್ನೂ ಬಲಿಗೊಟ್ಟೆ. ಹೊಂದಿಕೊಳ್ಳುವುದೆಂದರೆ ಏನು ? ತನ್ನ ವ್ಯಕ್ತಿತ್ವವನ್ನು ಸಂಪೂರ್ಣ ನಾಶ ಮಾಡಿಕೊಳ್ಳುವುದೇ ? ತಮ್ಮ ಒಳ್ಳೆಯ ಉಡುಪಿಗಾಗಿ, ತಿನಿಸಿಗಾಗಿ, ಸಿನಿಮಾ–ಪಿಕ್‌ನಿಕ್ ಇತ್ಯಾದಿ ಚೈನಿಗಾಗಿ ಹಣ ಖರ್ಚು ಮಾಡದ ತಂದೆಯ ಬಗ್ಗೆ ಮಧು, ಮಮತಾರಿಗೂ ಪ್ರೀತಿ ಅಷ್ಟಕ್ಕಷ್ಟೇ. ಉಳಿದ ಮಕ್ಕಳಂತೆ ಬೆಳೆಯುವ ಅವಕಾಶವೂ ಗಂಡನ ಇಂಥ ಸ್ವಭಾವದಿಂದ ಮಕ್ಕಳಿಗೆ ಇಲ್ಲವಾಗುತ್ತಿದೆ. ಇದಕ್ಕೆ ಏನು ಉಪಾಯ ? ದೊಡ್ಡ ದನಿಯ, ನಿಷ್ಕಲ್ಮಷ ಮನಸ್ಸಿನ ಇಂದಿರಾ ಆಪ್ತ ಗೆಳತಿಯ ಎದುರು ತನ್ನ ಸಂಶಯವನ್ನು ಬಿಚ್ಚಿ ಹೇಳಿದಳು. ಸರಿ, ಇಷ್ಟು ಸಾಕಲ್ಲ, ಅದಕ್ಕೆ ರೆಕ್ಕೆ–ಪುಕ್ಕ ಹುಟ್ಟಿಕೊಂಡು ಬೇರೆ ಬೇರೆ ಆಕಾರ, ರೂಪ ತಳೆಯತೊಡಗಿತು. ಪ್ರೀತಿಸಿ ಮದುವೆಯಾದ ಇಂದಿರಾಳನ್ನು ತುಂಬಾ ಸುಖವಾಗಿಟ್ಟಿದ್ದೇನೆ, ಒಳ್ಳೆಯ ಉದ್ಯೋಗವಿದೆ, ಎರಡು ಮಕ್ಕಳು, ಸ್ವಂತ ಮನೆ, ಒಂದಿಷ್ಟು ಆಸ್ತಿ, ಎಲ್ಲಾ ಇದ್ದೂ ಇವಳಿಗೆ ತೃಪ್ತಿಯಿಲ್ಲ. ಎಲ್ಲರ ಹತ್ತಿರ ತನಗೆ ಅವಮಾನವಾಗುವಂತೆ ಏನೇನೋ ಹೇಳಿಕೊಂಡು ತಿರುಗುತ್ತಾಳಲ್ಲ. ಇವಳನ್ನು ಹಿಡಿದು ಚೆನ್ನಾಗಿ ಚಚ್ಚಬೇಕು ಎಂದುಕೊಂಡ ಈಶ್ವರನೂ ತಾಳ್ಮೆ ಕಳೆದುಕೊಂಡು ಕೂಗಾಡಿದ. ಅವರ ಸಂಸಾರದಲ್ಲಿಯ ಸಣ್ಣ ಸೀಳುಗೆರೆ ದಿನದಿನಕ್ಕೆ ದೊಡ್ಡದಾಗುತ್ತ ಬಿರುಕುಬಿಟ್ಟಿತು. ಇಬ್ಬರೂ ಬಿರುಕು ಮುಚ್ಚುವ ಪ್ರಯತ್ನ ಮಾಡಲಿಲ್ಲ. ಜಗಳ, ಕೂಗಾಟ, ದ್ವೇಷ, ಚುಚ್ಚು ಮಾತುಗಳು, ಜುಗುಪ್ಸೆ.... ಛೀ....ಛೀ....

"ಓಃ ಇಂದಿರಾ, ನಮಸ್ಕಾರ. ಕಾಲೇಜು ಮುಗಿಸಿ ಮನೀಗೆ ಹೊರಟೀರೇನು ?" ಸುನಂದಾ ಇವಳ ಮಗ್ಗಲು ಸೀಟಿನಲ್ಲಿ ಕುಳಿತುಕೊಳ್ಳುತ್ತ ನಕ್ಕಳು.

"ಹೌದ್ರಿ, ಮಮತಾ ಸಾಲಿಂದ ಬರೂದರಾಗ ಮನೀ ಮುಟ್ಟಬೇಕಂದರ ಇವತ್ತ ತಡಾ ಆಯ್ತು ನೋಡ್ರಿ."

"ಮೊನ್ನೆ ನಿಮ್ಮ ಮಧುನ ಸಂಗೀತ ಚೆನ್ನಾಗಿತ್ರಿ. ದನಿ ಎಷ್ಟು ಇಂಪು ಅದ. ಎಲ್ಲಾರೂ ಮೆಚ್ಚಿಕೊಂಡರು. ನೀವು ಅವಳಿಗೆ ಪ್ರೋತ್ಸಾಹ ಕೊಟ್ಟು ಕಲಿಸಬೇಕ್ರಿ. ಮುಂದ ಬಂದು ಹೆಸರ ಮಾಡ್ತಾಳ."

"ಹಾಂ, ಸುನಂಧಾ, ನಮ್ಮ ಮಧೂಗ ಒಂದ ವರನ ಬಗ್ಗೆ ವಿಚಾರಿಸ್ತೀನಿ ಅಂದಿದ್ರಲ್ಲಾ ಏನಾಯ್ತು ಅದು ?"

ಒಮ್ಮೆಲೆ ಸುನಂದೆಯ ಮುಖ ಪೆಚ್ಚಾಯಿತು. ಇಳಿದನಿಯಲ್ಲಿ, "ಹೋಗಲಿ ಬಿಡ್ರಿ. ಏನ್ಮಾಡ್ತೀರಿ ಅದನ್ನ ಕೇಳಿ. ಬಹಾಳ ಆರ್ಥೊಡಕ್ಸ ಮಂದೀರಿ ಅವರು. ನಿಮಗ ಹೊಂದೂದಿಲ್ಲ. ಆಯ್ತು, ನಾ ಬರ್ತೀನಿ" ಸುನಂದೆ ಇಳಿ ಯುವ ಸ್ಟಾಪ್ ಬಂದಿತ್ತು.

ಸೋತವಳಂತೆ ಕಿಟಿಕಿಗೆ ಒರಗಿ ಕಣ್ಣು ಮುಚ್ಚಿದಳು ಇಂದಿರಾ. ತಾನು ಮನೆ ಬಿಟ್ಟು ಬಂದಾಗ ಮಮತಾ ಚಿಕ್ಕವಳು. ಆದರೆ ಮಧುಗೆ ಎಲ್ಲ ತಿಳಿಯು ತ್ತಿತ್ತು. ಅವಳ ಪ್ರೀತಿ, ಧೈರ್ಯ, ಆಸರೆಯಿಂದಲೇ ವರುಷಗಳನ್ನು ಕಳೆದಿ ದ್ದಾಳೆ. ಇನ್ನು ಅವಳಿಗೆ ಬೇಗ ಮದುವೆ ಮಾಡಿದರ ತನ್ನ ಒಂದು ದೊಡ್ಡ ಜವಾಬ್ದಾರಿ ಕಳೆದಂತೆ. ಮಧು ರೂಪ, ವಿದ್ಯೆ, ಸಂಗೀತ, ಕಲೆ ಯಾವುದರಲ್ಲಿಯೂ ಕಡಿಮೆಯಿಲ್ಲ. ಆದರೂ ಎರಡು–ಮೂರು ವರುಷಗಳಿಂದ ಪ್ರಯತ್ನ ಮಾಡು ತ್ತಿದ್ದರೂ ಅನುರೂಪ ಹುಡುಗ ಸಿಗುತ್ತಿಲ್ಲ. ಸಿಕ್ಕ ಹುಡುಗ ತಮ್ಮ ಮನಸ್ಸಿಗೆ ಒಪ್ಪಿಗೆಯಿಲ್ಲ. ಮಗಳಿಗೆ ಗಂಡ ಸಿಗಲು ತಡವಾದುದಕ್ಕೆ ತಾನು ಗಂಡನಿಂದ ಬೇರೆಯಾಗಿ ಬಾಳುತ್ತಿರುವುದೂ ಒಂದು ಖಚಿತವಾದ ಕಾರಣ. ತನ್ನ ಪರಿ ಸ್ಥಿತಿ ಅರ್ಥಮಾಡಿಕೊಳ್ಳುವ ಜನ ಇದ್ದರೂ ಇರಬಹುದು. ಅವರು ಉದಾರ ವಾಗಿ ಯೋಚಿಸಬಹುದಲ್ಲ. ಜನ ಈಗೀಗ ಬದಲಾಗುತ್ತಿದ್ದಾರೆ. ಕಳೆದ ತಿಂಗಳು ನೋಡಿ ಹೋದ ಹುಡುಗ ಒಪ್ಪದಿದ್ದಾಗ ಯಾಕೋ ತುಂಬಾ ಬೇಸರವಾಗಿತ್ತು.

"ಅವ್ವಾ, ಈ ನಾಟಕಾ ಎಲ್ಲಾ ಬಿಟ್ಟುಬಿಡೂಣು. ನಾನು ಸಿಂಗಾರ ಮಾಡಿಕೊಂಡು, ಬಂದವರ ಮುಂದ ಪ್ರದರ್ಶನಕ್ಕ ಕೂಡ್ರೂದು ಬಿಟ್ಟು ಬೇರೆ ತರಹಾ ಮದುವಿ ಆಗೂದಿಲ್ಲೇನು ?" ಎಂದಿದ್ದಳು ಮಧು ಬೇಸರದಿಂದ.

"ಇಂಥಾ ಮದುವೀ ಬಿಟ್ಟರ ಪ್ರೇಮವಿವಾಹ ಒಂದs ಹಾದಿ ನೋಡ. ಅಂದರ ಹುಡುಗಿ ತಾನs ಒಬ್ಬನ್ನ ಪ್ರೀತಿಸಿ ಮದುವಿ ಆಗೋದು. ಹಾಂಗ ನೀ ಯಾರನ್ನಾದರೂ ಆರಿಸಿದರ ಅಡ್ಡಿಯಿಲ್ಲ, ಮಧು. ನಾ ಸಂತೋಷದಿಂದ ಮದುವೀ ಮಾಡತೇನಿ" ಎಂದಿದ್ದಳು ತಾನು.

ಮಧು ತಿರುಗಿ ಏನೂ ಮಾತಾಡದೆ ಅಲ್ಲಿಂದ ಎದ್ದು ಹೋಗಿದ್ದಳು. ಅವಳ ಸ್ವಭಾವ ಗಂಭೀರ. ತಂದೆಯಂತೆ ಮಾತೂ ಕಡಿಮೆ. ಅವಳಂಥ ಸ್ವಭಾವದ ಹುಡುಗಿಗೆ ಪ್ರೇಮವಿವಾಹ ಸಾಧ್ಯವಿಲ್ಲ. ಎಲ್ಲವನ್ನೂ ಇಂದಿರಾ ಚಿಂತಿಸಿ ತನ್ನ ಪ್ರಯತ್ನ ಮುಂದುವರಿಸಿದ್ದಳು. ಇದೇ ವಿಷಯಕ್ಕೆ ಅಣ್ಣನಿಗೆ ಕಾಗದ ಬರೆದು ಉತ್ತರಕ್ಕಾಗಿ ಕಾಯುತ್ತಿದ್ದಳು. 'ಅನುಗಾಲವೂ ಚಿಂತೆ ಈ ಜೀವಕೆ' ಎನ್ನುವ ಹಾಗೆ ಈಗ ಮಗಳ ಮದುವೆಯ ಚಿಂತೆ ತನ್ನ ಬೆನ್ನು ಹತ್ತಿದ ಬೇತಾಳವಾಗಿದೆ....

ಮನೆಯ ಒಳಗೆ ಬರುತ್ತಿದ್ದ ಹಾಗೇ ಮಮತಾ, 'ಅವ್ವಾ ಪತ್ರ ಹಿಡಿ' ಎಂದಳು. ಅಣ್ಣ ಏನು ಬರೆದಿದ್ದಾನೋ, ಎದೆ ಡವ ಡವ ಎನ್ನುತ್ತಿತ್ತು.

"ಪ್ರೀತಿಯ ಇಂದೂ,

ನಿನ್ನ ಪತ್ರ ಮುಟ್ಟಿ ವಿಷಯ ತಿಳಿಯಿತು. ನನಗೂ ಬಿ.ಪಿ.ಯಿಂದ ತ್ರಾಸಾಗಿತ್ತು. ಆದ್ದರಿಂದ ಬೇಗ ಉತ್ತರ ಬರೆಯಲಿಲ್ಲ. ಮಧುಮತಿಗೆ ಗಂಡು ಹುಡುಕಲು ಬರೆದಿದ್ದೀ. ನಾನು ಅಲ್ಲಲ್ಲಿ ವಿಚಾರಿಸಿದೆ. ಹುಡುಗಿ ಯಾವ ಜಾತಿ ಎಂದು ಕೇಳುತ್ತಾರೆ. ಏನೆಂದು ಹೇಳಲಿ ? ನೀನು ಮದುವೆ ಮಾಡಿಕೊಳ್ಳುವಾಗ ಇದನ್ನೆಲ್ಲ ವಿಚಾರ ಮಾಡಬೇಕಿತ್ತು..."

ಮುಷ್ಟಿಯಲ್ಲಿ ಕಾಗದವನ್ನು ಮುದ್ದೆ ಮಾಡಿ, ಸೋಫಾಕ್ಕೆ ಒರಗಿ ಕಣ್ಣು ಮುಚ್ಚಿದಳು ಇಂದಿರಾ. 'ಅವ್ವಾs ನಿನಗ ದಣಿವು ಆಗೇದ. ಹಾಲು ಕಾಸಿ ತರ್ತೀನಿ.' ಮಮತಾ ಒಳಗೆ ಓಡುತ್ತಿದ್ದಾಗ, ಮಧುನ ತಂಬೂರಿಯ ಝೇಂಕಾರ ಸಣ್ಣದಾಗಿ ಶುರುವಾಗಿ ಕೋಣೆಯನ್ನು ತುಂಬತೊಡಗಿತು.

ಹರಕೆ

ಇನ್ನೂ ಕತ್ತಲು ಇದ್ದಾಗಲೇ ಎದ್ದು ಬೇಗ ಬೇಗ ಕೆಲಸ ಮಾಡಿದ್ದರೂ. ಪಾರವ್ವ ರೊಟ್ಟಿ ಬಡಿಯುತ್ತಿದ್ದಾಗ ಹೊತ್ತು ಏರಿತ್ತು. ಬಿಸಿಲಿನ ಝಳ, ಒಲೆಯ ಕಾವು ಕೂಡಿ ಅವಳ ಹಣೆಯ ಮೇಲಿಂದ ಬೆವರಹನಿ ಸಾಲುಗಟ್ಟಿ ಇನ್ನೇನು, ಕೊಮ್ಮಣಿಗೆಯಲ್ಲಿ ಸುರಿದು ಬೀಳಲಿತ್ತು. ರೊಟ್ಟಿಯನ್ನೆತ್ತಿ ಹಂಚಿಗೆ ಹಾಕುವ ಮೊದಲು ಸ್ವಲ್ಪ ತಡೆದು ಎಡಗೈಯಿಂದ ತೊಗರಿ ಕಟ್ಟಿಗೆ ಚಾಚಿ, ಬಲಗೈಯಿಂದ, ಬೆವರು ಒರೆಸಿ ಚೆಲ್ಲಿದಳು.

ಎದ್ದೊಡನೆ ಶಗಣಿ ಕಸ ಬಳಿದು, ಒಲೆ ಹೊತ್ತಿಸಿ ಮಕ್ಕಳಿಗೆ ಚಹಾ ಕಾಸಿ ಕೊಟ್ಟು, ತಾನು ಉಪವಾಸವಿದ್ದು ನೀರುಕಾಸಿ, ಜಳಕ ಮಾಡಿ ಒಂದು ವಾರದ ಹಿಂದೆ ಈದ ಎಮ್ಮೆ ಹಿಂಡಿ ಹಾಲು ತೆಗೆದಿಟ್ಟು, ರೊಟ್ಟಿ ಬಡಿಯುತ್ತ,

"ಈರಪ್ಪಾs, ಏs, ಈರಪ್ಪಾ," ಮಗನನ್ನು ಕೂಗಿದಳು ಪಾರವ್ವ. ಹೊರಗಿನ ಕಟ್ಟೆಯ ಮೇಲೆ ಗೋಡೆಗೆ ಒರಗಿ ಕುಳಿತು ನಿಧಾನವಾಗಿ ಬೀಡಿ ಎಳೆಯುತ್ತಿದ್ದ ಈರಪ್ಪ ಮಿಸುಕಲಿಲ್ಲ.

"ಏ ಈರೂs, ಈರಣ್ಣಾs ಬಾರಯಪ್ಪಾ, ನನಗ ಹೊತ್ತಾಗತೈತಿ ದೇವರಿಗಿ ಹೋಗಾಕ. ಇಂದ ಅಮಾಸಿ. ದೇವರಿಗೆ ಮೀಸಲತುಪ್ಪ ಕೊಟ್ಟ ಬರಾಕs ಬೇಕು. ಇಂದ ಹಾಲು ನೀನs ಒಯ್ದು ಕೊಟ್ಟ ಬಾರೋಪಾ ವರವೀ ಮನಿಗೋಳಿಗೆ"

ಈರಪ್ಪ ಗಡಸು ದನಿಯಲ್ಲಿಯೇ ಕೂತಲ್ಲಿಂದ ಒದರಿದ. "ಹೋಗ್ಹೋಗು. ನಾ ಏನ ಹೋಗಾಂಗಿಲ್ಲಾ. ಈ ಸುಡೂ ಬಿಸಿಲಾಗ ಅಷ್ಟು ದೂರ ಯಾರ ನಡೀಬೇಕು. ದೇವರಿಗೆ ಹೋಕ್ಯಾಳಂತ ದೇವರಿಗೆ ಯಾರ ಹೇಳಿದ್ದಾರ ಈ

ಯವ್ವಗ. ಕಲ್ಲು ದೇವರು ತಿಂತಾನೇನು ? ಉಣತಾನೇನು ? ನಮಗ ನೀಡಿದರ ನಾವs ಉಂಡೇವು ಆ ಮೀಸಲು ತುಪ್ಪಾ"

ಗಂಡನೂ ಹೀಗೆಯೇ ಭಯಭಕ್ತಿ ಇಲ್ಲದೇ ದೇವರಿಗೆ ನಡಕೊಳ್ಳದೇ ಬಾಯಲ್ಲಿ ಮಣ್ಣು ಹಾಕಿಕೊಂಡು ಹೋದ. ಹಿಟ್ಟಿನ ಕೈಯಿಂದಲೇ ಗಲ್ಲಗಲ್ಲ ಬಡಿದುಕೊಂಡಳು ಪಾರವ್ವ. ಕಲ್ಲಪ್ಪ ಸತ್ತದ್ದು ಹೊಟ್ಟೆಯಲ್ಲಿ ಆದ ಗಡ್ಡೆಯಿಂದ. ಆಪರೇಷನ್ನಿಗೆ ಖರ್ಚು ಮಾಡಲು ಹಣವಿಲ್ಲದ್ದರಿಂದ ಎನ್ನುವದು ಪಾರವ್ವನ ಅಲ್ಪಮತಿಗೆ ತಿಳಿಯದು.

"ಯಪ್ಪಾ ಈರಣ್ಣಾ, ತೋಬಾ ತೋಬಾ ಅನ್ನು, ದೇವಿಗೆ ಹಾಂಗ ಕಲ್ಲು ಅನಬ್ಯಾಡೋ, ನಿಮಗರೆ ಆಕಿ ಬಾಳಟ್ಟು ಆಯುಸ್ಯಾ ಕೊಡಲಿ. ನಿನ್ನ ತಂಗಿಗೆ ಭಲೋ ಗಂಡ ಸಿಗಲಿ. ಸಣ್ಣ ತಮ್ಮನ ಜರಾ ಕಮ್ಮಿ ಆಗ್ಲಿ. ಯಪ್ಪಾ ನನಗರೆ ಯಾರ ಆದಾರೋ ನಿಮ್ಮನ್ನು ಬಿಟ್ಟರ. ನಿಮ್ಮ ಸಲವಾಗೇ ಬದಕೇನಿ. ನಿಮ್ಮಪ್ಪ ಸತ್ತಾಗಿಂದ ಗಂಡಸಿನ ಆಸರ ಇಲ್ಲದ ಹೊಲದಾಗ ಮನ್ಯಾಗ ಕೂಡೇ ದುಡೀತೀನಿ. ದೇವರು ನಿಮಗ ಭೋಲೋ ಮಾಡಲಿ ಅಂತ ಹರಕೀ ಹೊರತೀನಿ. ಅದಕ್ಕೆ ಎಮ್ಮಿ ಈದ ಕೂಡಲೆ ಮೀಸಲ ತುಪ್ಪಾ ಕಾಸಿ ಇಡತೀನಿ." ಮೂಗು ಸೀಟುತ್ತ, ಸೆರಗು ಕಣ್ಣಿಗೆ ಒತ್ತಿದ ಅವ್ವನನ್ನು ನೋಡಿ ಈರಪ್ಪನ ಮನಸ್ಸು ಸ್ವಲ್ಪ ಮರುಗಿತೇನೋ.

"ಇರ್ಲಿ ಬಿಡು, ಅಳಬ್ಯಾಡಾ. ನಿನಗ ಏಟ ಹೇಳಿದರೂ ಆಟರಾಗ ಐತಿ. ಹಾಲು, ತುಪ್ಪದ ರೊಕ್ಕಾ ಡಾಕ್ತರರಿಗೆ ಕರ್ಚು ಮಾಡಿದ್ದರ ಈಟೊತ್ತಿಗೆ ನಾಗಣ್ಣನ ಜರಾ ಕಮ್ಮಿ ಆಕ್ಕಿದ್ದು. ದರಾ ಅಮಾಸೀಗೆ ದೇವರಿಗೆ ಹೋಗೂದು ಬಿಟ್ಟು ಅದs ಬಸ್ ಚಾರ್ಜ ಉಳಿಸಿದ್ದರ ಇಟೊತ್ತಿಗೆ ನನಗ ಒಂದ ಸೈಕಲ್ ಕೊಳ್ಳತಿದ್ದಿ. ನಾ ಅದನ್ನ ಹೊಡಕೊಂಡು ಎಲ್ಲಾ ವರವೀ ಮನೀಗೆ ಹಾಲು ಕೊಟ್ಟು ಬರತಿದ್ದಿ. ಬಿಸಲಾಗ, ಮಳ್ಯಾಗ ನೀ ಬುಟ್ಟೀ ಹೊತಕೊಂಡು ಹರದಾರಿ ನೆಲಾ ನಡಿಯೂದ ತೆಪ್ಪತಿತ್ತು."

"ಆಗಲಿ ಈರಣ್ಣಾ. ಈ ದಪಾ ಸುಗ್ಗಿ ಆತಂದ್ರ ನಿನಗ ಒಂದ ಸೈಕಲ್ ಕೊಡಿಸ್ತೀನಿ. ನಾ ಹಾಲು ಕೊಡು ಮನೀ ಬಾಯಾರ ಗುರ್ತಿನ್ಯಾಗ ಎಲ್ಲರೇ ಹಳೇ ಸೈಕಲ್ ಸಿಗತೈತೇನ ಕೇಳ್ರಿ ಅಂತೀನಿ, ಆತಿಲ್ಲೊ." ಮಗನನ್ನು ರಮಿಸಿದಳು ಪಾರವ್ವ ಹಿಟ್ಟಿನ ಕೈ ತೊಳೆಯುತ್ತ.

"ಹೂಂ. ನೀ ಹಿಂಗ ಅನ್ನಾಕ ಹತ್ತೇ ಭಾಳ ದಿನಾ ಆದ್ವು. ಸುಗ್ಗಿ ಬರತೈತಿ ಹೋಗತೈತಿ. ಒಂದೊಂದ ವರ್ಸ ಮಳೀ ಇಲ್ಲಾ, ಬೆಳೀ ಇಲ್ಲಾ. ಫಾಳೆ ಕೊಡಾಗ ಸುದ್ದಾ ರೊಕ್ಕ ಇರಂಗಿಲ್ಲಾ. ಹ್ವಾದ ವರ್ಸ ಮಳೀ ಭೊಲೋ ಆತು. ಬೆಳೀನೂ ಬಂದಿತ್ತು. ದೊಡ್ಡ ಎಮ್ಮಿಗೆ ಜಡ್ಡ ಆತು. ದನದ ಡಾಕ್ತರ ಕಡೇ ಎಮ್ಮೀ ಒಯ್ಯೂದು ಬಿಟ್ಟಿ ಮಂತ್ರ-ತಂತ್ರ, ಲೋಬಾನ, ಅಂತ ಓಡ್ಯಾಡಿದಿ. ಕಡಿಗೂ ಎಮ್ಮಿಗಿ ಜಡ್ಡ ಹೆಚ್ಚಾಗಿ, ಸತ್ತs ಹೋತು. ಉಳದ ರೊಕ್ಕಾ ಸಾವಕಾರ ಇಸಗೊಂಡ ಹ್ವಾದಾ, ಬ್ಯಾಂಕಿಗೆ ಅಸಲು-ಬಡ್ಡೀಗೆ ರೊಕ್ಕ ಸಾಲಲಿಲ್ಲಾ, ನಾ ಹೇಳಿದ ಮಾತ ನೀ ಕೇಳಂಗಿಲ್ಲಾ. ದುಡೀ ದುಡೀ ಅಂದರ ನಾನರೆ ಏಟ ದುಡೀಬೇಕು ? ಕತ್ತೀ ಹಾಂಗ, ದುಡದರೂ ಹೊಟ್ಟೀತುಂಬ ರೊಟ್ಟಿ ಇಲ್ಲಾ, ಹಾಲ ಇಲ್ಲಾ, ಸುಕಾ ಇಲ್ಲಾ." ರೌಸಿಗೆದ್ದು ವರ ವರ ಒದರಿದ ಈರಪ್ಪ.

"ಇಲ್ಲಪಾ ಈರಣ್ಣಾ ಇನ್ನ ಮ್ಯಾಲೆ ನೀ ಹೇಳಿದಾಂಗ ಕೇಳತೀನ್ಯೊ, ಈವತ್ತ ಒಂದ ದಿನಾ ಹಾಲು ಒಯ್ಯಿ, ಬಾಯಾರಿಗೆ ಹಾಲು ತಪ್ಪಿಸಬಾರ್ದು" ಪಾರವ್ವ ಅಂಗಲಾಚಿದಳು.

"ಇವತ್ತ ಇಮಾಮಸಾಹೇಬರ ಬಾಡಿಗಿ ಸೈಕಲ್‌ಗೆ ರೊಕ್ಕಾ ಕೊಟ್ಟರ ನಾ ಹಾಲ ಒಯ್ಯಾಂವ ನೋಡ ಮತ್ತ. ಇಲ್ಲಾಂದರ ನೀನs ಹೋಗಿ ಕೊಟ್ಟ ಬಾ." ಅವ್ವನನ್ನು ಸಾಕಷ್ಟು ಮೆತ್ತಗೆ ಮಾಡಿದ್ದ ಈರಪ್ಪ ತನ್ನ ಆಸೆಯನ್ನು ಹೇಳಿಕೊಂಡ.

ತಾನು ದೇವರಿಗೆ ಒಯ್ಯುವ ತುಪ್ಪದ ಗಿಂಡಿ, ಹಣ್ಣು-ಕಾಯಿ, ರೊಟ್ಟೀ ಗಂಟು ಎಲ್ಲ ತಯಾರು ಮಾಡಿಕೊಂಡ ಪಾರವ್ವ ಚಂಚಿ ತೆಗೆದು ಎರಡು ರೂಪಾಯಿ ಕೈಗೆ ಕೊಟ್ಟಳು.

"ಇಕಾ ಹಿಡಿ. ಸೈಕಲ್ ಮ್ಯಾಲೇ ಹೋಗು, ಹಾಲು ಕೊಟ್ಟು ಬರೂ ಮುಂದ ಬಿಸಗೋಟ ತೊಗೊಂಡು ಬಾ. ಎಡ್ಡ ದಿನಾ ಆತು ನಾಗಣ್ಣನ ಹೊಟ್ಯಾಗ ಅನ್ನದ ಅಗಳು ಹೋಗಿಲ್ಲಾ. ಒಂದೀಟ ಚಾ ಬಿಸಗೋಟ ಬೀಳಲಿ. ಕಮಲೀ, ಮನೀ ಕಡೆ ಜ್ವಾಕಿ, ನೀರಿಗೆ, ಕಟಿಗ್ಗಿ ಹೋಗೂ ಮುಂದ ಬೇಶಾಗಿ ಬಾಗಿಲಿಗೆ ಕೀಲಿ ಹಾಕ್ಕೊಂಪ ಹೋಗ. ರಾತ್ರೀಗೆ ಬರೇ ರೊಟ್ಟೀ ಮಾಡು. ಕಾರಬ್ಯಾಳಿ ಐತಿ, ನಾಳೆ ಮಧ್ಯಾಹ್ನಕ ನಾ ಬರ್ತೀನಿ. ತಮ್ಮನ್ನ ನೋಡಿಕೊ

ಹಾಲು ಹಿಂಡಿ ಕೊಡು, ಈರಣ್ಣ ಕೊಟ್ಟ ಬರ್ತಾನೆ, ಎಂದು ಹೊರಗೆ ಹೊರಟ ಅವ್ವನನ್ನು ನಿಲ್ಲಿಸಿ, "ಯವ್ವಾ ನೀ ಕೊಟ್ಟ ರೂಪಾಯಿದಾಗ ಬಿಸಗೋಟ, ಸೈಕಲ್ ಎರಡೂ ಬರೂದಿಲ್ಲಾ" ಎಂದು ಹಟ ಹಿಡಿದ ಈರಪ್ಪನ ಕೈಗೆ ಮತ್ತೆ ಮೂರು ರೂಪಾಯಿ ಹಾಕಿ ಪಾರವ್ವ ತನಗಾಗಿ ಬಸ್‌ಸ್ಟಾಂಡಿನಲ್ಲಿ ಕಾಯುತ್ತಿದ್ದ ರುಚವ್ವನನ್ನು ಕೂಡಿಕೊಳ್ಳಲು ಹೊರಬಿದ್ದಳು.

* * *

'ಯವ್ವಾs, ಅಣ್ಣ, ಕಾಲು ಮುರಕೊಂಡು ದವಾಖಾನ್ಯಾಗ ಅದಾನ, ಆಪರೇಶನ್ ಮಾಡಬೇಕೆಂತಬೇ." ಎಂದು ಅಳುತ್ತ ಹೇಳಿದ ಮಗಳ ಮಾತು ಕೇಳಿ ನೆತ್ತಿ ಸುಡುವ ಬಿಸಿಲಿನಲ್ಲಿ ನಡೆದು ಬಂದ ಪಾರವ್ವ ತಲೆಯ ಮೇಲಿನ ಬುಟ್ಟಿಯನ್ನು ನೆಲಕ್ಕೆ ಕುಕ್ಕಿ ದೊಪ್ಪೆಂದು ಕುಳಿತಳು.

ದೇವಿಗೆ ಮೀಸಲು ತುಪ್ಪ ಕೊಟ್ಟು, ಕಾಯಿ ಒಡೆಸಿ, ಪ್ರಸಾದ ಹಿಡಿದು, ಮಕ್ಕಳೊಡನೆ ಊಟ ಮಾಡಿದರಾಯಿತೆಂದು ಬರಿ ಹೊಟ್ಟೆಯಲ್ಲಿ ಬಂದ ಪಾರವ್ವನ ಗಂಟಲು ಒಣಗಿ, ತೇಕು ಹತ್ತಿ, ಕೈಕಾಲು ಸೋತಂಗಾಗಿ, ಕಣ್ಣಿಗೆ ಕತ್ತಲು ಬಂದು ಹಾಗೇ ನೆಲದ ಮೇಲೆ ಉರುಳಿ ಬಿಟ್ಟಳು. ಗಾಬರಿಯಾದ ಕಮಲಿ ಅವಸರ ಮಾಡಿ ಹರಿವೆಯಲ್ಲಿಯ ತಣ್ಣೀರು ತಂದು ಅವ್ವನ ಬಾಯಿಗೆ ಒಂದೆರಡು ಗುಟುಕು ಹನಿಸಿ, ತೇವುಗೈಯಿಂದ ಮುಖ ಒರೆಸಿದಾಗ ಕಣ್ಣು ತೆರೆದ ಪಾರವ್ವ "ನನ್ನ ಕೂಸಿಗೆ ಏನಾತಬೇ" ಎಂದಳು ಕ್ಷೀಣದನಿಯಲ್ಲಿ.

"ಅಣ್ಣ ಹಾಲ ಕೊಟ್ಟ ತಿರಿಗಿ ಬರೂ ಮುಂದ ಆ ಹುಣಸೀಮರದ ಕತ್ತರೀ ಹತ್ತರ ದೆವ್ವನಂತಾ ಟ್ರಕ್ ಬಂದ ಹಾದು ಹೋತಂತಬೇ, ಇಂವಾ ಬಿದ್ದದ್ದ ನೋಡಿ ಹಾಂಗs ಹೊಡಕೊಂಡ ಹೋಗಿಬಿಟ್ಟನಂತ. ಚಾದ ಅಂಗಡಿ ಪರಮಣ್ಣ ನೋಡಿ ದವಾಖಾನಿಗ ಒಯ್ದನಂತ, ಸೈಕಲ್ ಮುರದ ಮೂರತುಕಡಿ ಆಗೇತಿ. ಅಣ್ಣನ ಕಾಲು ಓಟು ಬಾತು ತಿದಿ ಆಗೇತಿ, ನಿಂದರಾಕ ಬರವಾಲ್ದು, ನಿನ್ನೀ ರಾತ್ರಿ ನೋವು ಭಾಳ ಆಗತ್ತೈತಿ ಅಂತ ಹೊಯ್ಕೋತಿದ್ದ. ಬಾವು ಕಡಿಮಿ ಆದ ವ್ಯಾಲೆ ಆಪರೇಶನ್ ಮಾಡತಾರಂತ. ನಡೀಯಬೇ ನಾವೂ ಹೋಗೂಣು ನಾಗಣ್ಣನ ಕರಕೊಂಡ." ಕಮಲಿ ಒಂದೇ ಉಸುರಿನಲ್ಲಿ ಎಲ್ಲ ಹೇಳಿ ಮುಗಿಸಿ ತಮ್ಮನನ್ನು ಎತ್ತಿ ಕೊಂಡಳು.

ಪಾರವ್ವ ಗಳಗಳ ಚೆರಿಗೆ ನೀರು ಕುಡಿದು, ಗೋಡೆಯ ಮೇಲಿದ್ದ ದೇವೀ ಚಿತ್ರಕ್ಕೆ ಕೈಮುಗಿದು, "ಯವ್ವಾ ನನ ತಾಯೀ, ನನ್ನಿಂದ ತೆಪ್ಪ ಆಗಿದ್ದರ ಹೊಟ್ಟ್ಯಾಗ ಹಾಕ್ಕೋ, ಯವ್ವಾ ನನ ಮಗನ ಕಾಲು ಗುಣಾ ಮಾಡು, ನಿನ ಹರಕೀ ತೀರಸತೀನಿ ಸಿಟ್ಟ್ಯಾಗ ಬ್ಯಾಡಾ." ಎಂದು ಬೇಡಿಕೊಂಡು, ಹೊರಡುವಾಗ ಮಗನಿಗಾಗಿ ದೇವಿಯ ಪ್ರಸಾದದ ಚೀಟು ಒಯ್ಯಲು ಮರೆಯಲಿಲ್ಲ.

"ಫೋಟೋ ತೆಗೆದು ನೋಡ್ತೀವಿ. ಮೊಣಕಾಲಿನೊಳಗ ಎಲುಬು ಸೀಳು ಬಿಟ್ಟದ. ನಾಳೆ ಆಪರೇಶನ್ ಮಾಡಿ ಪ್ಲಾಸ್ಟರ ಹಾಕಿ ಕಾಲು ಕಟ್ಟತ್ತೇವಿ, ಆಮ್ಯಾಲೆ ಮನೀಗೆ ಹೋಗ್ರಿ, ಮಲಗಿದಲ್ಲೆ ಮಲಗಿರಬೇಕು ನಿನ್ನ ಮಗಾ, ಮೂರ ವಾರದ ಮ್ಯಾಲೆ ಬರ್ರಿ. ನೋಡಿ ಹೇಳತೇನಿ. ಆರಾಮ ಆಗ್ತಾನ, ಕಾಳಜಿ ಮಾಡಬ್ಯಾಡ."

ಸರಕಾರಿ ಡಾಕ್ಟರರು ಧೈರ್ಯ ಹೇಳಿದಾಗ ಪಾರವ್ವನ ಪಾಲಿಗೆ ಅವರೇ ದೇವರಾಗಿದ್ದರು. ಮತ್ತೆ ಮತ್ತೆ ದೈನಾಸಬಟ್ಟು ಮಗನಿಗೆ ಬೇಗ ಗುಣವಾಗುವಂತೆ ಮಾಡಬೇಕೆಂದು ಅವಳು ಕೇಳಿಕೊಳ್ಳುತ್ತಿರುವಾಗ ಅವರು "ನಾವು ನಾಳೇ ಆಪರೇಶನ್ ಮಾಡ್ತೀವಿ. ನೀನು ಔಷಧಿ, ಇಂಜೆಕ್ಷನ್ ಮತ್ತು ಉಳಿದ ಖರ್ಚಿಗೆ ಇನ್ನೂರು ರೂಪಾಯಿ ತೊಗೊಂಡ ಬಾ" ಎಂದು ಬೇರೆ ರೋಗಿಯತ್ತ ನಡೆದರು.

ಬಿಟ್ಟೂ ಬಿಡಲಾರದೆ ಎಳೆಗರುವನ್ನು ಅಗಲಿ ಹೋಗುವ ಆಕಳಿನಂತೆ ಪಾರವ್ವ ಕಾಲು ಎಳೆಯುತ್ತ ಹಳ್ಳಿಯತ್ತ ಹೊರಟಳು. ದವಾಖಾನೆಯ ಖರ್ಚು ಇನ್ನೂರು, ಸೈಕಲ್ ರಿಪೇರಿಯ ಖರ್ಚು ಇನ್ನೂರು ರೂಪಾಯಿ ಎಲ್ಲಾ ಹೇಗೆ ಜೋಡಿಸಬೇಕೆನ್ನುವ ಚಿಂತೆಯಲ್ಲಿ ದಾರಿ ದೂಕುತ್ತಿದ್ದಳು ಪಾರವ್ವ. ತನಗ ಎಷ್ಟ ಕಷ್ಟಾ ಬರ್ತಾವ, ಒಂದ ಮುಗೀತ ಅನ್ನೂದರಾಗ ಇನ್ನೊಂದ. ಅದೂ ಮುಗೀತ ಅನ್ನೂದರಾಗ ಮತ್ತೊಂದ. ಇಡೀ ಜೀವಮಾನ ಎಲ್ಲಾ ಇಂದಿಲ್ಲಾ ನಾಳ್ಗೆ ಸುಕಾ ಸಿಕ್ಕೀತಂತ ಆಸೇ ಮಾಡೂದರಾಗ ಕಳದಹೋತು, ಇನ್ನ ಈ ಉಸಲ ನಿಲ್ಲೂ ತನಕಾ ಹಿಂಗs ಕಾಣ್ತದ. ಆ ಪರಮಾತ್ಮ ಎಲ್ಲಿದ್ದಾನು ? ಕಣ್ಣು ಮುಚ್ಚಿದ್ದಾನೇನ ? ಪಾಪಾ ಮಾಡಿದವರಿಗೆ ಅಟ ಶಿಕ್ಷಾ ಕೊಡತಾನಂತ ಪುರಾಣದಾಗ ಹೇಳುತಿದ್ರು, ನಾ ಏನ ಹಂತಾ ಪಾಪಾ ಮಾಡೇನಿ. ಸುಳ್ಳಿ ಅಲ್ಲ. ಕಳ್ಳಿ ಅಲ್ಲ, ಹಾಲಿನ್ಯಾಗ ನೀರ ಕೂಡಿಸಿ

ಮೋಸಾ ಮಾಡಾಂಗಿಲ್ಲ, ಬಾಯಾರು ಕೊಡೂ ರೊಕ್ಕಕ್ಕ ಕಿರೇದಿಂದ ಭೋಲೊ ಹಾಲು ಕೊಡ್ತೀನಿ. ಗಂಡನ ಜತೀಗೆ ಚಂದಾಗಿ ಬಾಳೀವು ಮಾಡಿದೆ. ಅಂವನ ಆಯುಸ್ಸು ತೀರಿತ್ತು, ಮಕ್ಕಳ ಮಾರೀ ನೋಡಿ ಕಾಲಾ ಹಾಕಬೇಕೆಂದರ ಈಗ ಹಿಂಗ. ದೇವರ ಪೂಜೆ ತಪ್ಪಸಾಂಗಿಲ್ಲಾ, ಅನಾಸಿಗೆ ಒಮ್ಮೆ ಕಾಯಿ ಒಡಸ್ತೀನಿ, ಮೀಸಲು ತುಪ್ಪಾ ಕೊಡ್ತೀನಿ....ಆದರೂ ಯಾಕ ಸಿಟ್ಟಾಗ್ಯಾಳ ಆಕಿ ?.... ಮೀಸಲು...ಹಾಂ ಮೀಸಲು ಅಂದ ಕೂಡ್ಲೆ ನೆಪ್ಪಾತು, ನನ್ನಿಂದ ತಪ್ಪ ಆಗೇತಿ, ಈ ದೇವೀಗೆ ನಡಕೊಳ್ಳಾಕ ಅವ್ವನ ಹೇಳಿದ್ದು, ಆಕೀನೂ ಹಾಂಗ ಬಯಾ–ಬಕುತಿ–ರೀತಿ–ರಿವಾಜು ಎಲ್ಲಾ ನಡಸತಿದ್ಲು. ಸಾಯೂ ಮುಂದ ನನ್ನ ಹಂತ್ಯಾಕ ಕರದು ಒಂದು ಮಾತ ಹೇಳಿದ್ಲು. 'ಈ ದೇವಿ ಭಾಳ ದೊಡ್ಡಾಕಿ. ಜಗತ್ತಿಗೇ ಆಕೆ ದೇವತೆ. ಆಕಿನ್ನ ಸಂತೋಷದಾಗ ಇಡಬೇಕ ಸಿಟ್ಟು ಬಂದರ ಆಕೀ ನಮ್ಮನ್ನ ಮುಕ್ಕಿ ಬಿಡ್ತಾಳ, ಎಲ್ಲಾ ನಾಸ ಮಾಡಿ ಬಿಡತಾಳ. ಮನೀ ಹೆಣ್ಣಮಗಳ್ನ ಆಕೀ ಸೇವಾಕ್ಕ ಬಿಡಬೇಕ. ಅದಕ್ಕs ನಿಮ್ಮಕ್ಕ ಚೆನ್ನಿನ ನಾ ದೇವರಿಗೆ ಬಿಟ್ಟಿದ್ದು, ನೀ ಈ ರಿವಾಜ ನಡಸಿಕೊಂಡ ಬಾ. ಕಮಲಿ ಇನ್ನೂ ಕೂಸ ಐತಿ, ದೊಡ್ಡಾಕಿ ಆದ ಮ್ಯಾಲೆ ಆಕೀಗೆ ಲಗ್ನಾ ಮಾಡಬ್ಯಾಡಾ. ದೇವಿ ಸೇವಾಕ್ಕ ಬಿಡು, ನಿನಗ ಎಲ್ಲಾ ಭೋಲೋ ಆಕ್ಕೇತಿ, ಮಳೀ ಬೆಳೀ ಬರತೈತಿ, ಉಣ್ಣಾಕ ತಿನ್ನಾಕ, ಕಡಿಮೆ ಆಗೂದಿಲ್ಲಾ. ಈ ರಿವಾಜ ತೆಪ್ಪಸಿದಿ ಅಂದರ ದೇವೀಗೆ ಸಿಟ್ಟ ಬರತೈತಿ' ಅವ್ವನ ಮಾತು ಕಲ್ಲಿನಲ್ಲಿ ಕೊರೆದಂತ ಪಾರವ್ವನ ಮನಸ್ಸಿನಲ್ಲಿತ್ತು ಆದರೆ ಕಲ್ಲಪ್ಪ ಅವಳ ಈ ಮಾತಿಗೆ ಪೂರ್ಣ ವಿರುದ್ಧ ವಾಗಿದ್ದ.

"ಏ ಪಾರೀ ನೀ ಹಿಂತಾದೆಲ್ಲಾ ಹೇಳಬ್ಯಾಡಾ. ಕಮಲಿನ್ನ ನಾ ದೇವರಿಗೆ ಬಿಡೂದಿಲ್ಲಾ, ಆಕೀನ್ನ ಸಾಲೀಗ ಹಾಕಾಂವ. ನಾಕ ಅಕ್ಸರ ಕಲೀಲಿ, ನಮ್ಹಾಂಗ ದಡ್ಡರು ಆಗೂದು ಬ್ಯಾಡಾ ನನ್ನ ಮಕ್ಕಳು. ಆಕೀಗೆ ಗಂಡನ್ನ ಹುಡುಕಿ ಲಗ್ನಾ ಮಾಡಾಂವ. ದೇವರಿಗಿ ಬಿಡೂ ರಿವಾಜು ನಿನ್ನ ತವರುಮನ್ಯಾಗ ಇದ್ದೀತು. ನಮ್ಮ ಮನ್ಯಾಗ ಇಲ್ಲಾ, ಇದ್ದರೂ ನಾ ಬಿಡೂದಿಲ್ಲಾ," ಎಂದು ಗಂಡ ಬೆದರಿಸಿ ಬಿಟ್ಟಿದ್ದ. ಗಂಡ ಹಾಕಿದ ಉಗುಳು ದಾಟುವ ಧೈರ್ಯವಿರದ ಪಾರವ್ವ ತೆಪ್ಪಗಾಗಿದ್ದಳು. ಆದರೆ ಗಂಡ ಹೊಟ್ಟೆಯಲ್ಲಿನ ಗಂಟಿನಿಂದ ಸತ್ತಾಗ ಇದೆಲ್ಲ ದೇವಿಯು ಸಿಟ್ಟು ಎಂದೇ ಬೋರಾಡಿ ಅತ್ತಿದ್ದಳು. ಈರಪ್ಪನೂ

ಅಪ್ಪನ ಗುಣವವನೇ ದೇವರು–ದಿಂಡರು ಬೇಡ. ಈಗ ಕಾಲು ಮುರಿದು ಬಿದ್ದ. ಅಪ್ಪ ಸತ್ತೊಡನೆ ಸಾಲೆ ಬಿಟ್ಟು ಹೊಲದಲ್ಲಿ ದುಡಿಯುತ್ತಿದ್ದ ಅವನಿಗೆ ತಮ್ಮ- ತಂಗಿಯರನ್ನಾದರೂ ಸಾಲೆಗೆ ಕಳಿಸಬೇಕೆನ್ನುವ ಹಂಬಲ. ಅದರಂತೆ ಕಮಲಿ ನಾಲ್ಕನೆ ಇಯತ್ತೆಯವರೆಗೆ ಕಲಿತು ಮುಂದೆ ಕಲಿಯಲು ಪರವೂರಿಗೆ ಹೋಗದೆ ಮನೆ-ಹೊಲ ಕೆಲಸ ಮಾಡುತ್ತ ಇದ್ದಳು. ಅವ್ವ ಸಾಲ ಮಾಡಿ, ಮಕ್ಕಳ ಬಾಯಿ ಬಡಿದು, ಮಾಡುತ್ತಿದ್ದ ಪೂಜೆ ರೀತಿ-ರಿವಾಜು, ದೇವರು ಇವೆಲ್ಲ ಅವಳ ಮನಸ್ಸಿಗೂ ಬರದೆ ಅವ್ವ-ಮಕ್ಕಳಲ್ಲಿ ಆಗಾಗ ಜಗಳವೂ ಆಗುತಿತ್ತು.

"ನಾಗಣ್ಣಾ, ನನ ಕೈ ಸೋತದ, ಸ್ವಲ್ಪ ಇಳದು ನಡೀಯಪ್ಪಾ" ಕಮಲಿಯ ದನಿ ಕೇಳಿದಾಗಲೇ ಪಾರವ್ವ ತಿಳಿವಿಗೆ ಬಂದದ್ದು. ಚಿಕ್ಕ ಮಗನನ್ನು ಎತ್ತಿಕೊಂಡು ತಾನೇ ಭರ ಭರ ಮುಂದೆ ನಡೆದಳು.

ಅವ್ವ ಮೇಲಿಂದ ಮೇಲೆ ಸಿಟ್ಟು ಮಾಡುವುದು, ಸಣ್ಣ ತಪ್ಪಿಗೂ ತನ್ನನ್ನು ಬರಲು ತೆಗೆದುಕೊಂಡು ಹೊಡೆಯುವದು, ಮಕ್ಕಳೊಡನೆ ಜಗಳ ಮಾಡಿ ಅತ್ತು ಕರೆದು ಉಪವಾಸ ಮಲಗುವದು– ಎಲ್ಲದಕ್ಕೆ ತಾನೇ ಕಾರಣ ಎಂದು ತಿಳಿದಿದ್ದ ಕಮಲಿ ತನ್ನನ್ನು ದೇವರಿಗೆ ಬಿಡಬೇಕೆನ್ನುವ ಅವ್ವನ ಹಟಕ್ಕೆ ಮಾತ್ರ ಮಣಿಯದಾಗಿದ್ದಳು. ಅಕ್ಷರ ಕಲಿತು ಚೂರು ಪಾರು ಓದಬಲ್ಲ ಕಮಲಿಯ ತಿಳಿವಿನ ವಿಸ್ತಾರ ದೊಡ್ಡದಾಗಿತ್ತು. 'ಜಗತ್ತಿಗೆಲ್ಲ ದೇವರು ಒಬ್ಬನೇ, ಅದೊಂದು ಶಕ್ತಿ ಅಷ್ಟೇ, ಅದಕ್ಕೆ ರೂಪ, ಆಕಾರಗಳಿಲ್ಲ. ಮನುಷ್ಯ ರಂತೆ ಹಸಿವು–ನೀರಡಿಕೆ ಆಗುವದಿಲ್ಲ, ದೇವರಿಗೆ ಬಲಿ ಕೊಡುವದು, ಹರಕೆ ಹೊರುವದು, ಹೆಣ್ಣನ್ನು ಮೀಸಲು ಬಿಡುವದು ಬೇಕಾಗಿಲ್ಲ. ಇವೆಲ್ಲ ಮನುಷ್ಯರೇ ಮಾಡಿಕೊಂಡದ್ದು. ದೇವರಿಗೆ ಸಂತೋಷವಾಗಬೇಕಾದರೆ ನಾವು ಒಳ್ಳೆಯವರಾಗಬೇಕು. ಅದೇ ಮುಖ್ಯ ಎಂದು ಸಂಗಪ್ಪ ಮಾಸ್ತರರು ಹೇಳಿ ಹೇಳಿ, ಕಟೆದು ಕಟೆದು, ಮಕ್ಕಳ ತಲೆಯಲ್ಲಿ ತುಂಬುತ್ತಿದ್ದದ್ದು ಕಮಲಿಯ ಮನಸ್ಸಿನಲ್ಲಿ ಭದ್ರವಾಗಿ ಬೇರೂರಿದೆ. ಚಹಾದ ಅಂಗಡಿ ಪರಮಣ್ಣ, ತನ್ನ ಈರಣ್ಣ ಎಲ್ಲ ಹಾಗೇ ಹೇಳುತ್ತಾರೆ. ಇವರನ್ನೆಲ್ಲ ಕಂಡರೆ ಅವ್ವನಂಥ ಹಳೆಯ ತರದ ಜನರಿಗೆಲ್ಲ ಸೇರಿಕೆಯಿಲ್ಲ. ಈಗಿನ ಹುಡುಗರು ಪುಂಡರು, ಭಂಡರು, ಬಿಕನಾಸಿಗಳು ಎಂದೆಲ್ಲ ಬಯ್ಯುತ್ತಾರೆ. ಈ ಜನಕ್ಕೆಲ್ಲ ಯಾವಾಗ ತಿಳುವಳಿಕೆ ಬಂದೀತು.

ಆದರೆ ಯಾರು ಏನೇ ಹೇಳಿದರೂ ನಾನಂತೂ ಅವ್ವನ ಹರಕೆ ಒಪ್ಪುವದಿಲ್ಲ, ಎಂಥ ಪ್ರಸಂಗ ಬಂದರೂ ಸರಿ. ನಾನು ಬಸವಿ ಆಗಲು ತಯಾರಿಲ್ಲ, ಯಾರೇನು ಮಾಡುತ್ತಾರೋ ನೋಡೋಣ.'

ಎದೆ ಸೆಟೆಸಿ ತಲೆ ಎತ್ತಿಕೊಂಡೇ ಒಳಗೆ ಹೆಜ್ಜೆಯಿಟ್ಟ ಮಗಳನ್ನು ನೋಡಿ ಪಾರವ್ವನ ಮೈ ಉರಿದು ಹೋಯಿತು. ಕೋಲನ್ನೆತ್ತಿ ಮಗಳನ್ನು ಬಾರಿಸ ಹತ್ತಿದ್ದಳು. "ನೀ ಒಳೆ ಇದಿ ಆಗಿ ಹುಟ್ಟಿದಿ ನನ್ನ ಹೊಟ್ಯಾಗ, ಹುಟ್ಟಿದ ಕೂಡಲೆ ಕುತಿಗಿ ಹಿಚುಕಿದಿರ ಬೇಶ್ ಆಕ್ಕಿತ್ತು."

ಪೆಟ್ಟು ತಿಂದು ಮೈ ಜಡ್ಡುಗಟ್ಟಿದ ಕಮಲಿ ಈ ಸಲ ಸುಮ್ಮನಿರಲಿಲ್ಲ, ಅವ್ವನ ಮೇಲೆ ಏರಿ ಹೋಗಿ ಕಟ್ಟಿಗೆ ಕಸಿದು ಮೂಲೆಗೆ ಒಗೆದಳು. ಸಿಟ್ಟಿನಿಂದ ಥರಥರ ನಡುಗುತ್ತಿದ್ದ ಕಮಲಿಯನ್ನು ನೋಡಿ ಪಾರವ್ವನ ಬಾಯಿ ಬಂದಾಯಿತು. ಕಮಲಿಯ ಮುಖ ರಾವು ಹೊಡೆದಿತ್ತು. ಕಣ್ಣು ಕೆಂಪಾಗಿ ಒಡೆದು ಬೀಳುತ್ತಾವೇನೋ ಎನ್ನುವಷ್ಟು ಹಿಗ್ಗಿದ್ದವು. ಎತ್ತರದ ದನಿಯಲ್ಲಿ ಕಮಲಿ ಒದರಿದಳು.

"ಇಕಾ ಯವ್ವಾ, ಇದಾಽ ಕಡೀ ದಿನಾ, ಇನ್ನ ಮ್ಯಾಲೆ ನೀ ನನ್ನ ಹೊಡದೀ ಅಂದರ ನೋಡ ಪಾಡ ಆಗಂಗಿಲ್ಲಾ, ತಲ್ಯಾಗ ಹುಳಾ ಹೊಕ್ಕವರ ಹಾಂಗ ಮಾಡಬ್ಯಾಡಾ, ನನ್ನ ದೇವರಿಗಿ ಬಿಡೂ ಮಾತ ನೀ ಮರತಬಿಡು. ನನಗ ಜುಲುಮೀ ಮಾಡಿದಿ ಅಂದರ ಯಾರ ಕೂಡರೆ ಓಡಿ ಹೋಕ್ಕೇನಿ. ಎಲ್ಲಾದರೂ ದುಡದು ತಿಂತೇನಿ, ನೆನಪ ಇಟಕೋ."

ತನ್ನನ್ನು ಮೀರಿ ಬೆಳೆದು ನಿಂತ ಮಗಳನ್ನು ನೋಡಿ ದಂಗು ಬಡಿದ ಪಾರವ್ವ ಕುಸಿದು ಬಿದ್ದು ಮುಖಕ್ಕೆ ಸೆರಗು ಮುಚ್ಚಿ ಅಳಹತ್ತಿದಳು. ಜೀವನ ದುದ್ದಕ್ಕೂ ಬರೀ ಕಷ್ಟವನ್ನೇ ಉಂಡ, ಈಗಲೂ ತಮಗಾಗಿ ದುಡಿಯುತ್ತ ಎಲುಬಿನ ಹಂದರವಾಗಿದ್ದ ಅವ್ವನ ಹತ್ತಿರ ಹೋಗಿ ಕೂತು ಕಮಲಿ ಅವಳನ್ನು ತಬ್ಬಿಕೊಂಡಳು. ಅವ್ವನ ದುಃಖವೆಲ್ಲ ನೀರಾಗಿ ಹರಿದು ಹೋಗುವವರೆಗೆ ಕಮಲಿ ಸುಮ್ಮನಿದ್ದಳು. ಆಸರೆ ಇಲ್ಲದೆ ಹೊಯ್ದಾಡಿ ಸೋತು ಹೋಗಿದ್ದ ಪಾರವ್ವ ಮಗಳ ಉಡಿಯಲ್ಲಿ ತಲೆ ಇಟ್ಟು ಕಣ್ಣು ಮುಚ್ಚಿದಳು, ಅವ್ವನ ಹರಿದ ಸೆರಗು ಸರಿಸಿ, ತಲೆಯ ಮೇಲೆ ಕೈಯಾಡಿಸುತ್ತ ಕಮಲಿ ಮೃದುವಾಗಿ ಹೇಳತೊಡಗಿದಳು.

"ಯವ್ವಾ, ನೀ ಚಿಂತೀ ಮಾಡಬ್ಯಾಡಾ, ಅಳಬ್ಯಾಡಾ. ರೊಕ್ಕಕ್ಕ ತಲೀ ಕೆಡಿಸಿಕೋ ಬ್ಯಾಡಾ, ನಾ ಸಾಕಿದ ಕೆಂದ ಆಡು ಅದ ಅಲ್ಲಾ ಅದನ್ನ ಮಾರಿ ಬಿಡೋಣು, ಮತ್ತ ನೀ ಹಾಲು ಕೊಡ್ತೀಯಲ್ಲ ಆ ಬಾಯಾರ ಕಡೇ ಮುಂಗಡ ರೊಕ್ಕಾ ಕೇಳೂಣು. ದಯಾಮಾಯಾ ಇದ್ದವರು ಅಂತೀ ರೊಕ್ಕಾ ಕೊಟ್ಟಾರು. ತಿಂಗಳಾ ಹಾಲು ಕೊಟ್ಟು ಮುಟ್ಟಿಸೂಣು, ಪ್ಲೈವುಡ್ ಫ್ಯಾಕ್ಟರ್‍ಯಾಗ ಪರಮಣ್ಣ ನನಗ ಕೆಲಸ ಕೊಡಸತೀನಿ ಅಂದಾನ. ದಿನಗೂಲಿ ಎಂಟು ರೂಪಾಯಿ ಅಂತ, ನಾ ದುಡದು ಗಂಡಸ ಮಗನಾಂಗ ಮನೀ ನಡಸೆತೇನಿ. ಈರಣ್ಣ ಆರಾಮು ಆಗಿ ಬಂದ ಮ್ಯಾಲೆ ಅವನೂ ದುಡೀತಾನ. ಎಲ್ಲಾರೂ ಕೂಡ ಕಷ್ಟಪಟ್ಟು ದುಡದರ ಸುಕಾ ಸಿಗತೈತಿ. ನಾಗಣ್ಣಗ ಬಾಳಟ್ಟು ಸಾಲೀ ಕಲಸೂಣು, ಅಂವಾ ನೋಕರೀ ಮಾಡಲಿ, ನೀ ಅಳಬ್ಯಾಡಾ ಯವ್ವಾ ಅಪ್ಪ ಹೋದರೂ ನಿನ್ನ ಜೋತೀಗೆ ನಾವು ಆದೀವಿ...."

ಮುಂಬರುವ ಸುಖದ ಕನಸಿನಲ್ಲಿ ತೇಲಾಡುತ್ತಿದ್ದ ಪಾರವ್ವ ಉತ್ತರವನ್ನೇ ಕೊಡಲಿಲ್ಲ.

ನೀಲೀಮಾ ತೀರ

ಭರಪೂರ ಮಳೆಗಾಲ. ಎದೆಯಲ್ಲಿ ನಡುಕ ಹುಟ್ಟಿಸುವ ಗಡುಗಿನ ಗರ್ಜನೆ, ಚಕ್ಕನೆ ಹೊಳೆದು ಕಣ್ಣು ಮುಚ್ಚಿಸುವ ಮಿಂಚಿನ ಹೊಳಪು, ಎಲ್ಲೋ ದೂರದಲ್ಲಿ ಬಡ್‌ಬಡಿಸುವ ಸಿಡಿಲು, ಎದೆಬಡಿತವನ್ನೇ ನಿಲ್ಲಿಸುವ ಕ್ಷಣಗಳು, ಧಾರಾಕಾರ ವಾಗಿ ಮಳೆ ಸುರಿಯುತ್ತಿರುವಾಗ–

ಮುಂಬಾಗಿಲಲ್ಲಿ ನಿಂತು ಅಪ್ಪನ ದಾರಿ ಕಾಯುತ್ತಿದ್ದಳು ಬೇಬಿ. ಭೋರ್ಗರೆ ಯುವ ಕಡಲನ್ನೊಮ್ಮೆ, ಅದನ್ನು ಮೀರಿಸುವಂತೆ ಶಬ್ದಿಸುತ್ತಿದ್ದ ಮುಗಿಲ ನ್ನೊಮ್ಮೆ, ಅಪ್ಪ ದಿನವೂ ನಡೆಯುವ ಕಾಲುದಾರಿಯನ್ನೊಮ್ಮೆ ದಿಟ್ಟಿಸುತ್ತಿ ದ್ದಳು ಬೇಬಿ. ಓ! ಅಲ್ಲಿ ಹೆಜ್ಜೆ ಸಪ್ಪಳ, ಯಾರೋ ಬರುತ್ತಿದ್ದಾರೆ. ಅಪ್ಪನೇ ಇರಬೇಕು. ಎಷ್ಟು ಅವಸರದಿಂದ ಓಡೋಡಿ ಬರುತ್ತಿದ್ದಾನೆ. ಮತ್ತೆ ನನ ಗೊಬ್ಬಳಿಗೇ ಏಕೆ, ಅವನಿಗೆ ಸಂತೋಷವಿಲ್ಲವೇ? ಮಗಳಿಗೆ ಹೊಸ ಅಂಗಿ, ಸಿಹಿ ಯಾದ ಕೇಕು ತರಲು ಅವನಿಗೆ ಆಸೆ ಇಲ್ಲವೇ? ತಾನು ಹೇಳಿದಂತೆ ನೀಲಿ ಬಣ್ಣದ ಅಂಗಿ ಸಿಗದಿದ್ದರೆ ಎಂಥದು ತಂದಾರು? ದಿನವೂ ನೀಲೀಕಡಲು, ನೀಲಿ ಮುಗಿಲು ನೋಡುತ್ತ ಬೆಳೆದ ತನ್ನ ಹೆಸರೂ ನೀಲಿಮಾ– ನೀಲಿ ಬಣ್ಣದ ಅಂಗಿಯೇ ತನಗೆ ಬೇಕು. ಬೇರೆ ತಂದರೆ ತೊಡುವವಳೇ ಅಲ್ಲ. ನಾಳೆಯೇ ಅದನ್ನು ಅಂಗಡಿಗೆ ಹಿಂದೆ ಕಳಿಸುವೆ– ಅರೆ ! ಅವರು ಮುತ್ತು ಅಂಕಲ್. ಪಕ್ಕದ ಮನೆಯವರು, ಅಪ್ಪ ಏಕೆ ಬರಲಿಲ್ಲ? ಅವರು ದೋಣಿ ಬಿಡುವುದೇ ಏಳುಗಂಟೆಗೆ. ಇವತ್ತಾದರೂ ಬೇಗ ಬರ್‍ರಿ ಅಂದಿದ್ದೆ. "ಅಂಕಲ್, ಅಪ್ಪ ಯಾಕೆ ಬರಲಿಲ್ಲಾ ?"

"ಜೋಸೆಫ್ ಈಗ ಬಂದಾನು ಬೇಬಿ. ಮಳೀ ಗಡದ್ದು ಅದ. ನೀ ಒಳಗ ಹೋಗು" ಪಕ್ಕದ ಮನೆ ಬಾಗಿಲು ಮುಚ್ಚಿಕೊಂಡ ಮುತ್ತು.

ಮಳಿ ಬರಲಿ ಬಿಡು, ಇದೇನು ಮಹಾ? ಅಪ್ಪ ತೋಯಿಸಿಕೊಳ್ಳುವದಿಲ್ಲವೇ ? ಹಾಗೆ ನಾನೂ ಇಲ್ಲೇ ನಿಂತೇನು- ಟಪ ಟಪ ಮಳೆ ಹನಿ ಶಬ್ದ ಹೆಚ್ಚಾದಂತೆ "ಬೇಬಿ" ಎಂದು ಕರೆದಳು ಲೀನಾ.

ಬೇಬಿ ಓ ಕೊಡಲಿಲ್ಲ. ಗಳಿಗೆ ಗಳಿಗೆಗೆ ಅವಳ ನಿರಾಶೆ ಕಾದು ಉಗಿಯಾಗಿ, ಮೇಲೆ ಮೇಲೆ ಏರಿ ಹೋಗಿ, ಮುಖ ಮೋಡಗಟ್ಟಿತ್ತು.

"ಬೇಬಿ, ಒಳಗ ಬಾ" ಒಳಗಿನಿಂದ ಬಂದ ಲೀನಾ ಮಗಳನ್ನು ಎಳೆದು ಅಪ್ಪಿಕೊಂಡು ಜೋರೆಂದು ಸುರಿಯುತ್ತ ಕತ್ತಲನ್ನು ಇನ್ನಷ್ಟು ಗಾಢವಾಗಿಸುತ್ತಿದ್ದ ಮಳೆಯನ್ನೇ ದಿಟ್ಟಿಸಿದಳು.

"ಅಮ್ಮಾ, ಅಪ್ಪ ಇನ್ನೂ ಬರಲಿಲ್ಲ. ನನ್ನ ಹೊಸ ಫ್ರಾಕ್, ಕೇಕು, ಮೇಣದಬತ್ತಿ..." ಅದುವರೆಟ್ಟು ದುಃಖ ಈಗ ಕೆನ್ನೆಯಮೇಲೆ ಹರಿಯಹತ್ತಿತು. ಬೇಬಿಯ ಹುಟ್ಟು ಹಬ್ಬದ ದಿನ ಒಂದು ತಾಸು ಮೊದಲೇ ದೋಣಿಯನ್ನು ಬಿಡುತ್ತೇನೆಂದು ಹೇಳಿದ ಜೋಸೆಫ್ ಇನ್ನೂ ಮನೆಗೆ ಬರಲಿಲ್ಲವೆಂದು ಲೀನಾಗೂ ಚಿಂತೆ. ಸುರಿಯುವ ಮಳೆಯಲ್ಲಿ ಹೇಗೆ ಬಂದಾನು ? ಆಸರೆಗೆ ಎಲ್ಲಿಯಾದರೂ ನಿಂತಿದ್ದಾನು. ಬಂದಿದ್ದರೆ ಈ ಥಂಡಿಯಲ್ಲಿ ತಾನೂ ನೆರೆಮನೆಯ ಪಾತುಮ್ಮನಂತೆ ಗಂಡನಿಗೆ ಬಿಸಿನೀರು ಎರೆಯುತ್ತಿದ್ದಳು.

"ಈ ಬಂದಾರು ಬೇಬಿ, ಒಳಗ ಬಾ, ಪೇಟೆಗೆ ಹೋಗಿ ಬರಬೇಕಲ್ಲ. ಅದಕ್ಕೇ ತಡವಾಗಿರಬೇಕು. ತಲೆ ಒದ್ದೆಯಾಗಿವೆ. ಒರಸ್ತೀನಿ ಬಾ, ನೆಗಡಿಯಾದರೆ ನಿನ್ನ ಶಾಲೆ, ಪರೀಕ್ಷೆ ಎರಡೂ ತಪ್ಪುತ್ತೆ ಅಲ್ಲವಾ?"

ತಾಯಿ ತಲೆ ಒರೆಸಿದ ಬಳಿಕ ಅಗ್ಗಿಷ್ಟಿಕೆಯ ಹತ್ತಿರ ಕುಳಿತ ಬೇಬಿಗೆ ಚಳಿಯಾಗತೊಡಗಿತು. ನಾಳೆ ತನಗೆ ಜ್ವರ ಬರ್ತದೇನೋ, ನೆಗಡಿಯೂ ಆಗ್ಬಹುದು ತಲೆ ನೋಯುತ್ತೆ. ನಾಡಿದ್ದೇ ಪರೀಕ್ಷೆ ತಾನು ಮಲಗಿಬಿಟ್ಟರೆ ಪರೀಕ್ಷೆ ತಪ್ಪಿ ಹೋಗಿ ಮಾರ್ಕ್ಸ್ ಕಮ್ಮಿ ಬೀಳುತ್ವೆ. ರ್‍ಯಾಂಕ್ ತಗೋಳ್ಳೊಕ್ಕಾಗಲ್ಲ. ಮತ್ತೆ ಅಪ್ಪುಕುಟ್ಟನೇ ಫಸ್ಟ್ ಬರ್ತಾನೆ. ಉಹುಂ, ತಾನೂ ಮಲಗೊಲ್ಲ. ಶಾಲೆ ತಪ್ಪಿಸೊಲ್ಲ. ಅಷ್ಟೇ ಅಲ್ಲ, ಅಪ್ಪ ತರೋ ನೀಲಿ ಅಂಗಿ ಹಾಕಿಕೊಂಡು ನಾಳೆ ತಾನು ಶಾಲೆಗೆ ಹೋಗ್ಬೇಕು. ಎಲ್ಲರೂ ತನಗೆ ಹ್ಯಾಪಿ ಬರ್ತಡೇ ಹೇಳಬೇಕು.

ಅಪ್ಪುಕುಟ್ಟಿ ತನಗೆ ಹ್ಯಾಪಿ ಬರ್ತಡೇ ಹೇಳ್ಬಹುದಾ ? ಮಹಾ ಸೊಕ್ಕು ಅವನಿಗೆ ! ತಾನೇ ಜಾಣ ಅಂತ ತಿಳ್ಕೊಂಡಿದ್ದಾನೆ. ಅವನ್ನ ಹಿಂದೆ ಹಾಕಲೇ ಬೇಕು. ಈ ಸಲ ತಾನೇ ಫಸ್ಟ್ ಬರಬೇಕು. ಕಣ್ಣು ಎಳೆಯುತೊಡಗಿದವು.

ತೂಕಡಿಸುತ್ತಿದ್ದ ಬೇಬಿ ತಾಯಿಯ ಒತ್ತಾಯಕ್ಕೆ ಗಂಜಿ ಉಂಡು ಮಲಗಿದಳು. ದೀಪವಿಟ್ಟುಕೊಂಡು ಗಂಡನ ದಾರಿ ಕಾಯುತ್ತಿದ್ದ ಲೀನಾ ಹತ್ತು ಗಂಟೆಯ ಶಬ್ದ ಕೇಳಿದಳು. 'ಅಪ್ಪ' 'ಅಪ್ಪ' ಎಂದು ಕನವರಿಸುತ್ತಿದ್ದ ಮಗಳತ್ತ ಬಾಗಿ, ತಲೆ ನೇವರಿಸಿ ಕಂಬಳಿ ಹೊಚ್ಚಿದಳು. ಮಗಳಿಗೆ ಅಪ್ಪ ಎಂದರೆ ಪಂಚಪ್ರಾಣ. ತಮಗೂ ಅಷ್ಟೇ. ಒಬ್ಬಳೇ ಮಗಳಲ್ಲವೇ ? ಮದುವೆಯಾಗಿ ಹತ್ತು ವರ್ಷದ ಮೇಲೆ ಹುಟ್ಟಿದವಳು. ಅವಳ ರೂಪ, ಬುದ್ಧಿ ಎಲ್ಲರೂ ಮೆಚ್ಚುವವರೇ. ಎಂಟು ವರ್ಷಕ್ಕೇ ಎಷ್ಟೊಂದು ಬುದ್ಧಿ. ಪಾಪ ! ದೊಡ್ಡವರ ಮನೆಯಲ್ಲಿ ಹುಟ್ಟಬೇಕಾದವಳು ಬಡ ಮೀನುಗಾರನ ಮಗಳಾದಳು. ನಾಳಿನ ಅವಳ ಹುಟ್ಟುಹಬ್ಬಕ್ಕೆ ಹೊಸ ಅಂಗಿ, ಕೇಕು ತರಲು ದುಡ್ಡಿಗಾಗಿ ಅಪ್ಪ ಇಂದು ಎಷ್ಟು ಕಷ್ಟಪಡಬೇಕು ಎನ್ನೋದು ಪಾಪ ಈ ಹಸುಳೆಗೇನು ಗೊತ್ತು. ಲೀನಾಳ ಕಣ್ಣು ತುಂಬಿ ಬಂದವು. "ದೇವರೇ, ಈ ದಿನ ಚೆನ್ನಾಗಿ ಮೀನು ಸಿಗುವಂತೆ ದಯೆ ತೋರಪ್ಪಾ" ಎಂದು ಮುಖ ಮೇಲೆತ್ತಿ ಬೊಗಸೆ ಒಡ್ಡಿದಳು.

ಆಕಾಶವೇ ಹರಿದುಕೊಂಡು ಬಿತ್ತೋ ಎನ್ನುವಂತೆ ಒಮ್ಮೆಲೆ ಧಡ ಧಡ ಸಪ್ಪಳವಾಗತೊಡಗಿತು. ಅದೂ ಹತ್ತಿರದಲ್ಲಿಯೇ. ಬೇಬಿ ಗಾಬರಿಯಿಂದ ಎದ್ದು ಕುಳಿತಳು. ಲೀನಾ ಚೀರುತ್ತ ಮಗಳನ್ನು ಎಳೆದುಕೊಂಡು ಮನೆ ಬಿಟ್ಟು ಹೊರಗೆ ಓಡಿದಳು. ಭೂಕಂಪವಾಗುತ್ತಿದೆಯೇನೋ ಎನ್ನುವಭಯ ಅವಳಿಗೆ ಆದರೆ ಹೊರಗೆ ಎಲ್ಲರೂ ಸರೋವರದ ಕಡೆಗೆ ಓಡುತ್ತಿದ್ದರು. ಕಡಲಿನ ಒಂದು ಭಾಗವೇ ಸರೋವರವಾಗಿತ್ತು ಅಲ್ಲಿ. ಅದರ ಮೇಲೊಂದು ಸೇತುವೆ. ಮುತ್ತು ಒದರುತ್ತಿದ್ದ, "ನೋಡ್ರಿ, ಟ್ರೇನ್ ಬೀಳ್ತಾ ಇದೆ ಸರೋವರದಲ್ಲಿ. ಅಲ್ಲಿ ನೋಡ್ರಿ." ಲೀನಾ ಥರ ಥರ ನಡುಗುತ್ತಿದ್ದಳು. ಅವಳ ಕಣ್ಣೆದುರೇ ಆಟಿಗೆ ಸಾಮಾನಿನಂತೆ ಟ್ರೇನ್ ಡಬ್ಬಿಗಳು ನೀರಿನೊಳಕ್ಕೆ ಬೀಳುತ್ತಿದ್ದವು. ಬೀಳುತ್ತಿದ್ದ ಒಂದು ಡಬ್ಬಿಯ ಗಾಲಿಗಳು ಸೇತುವೆಗೆ ಸಿಕ್ಕಿ ಹಾಕಿಕೊಂಡು ಅಲ್ಲಿಯೇ ಜೋತಾಡತೊಡಗಿದವು. ಡಬ್ಬಿಯೊಳಗಿಂದ ಜನ ಪುತು ಪುತು ನೀರಿನೊಳಕ್ಕೆ ಉದುರುತ್ತಿದ್ದರು. ಮಳೆ ನಿಂತ ಮೇಲೆ

ಚದುರಿದ ಮೋಡಗಳ ನಡುವಿನ ಚಂದ್ರನ ಕ್ಷೀಣ ಬೆಳಕಿನಲ್ಲಿ ಜನ ಬಾಯಿ ಮುಚ್ಚದೆ ಬೆರಗಾಗಿ ನೋಡಿದರು. ಮೈಮರೆತ ಲೀನಾ ಇತ್ತ ತಿರುಗುವಷ್ಟ ರಲ್ಲಿ ಬೇಬಿ ಇರಲಿಲ್ಲ. ಆ ಗದ್ದಲದೊಡನೆ ಒಂದಾಗಿ ಓಡಿಬಿಟ್ಟಿದ್ದಳು. ಕತ್ತ ಲೆಯಲ್ಲಿ ಲೀನಾ "ಬೇಬಿ, ಬೇಬಿ, ಜೋಸೆಫ್, ಬೇಬಿ ಎಲ್ಲಿ?" ಎಂದು ಚೀರುತ್ತ ಕಾಲು ಬಂದತ್ತ ಓಡಿದಳು.

* * *

ತನ್ನ ಕೆನ್ನೆಯ ಮೇಲೊಮ್ಮೆ ಮೃದುವಾಗಿ ಬೆರಳಾಡಿಸಿ ಗೋಪಿ ಮೀಸೆಯ ಮರೆಯಲ್ಲಿ ನಕ್ಕ. ಮತ್ತೊಮ್ಮೆ ಆಡಿಸಲೂ ಹೆದರಿಕೆ ಅವನಿಗೆ. ಬೆಂಗಳೂರು ಸ್ಟೇಶನ್‌ನಲ್ಲಿ ತನ್ನನ್ನು ಬೀಳ್ಕೊಡುವಾಗ ಯಾರೂ ಕಾಣದಂತೆ ಚಂದ್ರಿಕಾ ಕೊಟ್ಟ ಹೂ ಮುತ್ತು ಅಲ್ಲಿತ್ತು. ಅಳಿಸಿ ಹೋಗುವದೇನೋ ಎನ್ನುವ ಕಾತರ ಅವನಿಗೆ. ಮತ್ತೊಮ್ಮೆ ಅವಳನ್ನು ಭೆಟ್ಟಿಯಾಗುವವರೆಗೆ ಅದು ಅಲ್ಲಿಯೇ ಇರಲಿ, ಹುಚ್ಚು ಹುಡುಗಿ! ಮದುವೆಯಾಗಿ ಎರಡು ತಿಂಗಳಲ್ಲಿ ಎಷ್ಟು ಹಚ್ಚಿ ಕೊಂಡಿದ್ದಾಳೆ ತನ್ನನ್ನು. ನಾಲ್ಕಾರು ದಿನಗಳ ಮಟ್ಟಿಗೆ ಆಫೀಸ್ ಕೆಲಸಕ್ಕೆ ತ್ರಿವೇಂದ್ರಂಗೆ ಹೋಗಬೇಕು ಎಂದಾಗ ಕಣ್ಣೀರು ಸುರಿಸಿದ್ದು ನೋಡಿದರೆ– ಕೆಲವು ದಿನಗಳ ಹಿಂದೆ ಈ ಹುಡುಗಿ ಯಾರೋ ಏನೋ? ಬೆಂಗಳೂರಲ್ಲಿಯೇ ಹುಟ್ಟಿ ಬೆಳೆದ ತಾವಿಬ್ಬರೂ ಎಷ್ಟೋ ಸಲ ಅಪರಿಚಿತರಂತೆ ಒಬ್ಬರನ್ನೊಬ್ಬರು ದಾಟಿ ಹೋಗಿರುವುದು ಸಹಜ. ಆದರೆ ಈಗಿರುವ ಈ ಬಾಂಧವ್ಯ, ಈ ಪ್ರೀತಿ, ಈ ಬೆಸುಗೆ ಜನ್ಮಜನ್ಮಾಂತರದ್ದೇ ಇರಬಹುದು. ತ್ರಿವೇಂದ್ರಂಗೆ ತಾನೂ ಬರುವು ದಾಗಿ ಹಟ ಹಿಡಿದ ಅವಳನ್ನು ಸೀರೆ ಒಡವೆಗಳ ಆಸೆ ತೋರಿಸಿ ಸಮಾಧಾನ ಪಡಿಸಿ ಬರಬೇಕಾದರೆ ಸಾಕು ಬೇಕಾಯಿತು. ತನಗಾದರೂ ಅವಳನ್ನು ಬಿಟ್ಟು ಬರುವ ಮನಸ್ಸಿತ್ತೇ? ಅಲ್ಲಿಂದ ಮತ್ತೆ ನಾನು ಅತ್ತಿತ್ತ ಟೂರು ಮಾಡುವ ದಿತ್ತಲ್ಲ. ಅಪರಿಚಿತ ಜನ, ಊರು, ಭಾಷೆ, ಒಬ್ಬಳನ್ನೇ ಹೋಟೆಲ್‌ನಲ್ಲಿ ಬಿಡು ವುದು ಒಳ್ಳೆಯದಲ್ಲ ಎನ್ನುವುದಕ್ಕೆ ಇಷ್ಟೆಲ್ಲ ಪಡಿಪಾಟಲು.

ಚಂದ್ರಿಕಾಳ ನೆನಪಿನಿಂದಾಗಿ ಟ್ರೇನಿನ ಕುಲುಕಾಟದಿಂದಾಗಿ ನಿದ್ರೆ ಬಾರದ ಗೋಪಿ ಅತ್ತಿತ್ತ ನೋಡಿದ. ಪ್ರೊಫೆಸರ, ಅವರ ತಂಗಿ, ಅವಳ ಮಕ್ಕಳು.

ಇನ್ನೊಬ್ಬ ಆಫೀಸರ ಎಲ್ಲ ಹಾಯಾಗಿ ನಿದ್ದೆ ಮಾಡುತ್ತಿದ್ದಾರೆ. ತನ್ನೊಡನೆ ಬೆಂಗಳೂರಿನಿಂದ ಪ್ರವಾಸಕ್ಕೆ ಹೊರಟ ಅವರೆಲ್ಲರ ಪರಿಚಯು ಅಷ್ಟಕ್ಕಷ್ಟೇ. ಇದ್ದುದರಲ್ಲಿಯೇ ಪ್ರೊಫೆಸರರು ಮಾತುಗಾರರು. ರಜೆಗೆ ತವರಿಗೆ ಬಂದಿದ್ದ ತಂಗಿ ಮತ್ತು ಅವಳ ಮಕ್ಕಳನ್ನು ತಿರುಗಿ ಕಳಿಸಲು ಹೊರಟಿದ್ದಾರೆ. ಹಾಗೆಯೇ ಕೇರಳವನ್ನು ಸುತ್ತಾಡಿ ಬರಬೇಕೆಂದು ಅವರ ಪ್ಲ್ಯಾನು. ಈಗಾಗಲೇ ನೋಡಿ ದ್ದಾರೆ. ಆದರೂ ತುಂಬಿದ ಮಳೆಗಾಲದಲ್ಲಿ ಕೇರಳದ ನೈಸರ್ಗಿಕ ಚೆಲುವನ್ನು ಸವಿಯಲು ಅವರಿಗೆ ಆಸೆ. ಕವಿಯೂ ಆಗಿದ್ದ ಅವರನ್ನು ಇಲ್ಲಿಯ ನಿಸರ್ಗ ಸೌಂದರ್ಯವೇ ಮತ್ತೆಮತ್ತೆ ಎಳೆಯುತ್ತದೆ ಎಂದು ಭಾವಪರವಶರಾಗಿ ಹೇಳಿ ದ್ದರು. ಪ್ರೊಫೆಸರರ ಮಾತಿನ ಮೋಡಿ ಚಂದ್ರಿಕಾಳ ವಿರಹವನ್ನು ಕೆಲ ಹೊತ್ತಾ ದರೂ ಮರೆಸಿತ್ತು. ಅವರ ತಂಗಿ ಕೊಟ್ಟ ಚಕ್ಕುಲಿ ಬಹಳ ರುಚಿಯಾಗಿತ್ತು. ಚಂದ್ರಿಕಾ ಈ ರೀತಿ ಅಡಿಗೆ–ತಿಂಡಿ ಮಾಡಲು ಕಲಿಯಬೇಕು. ಶ್ರೀಮಂತರ ಮಗಳು ಚೆಲುವೆ ಚಂದ್ರಿಕಾಳಿಗೆ ಕೆಲಸ ಮಾಡಿ ಅಭ್ಯಾಸವಿಲ್ಲ. ಹೊಸತಾಗಿ ಮದುವೆಯಾದ ತಮ್ಮ ಮುಂದೆ ಇನ್ನೂ ದೀರ್ಘಾವಧಿ ಇದೆ. ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು, ತಮ್ಮ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಒಳ್ಳೆಯ ಜೋಡಿ ಎನಿಸಿಕೊಳ್ಳಬೇಕು–ಹರಿದಾಡುತ್ತಿದ್ದ ಮನಸ್ಸು ಸ್ಥಿಮಿತಕ್ಕೆ ಬಂದಂತಾ ಯಿತು. ಕುತ್ತಿಗೆಯವರೆಗೆ ಶಾಲು ಎಳೆದುಕೊಂಡು ಗೋಪಿ ಕಣ್ಣು ಮುಚ್ಚಿದ.

ಧಡಲ್ ಎನ್ನುವ ಶಬ್ದಕ್ಕೆ ಎಚ್ಚರವಾದ ಗೋಪಿ ದೂರ ಸಿಡಿದು ಬಿದ್ದ. ಎದ್ದು ನಿಲ್ಲಲು ಹೋದ. ಸಾಧ್ಯವಾಗದೆ ಜೋಲಿ ಹೊಡೆಯುತ್ತ ಹಾಗೆಯೇ ಮಲಗುವ ಹಲಗೆಗೆ ಡಿಕ್ಕಿ ಹೊಡೆದ. ದಡ ದಡ ಮೂಟೆ ಉರುಳಿದಂತೆ ಒಬ್ಬರ ಮೇಲೊಬ್ಬರು ಬೀಳುತ್ತಿದ್ದಾರೆ. ಕಾಲು ಮೇಲಾಗಿ ತಲೆ ಕೆಳಗಾಗುತ್ತಿದೆ– ಏನಾಗುತ್ತಿದೆ ಎನ್ನುವುದು ಹೊಳೆಯುವ ಮೊದಲೇ ರೇಲ್ವೆ ಡಬ್ಬಿ ಅಪ್ಪಳಿಸಿ ತಳಕ್ಕಿಳಿಯುತ್ತಿದ್ದ ಇನ್ನೊಂದು ಡಬ್ಬಿಯ ಮೇಲೆ ಬಿದ್ದಿತ್ತು. ಹಾಹಾಕಾರ, ಚೀತ್ಕಾರ, ಕೂಗಾಟ, ಅಳುವಿನಿಂದ ಸರೋವರದ ಅಲೆಗಳು ಎದ್ದೆದ್ದು ಅಪ್ಪಳಿಸಿ ಬಿದ್ದು ಏಳುತ್ತಿದ್ದವರನ್ನು ಇನ್ನಷ್ಟು ಮುಳುಗಿಸಿದ್ದವು. ಡಬ್ಬಿಯಲ್ಲಿ ನೀರು ತುಂಬಿಕೊಳ್ಳುತಿದ್ದಂತೆ ಒಬ್ಬೊಬ್ಬರೇ ಕೈಗೆ ಸಿಕ್ಕಿದ್ದನ್ನು ಆಸರೆಗೆ ಹಿಡಿದು ಜೋತಾಡತೊಡಗಿದರು. ಗೋಪಿಯ ಕಾಲು ಕೆಳಗೆ ಸಿಕ್ಕಿ ಎಳೆದುಕೊಳ್ಳಲು ಬಾರದೆ ಒದ್ದಾಡುತ್ತಿದ್ದ. ಅವನ ಕಾಲ ಮೇಲೆ ಲಗ್ಗೇಜುಗಳಲ್ಲದೆ ದೇಹದ

ಭಾರವೂ ಇತ್ತು. ಅವನಿಗೆ ನಿಲ್ಲಲೂ ಆಗದೆ ಒಳಗೆ ನುಗ್ಗುತ್ತಿದ್ದ ನೀರಿನಿಂದ ತಪ್ಪಿಸಿಕೊಳ್ಳಲೂ ಸಾಧ್ಯವಾಗದೆ ಅರ್ಧ ಮುಳುಗಿಬಿಟ್ಟಿದ್ದ.

ಇನ್ನಷ್ಟು ಹೊತ್ತು ಇಲ್ಲಿಯೇ ಉಳಿದರೆ ತನ್ನ ಸಾವು ಖಚಿತ. ತನ್ನ ಬದುಕು ಇನ್ನೂ ದೀರ್ಘವಾಗಿರುವಾಗ ಈ ಚಿಕ್ಕ ವಯಸ್ಸಿನಲ್ಲಿ ಇಂಥ ಒಂದು ದುರಂತದಲ್ಲಿ ಜೀವನ ಮುಕ್ತಾಯಗೊಳ್ಳಬೇಕೆ ? ತನ್ನ ಬದುಕಿನ ಪುಸ್ತಕದ ತುಂಬ ಎಲ್ಲ ಬಿಳಿ ಹಾಳೆಗಳೇ, ಒಂದು ಅಕ್ಷರವಿಲ್ಲ. ಚಿತ್ತು, ಕಾಟುಗಳಿಲ್ಲ. ಹೀಗೆ ಬರಿಗೈಯಲ್ಲಿ ಖಾಲಿಯಾಗಿ ಈ ಲೋಕ ಬಿಡಬೇಕೆ ತಾನು? ಉಹುಂ, ಅಕ್ಷರ ವಿಲ್ಲವೇಕೆ? ಒಂದು- ಒಂದೇ ಒಂದು ಚಿಹ್ನವಿದೆಯಲ್ಲ, ತನ್ನ ಪುಸ್ತಕದ ಮೊದಲ ಪುಟದಲ್ಲಿ ಅದೇ.... ಅವಳೇ ಚಂದ್ರಿಕಾ. ಇದೇ ಪ್ರಾರಂಭ. ಹಾಗೆಂದು ಇದೇ ಕೊನೆಯೂ ಆಗಬಾರದಲ್ಲ. ತಾನು ತೀರಿದರೆ ಅವಳು ಬದುಕಲಾರಳು. ಅವಳೂ ಸಾಯುವುದು ಖಂಡಿತ. ಛೇ, ಹಾಗಾಗಲು ತಾನು ಬಿಡಬಾರದು. ಏನಾದರೂ ತಾನು ಈಗ ಸಾಯಲೇಬಾರದು. ಏಳಬೇಕು ಇಲ್ಲಿಂದ, ಸಾಧ್ಯವಿದ್ದಷ್ಟು ಬೇಗ ಓಡಿ ಹೋಗಬೇಕು. ಈ ಸಾವಿನ ಜಾಲದಿಂದ ಪಾರಾಗಬೇಕು. ಹರಿಯಬೇಕು. ಕಿತ್ತೊಗೆಯಬೇಕು. ತನ್ನೆಲ್ಲ ಶಕ್ತಿ ಕೂಡಿಸಿ ಕಾಲು ಎಳೆದುಕೊಳ್ಳುತ್ತಿದ್ದ ಗೋಪಿ. ಕಟ್ ಎಂದಿತು. ಕಾಲು ಮುರಿಯಿತೇ? ಬಗ್ಗಿ ನೋಡಿಕೊಳ್ಳಲೂ ಸಾಧ್ಯವಿಲ್ಲ. ಕಾಲು ನೋವನ್ನು ಮರೆತು ಜೀವ ಉಳಿಯಿತಲ್ಲ ಎಂದು ಎದ್ದು ನಿಲ್ಲಲು ಹೋದ. ಮೆತ್ತಗೆ ಏನೋ ತಗುಲಿತು. ತಾನು ನಿಂತದ್ದು ಪ್ರೊಫೆಸರರ ತಂಗಿಯ ದೇಹದ ಮೇಲೆ ಎನ್ನುವುದು ಗೊತ್ತಾದರೂ ಅಲ್ಲಿಂದ ಸರಿಯಲು ಸಾಧ್ಯವಿರಲಿಲ್ಲ. ಮನಸ್ಸು ಕಲ್ಲುಮಾಡಿದ. ನೀರಿನಲ್ಲಿ ಕಾಲಾಡಿಸುತ್ತಿದ್ದ ಹಾಗೆ ಬ್ಯಾಗಿನ ನೆರವು ಸಿಕ್ಕು! ಮತ್ತೆ ಮೇಲೇರಿದ. ಈಗ ಅವನ ಮುಖ ನೀರಿನ ಹೊರಗಿತ್ತು. ಯಾರದೋ ಕೈ ಬೇರಾರದೋ ಕಾಲು, ತುಂಡಾದ ದೇಹ, ಆಸರೆಗಾಗಿ ಚಾಚು ತ್ತಿದ್ದ ಕೈಗಳು. ಇವನ ಹೆಗಲ ಮೇಲೆಯೇ ಹತ್ತ ಬಯಸುವ ಕಾಲುಗಳು! ಎದೆ ಝಲ್ಲೆಂದಿತ್ತು! ಕಣ್ಣಿಗೆ ಕತ್ತಲೆ ಮುಸುಕುತ್ತಿತ್ತು. ಉಹುಂ ಈಗ ಪ್ರಜ್ಞೆ ಹೋದರೆ, ತಾನು ಸತ್ತಂತೆಯೇ. ಕಣ್ಣುಗಳು ಮುಚ್ಚದಂತೆ ತಡೆದುಕೊಂಡ. ಹಿಗ್ಗಲಿಸಿ ಅತ್ತಿತ್ತ ನೋಡಿದ. ಪ್ರೊಫೆಸರರ ದೇಹ ಅರ್ಧ ಕಿಟಕಿಯ ಹೊರಗೆ ಅರ್ಧ ಒಳಗಿದ್ದು ನಿಶ್ಚಲವಾಗಿತ್ತು. ಇನ್ನು ತಡವಾದರೆ ಡಬ್ಬಿ ನೀರಿನಲ್ಲಿ ಮುಳುಗಿ ಹೋಗುತ್ತದೆ. ಸಾಧ್ಯವಿದ್ದಷ್ಟು ಬೇಗ ತಾನು ಕಿಟಕಿಯಾಚೆ ಹೋಗ

ಬೇಕು. ಪ್ರೊಫೆಸರರ ಕಾಲುಗಳನ್ನೆತ್ತಿ ಸರೋವರಕ್ಕೆ ದೇಹವನ್ನು ನೂಕಿದ. ಅದೇ ಕಿಟಕಿಯಲ್ಲಿ ಕೈ ಚಾಚಿ ತನ್ನನ್ನು ಮೇಲೆತ್ತಲು ಕೂಗತೊಡಗಿದ.

ಬೆಳದಿಂಗಳಿನ ಕ್ಷೀಣ ಬೆಳಕಿನಲ್ಲಿ ಅತ್ತಿತ್ತ ರಭಸದಿಂದ ಬರುತ್ತಿರುವ ಚಿಕ್ಕ ಚಿಕ್ಕ ದೋಣಿಗಳು ಕಂಡವು. ಆಸೆ ಚಿಗುರಿತು. ಮತ್ತೆ ಮತ್ತೆ ಚೀರಿದ. ಅವರೆಲ್ಲ ಬದುಕಿದವರನ್ನು ನೀರಿನಿಂದ ಎತ್ತಿ ದೋಣಿಗಳಿಂದ ದಡ ಮುಟ್ಟಿಸುವ ಕೆಲಸದಲ್ಲಿದ್ದರು. ಹತ್ತಿರದ ಹಳ್ಳಿಯಿಂದ ಜನ ಇನ್ನೂ ಓಡೋಡಿ ಬರುತ್ತಿದ್ದರು. ಗೋಪಿ ಅಲ್ಲಿ ತುಂಬ ಹೊತ್ತು ಜೋತು ಬಿದ್ದಾಗ ಅವನ ಕಾಲುಗಳನ್ನು ಯಾರೋ ಕೆಳಕ್ಕೆ ಎಳೆಯುತ್ತಿದ್ದರು. ಮುರಿದ ಕಾಲು ಮುಟ್ಟಿದಾಗ ಜೀವ ಹೋದಂತಾಗುತ್ತಿತ್ತು. ಪುಟ್ಟ ಪುಟ್ಟ ಕೈಗಳು, ಪ್ರೊಫೆಸರರ ತಂಗಿಯ ಮಗನಿರಬೇಕು. ಒಂದು ಕ್ಷಣ ಜೀವ ಅಲ್ಲಾಡಿದರೂ ಮತ್ತೆ ಕಠಿಣವಾಗಿ ಕಾಲು ಜೋರಾಗಿ ಜಾಡಿಸಿಬಿಟ್ಟ. ಅದೇ ಹೊತ್ತಿಗೆ ಹೊರಗಿನ ಬಲಿಷ್ಠ ಕೈಯೊಂದು ಗೋಪಿಯನ್ನು ಮೇಲಕ್ಕೆ ಎಳೆಯುತ್ತಿತ್ತು. ಇನ್ನೊಬ್ಬ ಕಿಟಿಕಿಯ ಸರಳುಗಳನ್ನು ಮುರಿದು ಹೊರಗೆ ಬರಲು ಅನುವು ಮಾಡಿಕೊಡುತ್ತಿದ್ದ. ಜೀವದಿಂದ ಇದ್ದವರನ್ನು ಒಬ್ಬೊಬ್ಬರನ್ನಾಗಿ ಎಳೆದು ತಂದರೂ ಹೆಚ್ಚಿನ ಜನ ಸರೋವರದ ತಳ ಕಂಡದ್ದು ಸ್ಪಷ್ಟವಾಗಿತ್ತು. ನಿದ್ದೆ ಮಾಡುತ್ತಿದ್ದ ಅಮಾಯಕರು ಹಾಗೇ ಕಣ್ಣುಮುಚ್ಚಿ ಬಿಟ್ಟಿದ್ದರು. ಗೋಪಿ ಪ್ರಯತ್ನದ ಫಲವಾಗಿ ತೀರಕ್ಕೆ ಬಂದು ಬಿದ್ದ. ಅಂಬುಲನ್ಸ ಬರುವ ವರೆಗೂ ಅವನು ಅಲ್ಲಿಯೇ ಬಿದ್ದಿರಬೇಕು. ಹೋರಾಟದ ಕ್ಷಣ ಕಳೆದ ಮೇಲೆ ಕಣ್ಣು ಮುಚ್ಚಿದ. ಎಚ್ಚರ ತಪ್ಪಿ ಹೋಯಿತು.

* * *

ಅಮ್ಮನ ಕೈಬಿಟ್ಟು ಓಡೋಡಿ ಬಂದ ಬೇಬಿ ಏನೋ ಎಡವಿ ಮುಗ್ಗರಿಸಿದಳು. ಗೋಪಿಯ ಮೈಮೇಲೆಯೇ ಅವಳು ಬಿದ್ದಿದ್ದರಿಂದ ಅವಳಿಗೇನೂ ಪೆಟ್ಟಾಗಲಿಲ್ಲ. ಅವಳು ಮುಂದೆ ಓಡದೆ ಅಲ್ಲಿಯೇ ಕುಳಿತು ಅವನ ಮೈ ಮುಖದ ಮೇಲೆಲ್ಲ ಕೈಯಾಡಿಸಿದಳು. ಯಾರೋ ಪಾಪ! ನೋವಾಗಿ ಬಿದ್ದಿದ್ದಾನೆ. ಮಾತೂ ಆಡಲೊಲ್ಲ. ಎಷ್ಟು ಪೆಟ್ಟಾಗಿದೆಯೋ, ಕಷ್ಟದಲ್ಲಿರೋರಿಗೆ ಸಹಾಯ ಮಾಡಿದರೆ ದೇವರ ಸೇವೆ ಮಾಡಿದಂತೆ ಅಂತ ಅಮ್ಮ ದಿನಾ ಹೇಳ್ತಾಳೆ,

ಇವನನ್ನ ಎಬ್ಬಿಸಿ ಮನೆಗೆ ಒಯ್ಯಬೇಕು. ತುಂಬಾ ಚಳಿ. ಬಟ್ಟೆ ಎಲ್ಲಾ ತೊಯ್ದು ಹೋಗಿವೆ. ಅಪ್ಪನ ಲುಂಗಿ ಬನಿಯನ್ ಕೊಡಬೇಕು.

'ಅಂಕಲ್, ಅಂಕಲ್, ಏಳಿ ಅಂಕಲ್' ಒಂದೇ ಸಮನೆ ಕೂಗಿ ಕೂಗಿ ಅವನನ್ನು ಹಿಡಿದು ಅಲ್ಲಾಡಿಸಿದಳು. ಗೋಪಿ ಕಣ್ಣು ತೆರೆದ. ರೇಶಿಮೆಯಂಥ ನುಣುಪು ಕೈ ಹಣೆಯ ಮೇಲಿದೆ. ಯಾರದಿದು? ಚಂದ್ರಿಕಾಳದೇ. ನಾನು ಮಲಗಿ ಎಷ್ಟು ಹೊತ್ತಾಯಿತು. ಚಂದ್ರಿಕಾ ಹೇಗೆ ಇಷ್ಟು ಚಿಕ್ಕವಳಾದಳು? ನಾನು ಇಲ್ಲಿರುವುದು ಅವಳಿಗೆ ಹೇಗೆ ಗೊತ್ತಾಯ್ತು? ಓಃ ಅದೇ–ಅದೇ ಜನ್ಮ ಜನ್ಮದ ಬಾಂಧವ್ಯ. ಚಂದ್ರೂ, ಚಂದಾಃ ಎಂದ ಮೆಲುವಾಗಿ. ಬೇಬಿ ಮತ್ತಷ್ಟು ಬಾಗಿ ಕೆನ್ನೆ ಸವರುತ್ತ 'ನಾನು–ನಾನು ಅಂಕಲ್ ಬೇಬಿ. ಅಲ್ಲಲ್ಲ, ನೀಲಿಮಾ–ಮೀನುಗಾರ ಜೋಸೆಫ್‌ನ ಮಗಳು, ಮುದ್ದಿನಿಂದ ನನ್ನ ಎಲ್ಲರೂ ಬೇಬಿಃ ಅಂತಾರೆ. ಏಳಿ ನಮ್ಮ ಮನೆಗೆ ಹೋಗೋಣ ಕೈ ಹಿಡೀಲಾ?'

ಕಣ್ಣು ತೆರೆದ ಗೋಪಿ ಕಷ್ಟಪಟ್ಟು ದಿಟ್ಟಿಸಿ ನೋಡಿದ. ಮುದ್ದು ಮುಖ, ನಿದ್ದೆಗಂಗಳು, ಮೆಲುಮಾತು, ಜೇನಿನಂಥ ತುಟಿಗಳು. ಇವಳು ಚಂದ್ರಿಕಾ ಅಲ್ಲ, ತುಂಬಾ ಚೆನ್ನಾಗಿದ್ದಾಳೆ ಹುಡುಗಿ. ತನಗೂ ಇಂಥ ಒಂದು ಮಗುವಾಗ ಬೇಕು. ಪ್ರೀತಿಯಿಂದ ಬೇಬಿ ಎಂದು ಪಿಸುನುಡಿದ. ಸುತ್ತ ನೋಡಿದ. ಎಲ್ಲೆಲ್ಲಿಯೂ ಅಳು, ಕಿರುಚಾಟ, ಒಡೆದ ತಲೆ, ಮುರಿದ ಕೈಕಾಲು, ಎಳೆದು ಹಾಕಿದ ಶವಗಳು, ಮಾಂಸದ ಮುದ್ದೆಯಾದ ಶರೀರಗಳನ್ನು ಅಂಬುಲೆನ್ಸ್ ಬಂದು ತುಂಬಿ ಒಯ್ಯುತ್ತಿತ್ತು. ಸ್ಟ್ರೇಚರ್ ಎತ್ತುತ್ತ ಓಡಾಡುತ್ತಿದ್ದ ತರುಣ–ತರುಣಿಯರು, ಮುದುಕರು, ಹಳ್ಳಿಗರು ಇನ್ನೂ ಯಾರಾರೋ. ಮಬ್ಬು ಗತ್ತಲಿನಲ್ಲಿ ಯಾವುದೂ ಸ್ಪಷ್ಟವಾಗಿರಲಿಲ್ಲ. ಹತ್ತಿರ ನಡೆದು ಹೋಗುತ್ತಿದ್ದ ಇಬ್ಬರು ಮಾತನಾಡಿಕೊಳ್ಳುತ್ತಿದ್ದರು. 'ಟ್ರೇನ್ ಸೇತುವೆ ಮೇಲೆ ಬರುತ್ತಲೇ ಒಂಬತ್ತು ಡಬ್ಬಿ ಉರುಳಿ ಸರೋವರಕ್ಕೆ ಬಿದ್ದಿವೆಯಂತೆ, ನೂರಾರು ಜನರು ಸತ್ತಿರಬೇಕು.' ಗೋಪಿ ಗಡಗಡ ನಡುಗಿದ.

'ಚಳಿ ಆಯ್ತಾ ಅಂಕಲ್, ಏಳಿ, ನಮ್ಮ ಮನೆಗೆ ಹೋಗೋಣ, ನಿಮಗೆ ಒಣ ಬಟ್ಟೆ ಕೊಡ್ತೀನಿ, ಅಮ್ಮನ ಪತ್ತಿರ ಹೇಳಿ ಗಂಜಿ ಕೊಡಿಸ್ತೀನಿ' ಬೇಬಿ ಮತ್ತೆ ಮತ್ತೆ ಹೇಳಿದಳು.

ಸುತ್ತಲಿನ ನರಕದಲ್ಲಿ ಈ ದೇವತೆ ಎಲ್ಲಿಂದ ಬಂದಳು ಎಂದು ಯೋಚಿಸು ವಷ್ಟರಲ್ಲಿ ಬಲಿಷ್ಠ ಕೈಯೊಂದು ಗೋಪಿಯ ಕುತ್ತಿಗೆ ಹಿಡಿಯಿತು. ಅಲ್ಲಿ ಬಂಗಾರದ ಚೈನು ಇರಲಿಲ್ಲ. ರಿಸ್ಟ್‌ವಾಚ್ ಎಳೆದುಕೊಂಡಿತು. ಅದೇ ಕೈ ಬಿಜೇಗೆಕೈ ಹಾಕಿ ಪರ್ಸ್ ತೆಗೆಯಿತು. ಏಳಲಾಗದ ಗೋಪಿ ಬಿದ್ದಲ್ಲಿಯೇ ಒದ್ದಾಡಿದ. ಕಾಲು ವಿಪರೀತ ನೋಯುತ್ತಿತ್ತು. ಆ ಖದೀಮ ಅವನ ಬೆಲೆ ಬಾಳುವ ಪ್ಯಾಂಟ್ ಎಳೆಯುತ್ತಿದ್ದ. ಬೇಬಿ ಕೂಡಲೆ ಚೀರಿಕೊಂಡಳು. "ಕಳ್ಳಾ ಕಳ್ಳಾ, ಬನ್ನಿ ಇಲ್ಲಿ ಯಾರಾದ್ರೂ ಬನ್ನಿ. ಪೊಲೀಸ್, ಕಳ್ಳನ್ನ ಹಿಡೀರಿ" ಮುಗಿಲು ಮುಟ್ಟುತ್ತಿದ್ದ ಆ ಹಾಹಾಕಾರದಲ್ಲಿ ಬೇಬಿಯ ಎಳೆದನಿ ಮುಳುಗಿಹೋಯಿತು. ಪ್ಯಾಂಟ್ ಕಳಚಿದ ಕಳ್ಳ ಶರಟಿಗೂ ಕೈ ಹಾಕಿದ. ಧಡ್....ಬಗ್ಗಿದ ಅವನ ತಲೆಗೊಂದು ದೊಡ್ಡ ಕಲ್ಲೇಟು ಬಿತ್ತು. ಬೇಬಿ ಕೈಗೆ ಇನ್ನೊಂದು ಕಲ್ಲು-ಪೆಟ್ಟು ತಿಂದವ ಅವಳನ್ನು ಹೊಡೆಯಲು ಹೋದ. ಬೇಬಿ ಅವನ ಕೈಗೆ ಸಿಗಲಿಲ್ಲ. ಅವನು ಅಟ್ಟಿಸಿಕೊಂಡು ಹೋದ. ಓಡುತ್ತಿದ್ದ ಬೇಬಿ, ಆ ರಾಕ್ಷಸ ಕಳ್ಳ ಕತ್ತಲಲ್ಲಿ ಕರಗಿಹೋದರು. ಸ್ಟ್ರೇಚರ ತರುವ ಮೊದಲೇ ಗೋಪಿ ಮತ್ತೊಮ್ಮೆ ಎಚ್ಚರ ತಪ್ಪಿದ್ದ.

* * *

ಟ್ರೇನ್ ಅಪಘಾತವಾಗಿ ಒಂದು ವರ್ಷ ಕಳೆದ ಮೇಲೆ ಅದೇ ದಿನ ಗೋಪಿ ಆ ಹಳ್ಳಿಗೆ ಬಂದಿಳಿದ. ಮೀನುಗಾರ ಜೋಸೆಫ್‌ನ ಮನೆ ವಿಚಾರಿಸಿ ಕೊಂಡು ಹೋದ. ಬಡಕಲು ಶರೀರ, ಗುಳಿಬಿದ್ದ ಕಣ್ಣಿನ ಜೋಸೆಫ್ ಕಾಲೆಳೆಯುತ್ತಾ ಹೊರಬಂದ. ಬೆಲೆಬಾಳುವ ಅರಿವೆ ಹಾಕಿದ ಅಪರಿಚಿತ ಕುಂಟನನ್ನು ಕಂಡು ಮಾತು ಬಾರದೆ ನಿಂತ. ಗೋಪಿ ತನ್ನ ಪರಿಚಯ ಹೇಳಿ ಕೊಂಡ. "ಬೇಬಿ ಎಲ್ಲಿ? ನಾನು ಅವಳನ್ನು ನೋಡಲೆಂದೇ ಬೆಂಗಳೂರಿನಿಂದ ಬಂದೆ, ಎಲ್ಲಿ ಅವಳು? ಶಾಲೆಗೆ ಹೋಗಿದ್ದಾಳಾ?' ಎಂದು ತುಂಬಾ ಪ್ರೀತಿ-ಯಿಂದ ಕೇಳಿದ.

ಜೋಸೆಫ್ ಸುಮ್ಮನಿದ್ದ. ಇವನು ಕಿವುಡನೆ ಎಂದುಕೊಂಡು ಮತ್ತೊಮ್ಮೆ ಅದೇ ಪ್ರಶ್ನೆ ಕೇಳಿದ. ಒಳಗಿನಿಂದ ಬಿಕ್ಕುವ ದನಿ ಕೇಳಿತು. ಗೋಪಿಯ ಮುಖದ ಬಣ್ಣವೇ ಹಾರಿತು. ಗಾಬರಿಯಾದ.

‘ಬರ್ರಿ, ಒಳಗ ಬರ್ರಿ, ಬೇಬಿ ಅದಾಳ’ ಜೋಸೆಫ್‌ನ ಹಿಂದೆ ಹೋದ ಗೋಪಿಗೆ ಕುಸಿಯುವಂತಾಯ್ತು. ಜೋಸೆಫ್ ಆಧಾರ ಕೊಟ್ಟ. ಬೇಬಿಯ ಫೋಟೋಕ್ಕೆ ಹಾರ ಹಾಕಿ, ಮೇಣಬತ್ತಿ ಹಚ್ಚಿದ್ದರು.

“ಸರಿಯಾಗಿ ವರ್ಷದ ಹಿಂದೆ ಈ ದಿನ ನಮ್ಮ ಬೇಬಿ ಹುಟ್ಟಿದ ಹಬ್ಬವಿತ್ತು, ಸಾಹೇಬರ. ನೀಲಿ ಅಂಗಿ ಕೇಕು ತರಲು ಹೇಳಿದ್ದಳು. ತಂದೆ; ಆದರೆ ತೊಟ್ಟುಕೊಳ್ಳಲಿಕ್ಕೆ ಅವಳೆ ಇಲ್ಲಾ. ಸರೋವರದಾಗ ಅವಳ ಹೆಣ ಸಿಕ್ಕಿತು. ಎಕ್ಸಿಡೆಂಟ ಆದ ಹೊತ್ತಿಗೆ ಅವಳು ಅಲ್ಲಿಗೆ ಹೇಗೆ ಬಂದಳೋ ನಮಗೆ ಗೊತ್ತಿಲ್ಲ” ಗಂಡ-ಹೆಂಡತಿ ಇಬ್ಬರ ಎದೆ ಒಡೆದು ಬಿಗಿಯುತ್ತಿತ್ತು. ಗೋಪಿ ಅವರ ಜೊತೆ ಕಣ್ಣೀರು ಸುರಿಸುತ್ತ ಹೇಳಿದ ಕಥೆ ಅವರಿಗೆ ಪವಾಡದಂತೆ ಕಂಡಿತು. ಮತ್ತೊಮ್ಮೆ ಮನದಣಿಯೆ ಅತ್ತರು. ಮೂವರೂ ಕೂಡಿ ಪ್ರಾರ್ಥನೆ ಮಾಡಿದರು.

’ಅಂಕಲ್ ಮನೆಗೆ ಬರ್ರಿ ಹೋಗೋಣ ಅಂತಿದ್ದೆಯಲ್ಲ ಬೇಬಿ. ನಾನು ಬರ್ತೇನೆ. ಪ್ರತಿ ವರ್ಷ ಬರ್ತೇನೆ ಬೇಬಿ” ತಿರುಗಿ ಹೋಗುವಾಗ ಗೋಪಿ ಹೇಳಿದ ಅದರಂತೆ ಪ್ರತಿ ವರ್ಷ ಬರುತ್ತಿದ್ದ. —

ಗೋಪಿಯ ಬದುಕಿನ ಪುಸ್ತಕದ ಹಾಳೆಗಳೆಲ್ಲ ತುಂಬುತ್ತ ಬಂದಿವೆ. ಪ್ರತಿ ಪುಟವೂ ಒಂದು ಹೊಸ ಕಥೆಯನ್ನೇ ಹೇಳುತ್ತದೆ. ಟ್ರೇನ್ ಎಕ್ಸಿಡೆಂಟಿನಲ್ಲಿ ಆಸ್ಪತ್ರೆ ಸೇರಿದ ಗೋಪಿ ಆರು ತಿಂಗಳ ಮೇಲೆ ಹೊರಬಂದಾಗ ಒಂದು ಕಾಲು ಕಳೆದುಕೊಂಡಿದ್ದ. ಅದರ ಜೊತೆಗೆ ಕೈಹಿಡಿದವಳನ್ನು ಕಳೆದುಕೊಂಡಿದ್ದ. ಜೀವನದಲ್ಲಿ ಸುಖದ ಕ್ಷಣಗಳನ್ನು ಮಾತ್ರ ಅನುಭವಿಸುವ ಅಪೇಕ್ಷೆಯ ಹೆಣ್ಣು ಚಂದ್ರಿಕಾ ಕುಂಟ ಗಂಡನಿಗೆ ಡೈವೋರ್ಸ್ ನೀಡಿದ್ದಳು. ಇಂಥ ಕ್ಷಣಿಕ ಬಾಂಧವ್ಯ ಮತ್ತೊಮ್ಮೆ ಬೆಳೆಸಲು ಸಿದ್ಧನಿರಲಿಲ್ಲ. ಗೋಪಿ ಮತ್ತೆ ಮದುವೆಯಾಗಲಿಲ್ಲ.

ತನಗೆ ಪೆನ್ಶನ್ ಆದೊಡನೆ ಬಂದ ಹಣದಿಂದ ಗೋಪಿ ಜೋಸೆಫ್‌ನ ಹಳ್ಳಿಯಲ್ಲಿ ‘ನೀಲಿಮಾ ಪ್ರಾಥಮಿಕ ಶಾಲೆ’ ಆರಂಭಿಸಿದ್ದಾನೆ. ಶಾಲೆಯ ಮಕ್ಕಳ ಜೊತೆಗೆ, ಜೋಸೆಫ್–ಲೀನಾರ ಜೊತೆಗೆ ಆ ಹಳ್ಳಿಯಲ್ಲಿಯೇ ಇದ್ದು ತನ್ನ ಬದುಕಿನ ಕೊನೆಯ ಪುಟ ಬರೆಯಲಿದ್ದಾನೆ.

ನೀವು ಯಾವಾಗಲಾದರೂ ಸಂಜೆ ಅತ್ತ ಕಡೆಗೆ ವಾಕಿಂಗ್ ಹೋದರೆ ಆ ಸರೋವರವನ್ನೇ ದಿಟ್ಟಿಸುತ್ತಾ ಕುಳಿತ ವ್ಯಕ್ತಿಯೊಬ್ಬನನ್ನು ತಪ್ಪದೇ ಕಾಣುವಿರಿ ಅವನೇ.... ಅವನೇ.... ಉಶ್ ! ಸುಮ್ಮನಿರಿ. ದಯವಿಟ್ಟು ಅವನ ಶಾಂತಿಗೆ ಭಂಗ ತರಬೇಡಿ,

●

ಅಂತ್ಯ ಸಂಸ್ಕಾರ

ಪುಟ್ಟ ಪುಟ್ಟ ಎಳೆಯ ಮುಖ. ಹಳದಿ ಹುಲ್ಲಿನಂಥ ಒಣಕೂದಲು. ಹರಿದ ಅಂಗಿ–ಚೆಡ್ಡಿ, ಲವಲವಿಕೆ, ನೋವು, ಹಸಿವು ಮಿಶ್ರಣದ ಕಣ್ಣುಗಳು–ಊಟದ ಬಟ್ಟಲು. ನೀರಿನ ವಾಟಿ ಹಿಡಿದು ಸಾಲಾಗಿ ಬಂದು ಕುಳಿತವು. ಬಟ್ಟಲಿಗೆ ಒಂದೊಂದೇ ಪದಾರ್ಥ ಬಿದ್ದ ಹಾಗೆ ಕಣ್ಣು ಹೊಳೆದವು, ಮೂಗು ಅರಳಿದವು, ನಾಲಿಗೆ ನೀರೂರಿತು. ಕೈ ಚಡಪಡಿಸಿತು. ಹೊಟ್ಟೆ ಗೊರ ಗೊರ ಎಂದಿತು. ಎಲ್ಲ ದೃಷ್ಟಿಗಳೂ ಶಿವಣ್ಣನ ಮುಖದಲ್ಲೇ ನಟ್ಟಿದ್ದವು. ಹತ್ತಿರ ನಿಂತಿದ್ದ ಅಪರಿಚಿತರತ್ತ ಲಕ್ಷ್ಯವೇ ಇಲ್ಲ. ಶಿವಣ್ಣನ ಒಂದು ಸನ್ನೆ ಸಾಕಾಗಿತ್ತು ಕೈ ಬಾಯಿಗೆ ಜಗಳ ಸುರು-

"ಸಾಹುಕಾರರ, ಈ ಪಕ್ವಾನ್ನ ಭೋಜನ ಯಾರ ಹೆಸರಿನಲ್ಲಿ ನಡೀತದ ಹೇಳಿದರೆ ಅವರ ಆತ್ಮಾಕ ಶಾಂತಿ ಸಿಗಲಿ ಅಂತ ಪ್ರಾರ್ಥನೆ ಮಾಡ್ತಾರ ಮಕ್ಕಳು" ಅನಾಥಾಶ್ರಮದ ಮ್ಯಾನೇಜರ್ ಶಿವಣ್ಣ ವಿರುಪಾಕ್ಷಪ್ಪನವರನ್ನು ಕೇಳಿದರು.

"ಹೆಸರು ಹೇಳೂದೇನು ಬ್ಯಾಡಾ ಶಿವಣ್ಣಾ, ಮಕ್ಕಳು ಹೊಟ್ಟೆ ತುಂಬ ಊಟಾ ಮಾಡಿದರ ಅವರ ಆತ್ಮಕ್ಕ ಶಾಂತಿ ಸಿಕ್ಕಾಂಗ ಅಂತ ತಿಳಕೊಂಡೇವಿ." 'ಇವರೊಬ್ಬ ವಿಚಿತ್ರ ಪ್ರಾಣಿ' ಎನ್ನುವಂತೆ ನೋಡುತ್ತ ಶಿವಣ್ಣ "ನೀವು ಮಕ್ಕಳಿಗೆ ಎರಡು ಬುದ್ದೀ ಮಾತು ಹೇಳ್ತಿರೇನ್ರಿ ಸಾಹುಕಾರರ" ಎಂದರು ಕಾತುರರಾಗಿ, ಅದೂ ಬೇಡ ಎಂದು ವಿರೂಪಾಕ್ಷಪ್ಪ ಗೋಣು ಅಲ್ಲಾಡಿಸಿದರು.

"ನಿಮ್ಮೆಲ್ಲರ ತಾಯಿಯ ಆತ್ಮಕ್ಕೆ ಶಾಂತಿ ಸಿಗಲಿ. ಹುಂ, ಊಟ ಮಾಡ್ರಿ" ಶಿವಣ್ಣನ ಮಾತು ಮುಗಿಯುವುದೊಂದೇ ತಡ ಸರಭರ, ಪಟ್‌ಪಟ್ ಗುಟುಕ್ ಗುಟುಕ್ ಎಲ್ಲ ಸಪ್ಪಳ ಸುರುವಾದವು.

"ಈ ಅನ್ನ ಎಷ್ಟು ರುಚಿ ಅದ ಅಲ್ಲಾ"

"ಇಂಥಾ ಊಟಾ ನಾ ಎಂದೂ ಉಂಡಿದ್ದಿಲ್ಲಾ. ಇದs ಮೊದಲ್ನೇ ಸಾರೆ."

"ಸಾವುಕಾರರು ದಿನಾ ಇಂತಾದ್ದ ಉಣತಾರೋ. ನಾವು ಬಡವರು ದಿನಾ ರೊಟ್ಟಿ ಕಾರಬ್ಯಾಳಿ ಅಷ್ಟs"

"ಅದೂ ಹೊಟ್ಟಿ ತುಂಬಾ ಸಿಗೂದಿಲ್ಲಾ. ಈ ಗಾಲಿ ಎಷ್ಟ ಸೀ ಸೀ, ಹುಳಿ ಹುಳಿ ಅದ ಅಲ್ಲಾ. ಇದಕ್ಕ ಏನಂತಾರೋ."

"ಏನಂತಾರೋ ನನಗೂ ನೆನಪ ಇಲ್ಲಪಾ. ಒಂದ ಸಾರೆ ಆಗಸ್ಟ್ ೧೫ಕ್ಕ ಎಲ್ಲಾರಿಗೂ ಒಂದೊಂದು ತಿನ್ನಾಕ ಕೊಟ್ಟಿದ್ರು. ಅದರ ಮ್ಯಾಲೆ ಇವತ್ತ ತಿಂದದ್ದು ನೋಡು."

ಎಲ್ಲರಿಗೂ ಹೊಟ್ಟೆ ತುಂಬಾ ನೀಡಿಸುತ್ತ ಜಿಲೇಬಿ ಬುಟ್ಟಿ ಹಿಡಿದು ಬಂದ ಮಧುವಿಗೆ ಈ ಮಾತು ಕೇಳಿತು. ಇದಕ್ಕೆ ಜಿಲೇಬಿ ಎನ್ನುತ್ತಾರೆ ಎಂದು ಹೇಳಬೇಕೆಂದರೂ ಹಸಿದ ಹೊಟ್ಟೆಯಲ್ಲಿ ದಿನ ಕಳೆಯುವ ಈ ಮಕ್ಕಳಿಗೆ ಹೇಳಿ ಏನು ಉಪಯೋಗ–ಮನ ಮಿಡುಕಿತು.

"ಅಕ್ಕಾ ಅವರs, ಈ ಬಳ್ಳ್ಯಾಗ ಸೀ ರಸಾ ಹ್ಯಾಂಗ ತುಂಬತಾರ್ರಿ" ಹೊಟ್ಟೆ ತುಂಬಿದಂತೆ ಅನಾಥ ಮಗುವಿನ ಬಾಯಿಗೂ ಶಕ್ತಿ ಬಂದಿತ್ತು. ಅವನ ಮುಗ್ಧ ಪ್ರಶ್ನೆಗೆ ನಗು ಬಂದರೂ "ಜಿಲೇಬಿ ಮಾಡೂವಾಗ ನೋಡಿದೂರ ತಿಳೀತದಪಾ" ಎಂದ ಮಧುಮತಿ ಇನ್ನಷ್ಟು ಜಿಲೇಬಿ ನೀಡಿ ಮುಂದೆ ಸರಿದಳು. "ಅಣ್ಣಾs ಇಲ್ಲೆ ಕೋಸಂಬರಿ, ಪಲ್ಲೆ ತಾ" "ಅತಿಗೀ ಈ ಸಾಲಿಗೆ ಇನ್ನೊಮ್ಮೆ ಮಸಾಲಿ ಅನ್ನಾಕೇಳಿ" "ಹೊಟ್ಟಿ ತುಂಬ ಉಣ್ರಿ ಇನ್ನಷ್ಟು ಕೇಳಿ ನೀಡಿಸಿಕೊಳ್ಳಿ. ಸಾವಕಾಶ ಊಟಾ ಮಾಡ್ರಿ". ಮಧುಮತಿ, ವಿವೇಕ, ಶಶಿ, ಕೆಲಸದವರು ಓಡಾಡಿ ಉಪಚಾರ ಮಾಡಿದರು. ಮಕ್ಕಳ ಊಟದ ಸದ್ದು, ಮಾತು, ನಗುವಿನಿಂದ ಕೋಣೆ ದುಮುದುಮಿಸಿತು. ಜಿಲೇಬಿ ಬುಟ್ಟಿ ಇಟ್ಟು ಬಂದ ಮಧು ಗೋಡೆಗೆ ಒರಗಿನಿಂತಳು. ಅವಳದೃಷ್ಟಿ ಶೂನ್ಯವಾಯಿತು.

ಅನಾಥ ಮಕ್ಕಳಿಗೆ ಹೊಟ್ಟೆ ತುಂಬ ಊಟಾ ಹಾಕ್ರಿ. ಉಳಿದ ಯಾವದs ಪೂಜಿ, ಪುನಸ್ಕಾರ, ತಿಥಿ–ಗಣಾರಾಧನೆ ಏನೂ ಮಾಡಬ್ಯಾಡ್ರಿ. ನನ್ನ ಮಟ್ಟಿಗೆ ಗಳು ಅಂದರ ಹೊಟ್ಟಿ ಹಸಿದವರು. ಇದರಿಂದ ಪುಣ್ಯಾ ಸಿಗತದ ಅನ್ನೂ ದರೊಳಗೂ ನನಗ ನಂಬಿಕಿ ಇಲ್ಲಾ. ಹೊಟ್ಟೆ ತುಂಬಿದವರಿಗೆ ಹಾಕೂದಕ್ಕಿಂತ ಹಸಿದವರಿಗೆ ಉಣಿಸೂದು ಒಳ್ಳೆಯದು ಅಂತ. ಅದೂ ಶ್ರೀಮಂತಿಕೆಯ ಅಹಂಕಾರದಿಂದ ಅಲ್ಲ. ಮಾನವಧರ್ಮ ಇದ್ದs ಅಂತ ನಾನು ತಿಳಕೊಂಡೇನಿ- ಅವ್ವನ ವಿಲ್‌ನ ಕಡೆ ಪ್ಯಾರಾಹಿಂಗs ಇತ್ತಲ್ಲ. ಜನರನ್ನ ಎದುರುಹಾಕಿಕೊಂಡರೂ ಅವಳ ಮನಸ್ಸಿನಾಂಗ ಎಲ್ಲಾ ಹಿಡಿಸೇವಿ. ಆತ್ಮ ಹಾಂ, ಆತ್ಮ ಅಥವಾ ಚೈತನ್ಯ ಒಂದು ಇರಲೇಬೇಕಲ್ಲ. ಅವ್ವನ ಆತ್ಮ ಎಲ್ಲಿ ಅಂದ? ದೂರ ಹೋಗಿರಲಿಕ್ಕಿಲ್ಲ. ಇಲ್ಲೇ ಇರಬೇಕು ನಮ್ಮ ಕಣ್ಣಿಗೆ ಕಾಣದಾಂಗ. ಈ ಮಕ್ಕಳ ನಗು, ತೃಪ್ತಿ ನೋಡಿ ಅದೂ ಸಂತೋಷ ಪಡ್ತಿರಬೇಕು– ಅವ್ವಾs ಎಲ್ಯದೀ ನೀನು. ಇಲ್ಲೇ ಅದೀಯಾ. ನೋಡು ಅವ್ವಾ ಇವರ ಸಂತೋಷ ನಿನಗ ಮುಟ್ಟದಲ್ಲಾ?– ಮಧುಮತಿಗೆ ತಿಳಿಯದಂತೆ ಅವಳ ಕಣ್ಣೀರು ಹರಿಯುತ್ತಿದ್ದವು. ಪ್ರಶಾಂತ ಬಂದು ಅವಳ ಭುಜದ ಮೇಲೆ ಕೈಯಿಟ್ಟ ಮೌನವಾಗಿ. ಮಧು ತಲೆ ಬಾಗಿಸಿ ಗಂಡನ ಕೈ ಮೇಲೆ ಕೆನ್ನೆ ಇರಿಸಿದಳು. ಮಗಳು–ಅಳಿಯನನ್ನು ನೋಡಿ ವಿರು ಪಾಕ್ಷಪ್ಪ ಸೋತಕಾಲು ಎಳೆಯುತ್ತ ಬಂದು ಹತ್ತಿರ ಸಿಕ್ಕ ಕುರ್ಚಿಯಲ್ಲಿ ಕುಸಿದರು. ಅವರ ಮನಸ್ಸಿನ ತುಂಬ ಸರಸ್ವತಿ ತುಂಬಿಕೊಂಡಳು. ಮುಚ್ಚಿದ ಕಣ್ಣಿನ ಎದುರು ಒಂದು ಮುಖ ನಗುತ್ತಿತ್ತು....

ವಿರುಪಾಕ್ಷಪ್ಪ ತಮ್ಮ ವ್ಯವಹಾರದ ಎಲ್ಲ ಕೆಲಸಗಳನ್ನು ವಿವೇಕನಿಗೆ ಒಪ್ಪಿಸಿ ತಮ್ಮ ಎಲ್ಲ ವೇಳೆಯನ್ನು ಹೆಂಡತಿಯ ಹತ್ತಿರವೇ ಕಳೆಯುತ್ತಿದ್ದರು ಶಶಿಕಲಾ, ಕೆಲಸದ ನಿಂಗವ್ವ ಎಲ್ಲ ಇದ್ದರೂ ಹಾಸಿಗೆ ಬದಲಿಸುವಾಗ ತಾವೇ ಅವಳನ್ನೆತ್ತಿ ಮಲಗಿಸುವರು. ದುಂಡು ದುಂಡಾಗಿ ಚೆಂಡು ಮಲ್ಲಿಗೆಯಂತೆ ಇದ್ದ ಸರಸ್ವತಿ ಒಂದು ವರ್ಷದಲ್ಲಿ ಒಣಗಿದ ಹೂವಾಗಿ ಗಾಳಿಗೆ ಹಾರಿ ಹೋಗುವಂತಾಗಿದ್ದಾಳೆ. ಅವಳನ್ನು ಎತ್ತಿದಾಗೊಮ್ಮೆ ಅವರ ಜೀವ ಝಲ್ಲೆನ್ನು ವುದು. ಎಷ್ಟು ಖರ್ಚಾದರೂ ಅವಳನ್ನು ಉಳಿಸಿಕೊಳ್ಳಬೇಕೆನ್ನುವ ಹಂಬಲ. ಆದರೆ ದಿನ ದಿನಕ್ಕೆ ಸಾವಿನ ಗುರುತುಗಳು ಅವಳಲ್ಲಿ ಸ್ಪಷ್ಟವಾಗುತ್ತಿದ್ದವು. ಹತ್ತಿರ ಕುಳಿತು ಹಣೆ ಸವರುತ್ತ ದಿಟ್ಟಿಸಿ ನೋಡುವ ಗಂಡನನ್ನು ನೋಡಿ

ಸರಸ್ವತಿಗೂ ಸಂಕಟವಾಗುವುದು. ಮಗ – ಸೊಸೆ, ಮಗಳು- ಅಳಿಯ, ಮೊಮ್ಮಕ್ಕಳು, ಬಂಧು-ಬಳಗ ತುಂಬಿದ ಸಂಸಾರ. ಆದರೂ ಸಾವು ತಮ್ಮನ್ನು ಅಗಲಿಸಿಯೇ ತೀರುವದೆನ್ನುವ ಸಂಗತಿ ಅವಳಲ್ಲಿ ಗಟ್ಟಿಯಾಗುತ್ತಿತ್ತು.

ಸರಸ್ವತಿ ತುಂಬಿದ ಕೊಡ. ಇದ್ದಷ್ಟು ದಿನ ತನ್ನನ್ನು, ಮಕ್ಕಳು, ಮನೆಯನ್ನು ಪ್ರೀತಿಯಿಂದ ನೋಡಿಕೊಂಡವಳು. ಕಷ್ಟ-ಸುಖದಲ್ಲಿ ಪಾಲು ಹಂಚಿಕೊಂಡಳು. ತನಗಾಗಿ ಎಂದೂ ಏನೂ ಬಾಯಿಬಿಟ್ಟು ಕೇಳಿದವಳಲ್ಲ. ಒಳ್ಳೆಯ ಮನಸ್ಸಿನವಳು. ಅಂದವರು, ಆಡಿದವರು ಎಲ್ಲರೂ ನನ್ನವರೇ ಎನ್ನುವವಳು. ಈ ಒಳ್ಳೆಯ ಜೀವಕ್ಕೆ ಇಂಥ ಬೇನೆ ಹತ್ತಿತಲ್ಲ ! ಎಲ್ಲ ಡಾಕ್ಟರರೂ ಕೈ ಬಿಟ್ಟಿದ್ದಾರೆ ಇದ್ದಷ್ಟು ದಿನ ಮನೆಯ ಶಾಂತ ವಾತಾವರಣದಲ್ಲಿ ಇರುತ್ತೇನೆಂದು ಆಸ್ಪತ್ರೆ ಬಿಟ್ಟು ಬಂದಿದ್ದಾಳೆ. ಸಾವು ಎಷ್ಟು ಹತ್ತಿರ ಬಂದಿದೆ. ಎಂದರೆ ಅದರ ಕೊಕ್ಕು ಅವಳನ್ನು ಮುಟ್ಟಿದೆ ಯಾವಾಗ ಕುಕ್ಕುವದೋ ಗೊತ್ತಿಲ್ಲ.

"ಏನ ವಿಚಾರ ಮಾಡ್ತಿರಿ" ಗಂಡನ ಮುಖ ನೋಡುತ್ತ ಸರಸ್ವತಿ ಕೇಳಿದಳು.

"ಬ್ಯಾರೆ ಏನಿಲ್ಲ ಸರೂ, ನಿನ್ನ ಬಗ್ಗೇ ವಿಚಾರ ಮಾಡ್ತಿದ್ದೆ. ಇಷ್ಟು ವರ್ಷ ಜೊತೆಗೆ ಇದ್ದರೂ ನೀನು ನಿನ್ನ ಸಲುವಾಗಿ ಏನೂ ಕೇಳ್ಲಿಲ್ಲ. ಈಗ ನನ್ನ ಬಿಟ್ಟು ಹೊರಟೀ, ಏನಾದರೂ ಆಸೆ ಇದ್ದರ ಹೇಳು ಅನ್ನಲಿಕ್ಕೆ ಮನಸ್ಸು ಹಿಂಜರೀತದ. ಯಾಕಂದರ ನಿನ್ನ ಪರಿಸ್ಥಿತೀನ ಹಾಂಗ ಅದ."

"ನೀವು ಖರೇನ ನನ್ನ ಆಸೆ ಪೂರ್ಣ ಮಾಡ್ತಿರೇನು."

"ಯಾಕ ಸರೂ ನಿನಗ ಸಂಶಯ ಅದ ಏನು, ನೀ ಏನು ಕೇಳಿದ್ರೂ ನಾ ತಯಾರ ಅದೀನಿ."

"ಹಾಂಗಾದರ ನಾ ವಿಚಾರ ಮಾಡಿ ಹೇಳ್ತೀನಿ" ಅವಳು ಏನು ಕೇಳಿದರೂ ಕೊಡಬೇಕೆನ್ನುವ ವಿಚಾರದಿಂದ ವಿರುಪಾಕ್ಷಪ್ಪನವರ ಮನಸ್ಸು ತಮ್ಮ ಹಣಕಾಸಿನತ್ತ ಹೊರಳಿ ವಿವೇಕನೊಡನೆ ಮಾತನಾಡಲು ಎದ್ದು ಹೊರಗೆ ಹೋದರು.

ಎರಡು ಮೂರು ದಿನದ ತರುವಾಯ ಸರಸ್ವತಿ "ಸೋಮುನ್ನ ಕರಸ್ರಿ.... ಲಗೂನ ತಾರು ಅಥವಾ ಫೋನ್ ಮಾಡ್ರಿ" ಎಂದಳು ಗಂಡನಿಗೆ.

"ಸೋಮು ಯಾಕ? ಹೋದ ತಿಂಗಳು ಬಂದು ಹೋಗ್ಯಾನ, ಕೇಸು ಭಾಳ ಅದಾವ ಅಂತಿದ್ದಾ. ನಿನಗೆ ಬೇಕಾದದ್ದು ನನ್ನ ಕೇಳಲ್ಲ."

"ಇಲ್ಲಾ ಅಂವಾ ಬರಬೇಕು. ಕೆಲಸ ಅದ. ಅದಷ್ಟು ಲಗೂ ನಾಳೇ ಬಾ ಅನ್ರಿ."

ಅಡ್ವೋಕೇಟ ಸೋಮಶೇಖರ ಬಂದ. ಅಕ್ಕನೆಂದರೆ ಅಷ್ಟು ಪ್ರೀತಿ ಅವನಿಗೆ. ಅವಳೇನು ಕೇಳುತ್ತಾಳೊ ಎನ್ನುವ ಕುತೂಹಲದಿಂದ ಹತ್ತಿರ ಕುಳಿತ. ಉಳಿದವರೆಲ್ಲ ಹೊರಗೆ ಹೋಗಬೇಕೆಂದು ಹೇಳಿದಳು ಸರಸ್ವತಿ.

"ನನ್ನ ಮಾತು ನಡೆಸಿಕೊಡ್ತೀಯಾ, ಸೋಮು" ಎಂದಳು, ಅವನ ಕೈಹಿಡಿದು.

"ಕೇಳ್ಯರೆ ಕೇಳಕ್ಕಾ. ಮಾವಾ, ನಾವು ಎಲ್ಲಾ ತುದಿಗಾಲ ಮ್ಯಾಲೆ ನಿಂತೀವಿ. ನಿನ್ನ ಆಸೆ ಏನು ಹೇಳು."

"ನಾನು ನಿನ್ನ ಕಡೇಂದ ವಿಲ್ ಬರಸಬೇಕಂತ ಮಾಡೀನಿ."

"ಆಗಲಿ ಹೇಳು ಅಕ್ಕಾನಾ ಬರಕೋತೀನಿ. ನಿನ್ನ ವಸ್ತ್ರ, ಒಡವಿ, ಹೊಲಾ ಎಲ್ಲಾ ಯಾರಿಗೆ ಕೊಡಬೇಕಂತೀ ಹೇಳು."

ತುಟಿಗಳಲ್ಲೇ ನಕ್ಕು ಸರಸ್ವತಿ ಸಾವಕಾಶವಾಗಿ, ಸಣ್ಣ ದನಿಯಲ್ಲಿ ಉಸಿರಿಗೆ ವಿಶ್ರಾಂತಿ ಕೊಡುತ್ತ, ಹೇಳುತ್ತ ಹೋದಳು. ಒಂದು ತಾಸಿನ ನಂತರ ಹೊರಗೆ ಬಂದ ಅವನ ಮುಖ ನೋಡಿದರು, ವಿರುಪಾಕ್ಷಪ್ಪ. ಅಲ್ಲಿ ಚಿಂತೆಯ ನೆರಳಿತ್ತು. ಮುಖ ಗಂಭೀರವಾಗಿತ್ತು.

"ವಿಲ್ ಯಾವಾಗಲೂ ಬರೆಸಿದವರು ತೀರಿಕೊಂಡ ಮ್ಯಾಲೆ ಓದ್ತಾರಲ್ಲ ಮಾವಾ, ಹಾಂಗ ಇದೂ, ಅಲ್ಲೀವರೆಗೂ ಗುಟ್ಟಾಗಿ ಇರ್ತದ. ಆದರ ಅಕ್ಕನ ಸಾವಿನ ಸುದ್ದಿ ನನಗ ಲಗೂನ ತಿಳಿಸ್ಬೇಕು. ಆದಷ್ಟು ಲಗೂನ. ಮತ್ತ ನಾನು ಬರಲಾರದೆ ಅಂತ್ಯಕ್ರಿಯೆ ವ್ಯವಸ್ಥೆ ಮಾಡಬಾರದು ಮಾವಾ,ನೆ ನಪಿಡ್ರಿ. ಇದೇ ಮಹತ್ವದ್ದು" ಕಣ್ಣು ಒರೆಸಿಕೊಳ್ಳುತ್ತ ಸೋಮು ಹೊರಟುಹೋದ.

ಒಂದು ವಾರದಲ್ಲಿ ಸರಸ್ವತಿ ತೀರಿಕೊಂಡಳು. ಸಾವು ನಿರೀಕ್ಷಿತವಿದ್ದರೂ ಅಗಲಿಕೆಯ ನೋವು ಎಲ್ಲರನ್ನೂ ಘಾತಿಸಿತು. ಸೋಮು ಬಂದು ಶಾಂತವಾಗಿ ಕಣ್ಣು ಮುಚ್ಚಿ ಮಲಗಿದ್ದ ಅಕ್ಕನ ಹಣೆ ಸವರಿ, ದುಃಖಿಸಿ ಹೊರಗೆ ಬಂದ.

ಮನೆಯವರು, ಬಂಧುಗಳು ಎಲ್ಲರೂ ಮಾವಾನ ಕೋಣೆಗೆ ಬರ ಬೇಕೆಂದು ಹೇಳಿ ಕಳಿಸಿದ. ವಿಲ್ ಓದಲು ಈಗಲೇ ಏನು ಅವಸರ ಎಂದರು ವಿವೇಕ, ಮಧುಮತಿ.

"ಇಲ್ಲಾ ಮಧು, ಅಕ್ಕನ ವಿಲ್ ಮೊದಲು ಓದಬೇಕು. ಆ ಮ್ಯಾಲೆ ಉಳಿದ ಕೆಲಸಾ. ಎಲ್ಲಾರ್ರೂ ಕರಿ."

"ನಾನು ಸರಸ್ವತಿ ವಿರುಪಾಕ್ಷ ಹುಂಡೇಕಾರ. ವಯಸ್ಸು ಐವತ್ತಾರು. ಕ್ಯಾನ್ಸರ್ ಬೇನೆಯಿಂದ ಹಾಸಿಗೆ ಹಿಡದೇನಿ. ಇನ್ನ ಭಾಳದಿನಾ ಬದುಕೂದಿಲ್ಲಾ. ಅಡ್ವೋಕೇಟ್ ಸೋಮಶೇಖರ ಪಾಟೀಲರಿಂದ ವಿಲ್ ಬರಸ್ತಾ ಇದ್ದೀನಿ. ನನ್ನ ಮರಣದ ನಂತರ ಈ ವಿಲ್‌ನೊಳಗ ಇದ್ದ ಹಾಂಗ ಎಲ್ಲಾರು ನಡಕೋಬೇಕು. ಅಂತ ನನ್ನ ಇಚ್ಛಾ ಅದ.

ನನ್ನ ವಸ್ತ್ರ–ಒಡವೆ ಎಲ್ಲಾ ಮಗಳು ಮಧುಮತಿ ಮತ್ತು ಮಗ ವಿವೇಕನ ಹೆಂಡತಿ ಶಶಿಕಲಾ ಇಬ್ಬರೂ ಅರ್ಧರ್ಧ ಹಂಚಿಕೋಬೇಕು. ನನ್ನ ಹೆಸರಿನ ಮೂರುವರೆ ಎಕರೆ ಹೊಲಾ ಮಾರಿ ಅದರ ರೊಕ್ಕದಿಂದ ಅನಾಥ ಹೆಣ್ಣು ಮಕ್ಕಳಿಗೆ ಮತ್ತು ವಿಧವೆಯರಿಗೆ ಇರಲಿಕ್ಕೆ ಉಪಯೋಗ ಆಗೂ ಹಾಂಗ ಒಂದು ಹಾಸ್ಟೆಲ್ ಕಟ್ಟಿಸಬೇಕು. ಅವರ ವ್ಯವಸ್ಥೆ ಎಲ್ಲಾ ನನ್ನ ಯಜಮಾನರು ನೋಡಿಕೋಬೇಕು ಅಂತ ನನ್ನ ಇಚ್ಛಾ ಅದ.

ಇನ್ನೊಂದು ಮುಖ್ಯವಾದ ಮಾತು ಅಂದರ ಈ ಸೀರೆ, ಒಡವೆ, ಹೊಲಾ ಎಲ್ಲಾ ನನ್ನ ತಂದಿಯವರು ಮತ್ತು ಯಜಮಾನರು ಕೊಟ್ಟಿದ್ದು. ಆದರ ನನ್ನ ಈ ದೇಹ ಮಾತ್ರ ನನ್ನ ಸ್ವಂತ ಆಸ್ತಿ. ಅದನ್ನ ಯಾವದೇ ರೀತಿ ವಿಲೇವಾರಿ ಮಾಡೂ ಅಧಿಕಾರ ನನಗ ಅದ ಅಂತ ನಾ ತಿಳಕೊಂಡೇನಿ. ನನ್ನ ಮರಣದ ತರುವಾಯ ತನ್ನ ದೇಹದ ಅಂತ್ಯಕ್ರಿಯಾ ನನ್ನ ಇಚ್ಛಾ ಪ್ರಕಾರ ಮಾಡಬೇಕು ಅಂತ ನನ್ನ ಆಸೇ ಅದ.

ನಾನು ಏಳೆಂಟು ವರ್ಷದಾಕಿ ಇದ್ದಾಗ ನನ್ನ ಅಜ್ಜಿ–ತಾಯಿಯ ತಾಯಿ-ತೀರಿಕೊಂಡರು. ಎಲ್ಲಾರೂ ಅವರ ಊರಿಗೆ ಹೋದ್ವಿ. ಊರ ಜನಾ ಎಲ್ಲಾ ಕೂಡಿದ್ರು. ಜೋರಾಗಿ ಹಲಗಿ ಬಾರಸ್ತಿದ್ರು. ಕಿವಿ ಮದ ಅಂತಿದ್ವು. ನನ್ನ ಎದೀ ಡಬ ಡಬ ಬಡಕೋತಿತ್ತು. ಮತ್ತೊಂದು ಕಡೆ ಭಜನಿಯವರು ಗಂಟಲು ಹರಿಯುವಾಂಗ ದನಿ ಎತ್ತರಿಸಿ ಹಾಡತಿದ್ರು. ಅವ್ವನ ನೋಡಿದ ಕೂಡಲೇ ಒಳಗಿನ ಹೆಣ್ಣುಮಕ್ಕಳು 'ಬಂದ್ಲ ನೋಡವ್ವ ನಿನ್ನ ಮಗಳೂ, ನೀ ಬಾಯಾಗ ಮಣ್ಣು ಹಾಕೊಂಡ ಹೊಂಟೀ' ಎಂದು ಕಿರಚಿದರು. ಯಾರೋ ಲಬ ಲಬ ಹೊಯ್ಕೊಂಡರು. ಎದೀ ಎದೀ ಬಡಕೊಂಡು ಅತ್ತರು. ನನಗ ಗಾಬರಿ ಆಯ್ತು.

ಸಾವು ಅಂದರ ಏನು ಅನ್ನೋದು ಗೊತ್ತಿಲ್ಲದ ನಾನು ಅಜ್ಜೀನ್ನ ಹುಡುಕಾಡಿದೆ. ಆಕೀಗೆ ಭೊಲೋ ಸೀರಿ ಉಡಿಸಿ, ಹಣೆ ತುಂಬ ವಿಭೂತಿ, ಕುಂಕುಮ, ಅರಿಶಿಣ, ಹಚ್ಚಿ, ಹೂವಿನದಂಡೀ ಕಟ್ಟಿ, ಬಂಗಾರ ಸಾಮಾನು ಹಾಕಿ ಚಪ್ಪಾಳೆ ಗಾಲು ಹಾಕಿ ಗೋಡೆಗೆ ಆತು ಕೂಡ್ರಿಸಿ, ಕುತ್ತಿಗೆಗೆ ಎರಡು ಕೋಲು ಆಧಾರ ಚುಚ್ಚಿ ಕೂಡ್ರಿಸಿದ್ದರು. ದೀಪ, ಊದುಬತ್ತಿ ಹೊಗೀ, ಟೆಂಗಿನಹೋಳು, ಕತ್ತಲಮನಿ, ದುಃಖ ಇಲ್ಲದಿದ್ದರೂ ಹಾಡಿ ಹಾಡಿ ಅಳೂ ಮಂದಿ ಗದ್ದಲ. ನನಗ ಭಾಳ ಹೆದರಿಕಿ ಆತು. ಅವ್ವನ ಸೆರಿಗಿನ್ಯಾಗ ಮುಖಾ ಮುಚ್ಚಿಕೋಬೇಕಂದು. ಆದರ ಅವ್ವನ್ನ ಎಳದ ಒಯ್ದು ಅಜ್ಜಿ ಮುಗ್ಗ ಲದಾಗ ನೋಣಾ ಝಾಡಿಸಲು ಕೂಡ್ರಿಸಿದರು. ನನಗ ಅಲ್ಲೆ ನಿಲ್ಲೂದಾ ಗಲಿಲ್ಲ. ಅಂಜಕೋತ ಎದ್ದು ಹಿತ್ತಲಕ ಹೋಗಿ ಮಾವನ ಮಕ್ಕಳ ಕೂಡ ಕೂತೆ. ಹೆದರಿಕೆ ಆಗಿ ಭಾಳ ಅತ್ತಿದ್ದೆ. ಅಜ್ಜೀನ ಎತ್ತೊ ಮುಂದ ನಮ್ಮನ್ನೆಲ್ಲಾ ಒಳಗ ಕರದ್ರು. ಯಾವನೊ ಹೊರಗಿನಿಂದ ಬಂದು ಅಜ್ಜೀ ತೊಡೀ ಮ್ಯಾಲೆ ಕಾಲಿಟ್ಟು ಮಣಾ ಮಂತ್ರಾ ಅಂದ. ನಾ ನೋಡಿ ದಾಗ ಅಂವಾ ಬೀಡಿ ಸೇದಿಕೋತ ಹೊರಗೆ ಭಜನಿಯವರ ಹತ್ತರ ಕೂತಿದ್ದ. ಅಂವಾ ಅಜ್ಜೀನ ತುಳಿತಾನಲ್ಲೆ ಅಂತ ಭಯ ಸಿಟ್ಟು ಬಂತು. ಮಾವನ ಮಗನ ಮುಂದೆ ಹೇಳಿದೆ. ಹಿಂದಿನ ರಾತ್ರಿ ಅಂವಾ ಸೆರೇನ ಕುಡೀತಿದ್ದಾ ಅಂತ ಚೆನ್ನಣ್ಣ ನನಗ ಹೇಳಿದ. ನಾವು ಸಣ್ಣವರು ಅಂತ ಸ್ಮಶಾನಕ್ಕ ನಮ್ಮ ಒಯ್ಯಲಿಲ್ಲ. ದೊಡ್ಡಾಕಿ ಆದ ಮ್ಯಾಲೆ ಇಲ್ಲಿತನಾ ಎಷ್ಟೋ ಅಂತ್ಯಕ್ರಿಯೆ ನೋಡೇನಿ. ಬಟ್ಟೆ ತೆಗೆದು, ಚೀಲದೊಳಗ ಇಳಿಸಿ ಮಾಡಿನಾಗಿಟ್ಟು ಮಣ್ಣು ಮುಚ್ಚತಾರ. ಛೀ ಛೀ ಮುಖ ಎಲ್ಲಾ ಮಣ್ಣಾಗ್ತದ. ಮೂಗು, ಕಣ್ಣಿ ನೊಳಗ ಮಣ್ಣು ಹೋಗ್ತದ ಅನಿಸಿ ಮೈ ಜುಂ ಅಂತದ. ಸಣ್ಣ ಹುಡುಗಿ ಇದ್ದಾಗಿನಿಂದ ಗಾಬರಿ, ಹೆದರಿಕೀ, ಜಿಗುಪ್ಸೆ ಎಲ್ಲಾ ನನ್ನೊಳಗ ಸೇರಿಬಿಟ್ಟದ.

ಇನ್ನೊಂದು ಮಾತು, ನಾನು ಕಾಲೇಜಿನ್ಯಾಗ ಓದೂ ಮುಂದ ನನಗ ಜೇನ್ ಅಂತ ಗೆಳತಿ ಇದ್ದಳು. ಆವಳ ಅಂದರ ನನಗ ಭಾಳ ಪ್ರೀತಿ. ಓದು ಆಟ, ಪಾಠ ಎಲ್ಲಾ ಇಬ್ರೂ ಕೂಡಿ ಮಾಡತಿದ್ವಿ, ಅಗಲಿ ಇರತಿದ್ದಿಲ್ಲಾ. ಸುಖಾ-ದುಃಖಾ ಹಂಚಿಕೋತಿದ್ವಿ. ಈಗ ಆಕೀ ಮಿಲಿಟ್ರಿಯವರನ್ನ ಮದುವಿ ಮಾಡಿಕೊಂಡು ಹಿಮಾಲಯದ ತಪ್ಪಲಿನೊಳಗ ಆದಾಳ. ಯಾವಾಗಲೆ

ಪತ್ರಾ ಬರೀತಿರತಾಳ. ಅವಳ ತಂದಿ ತೀರಿಕೊಂಡಾಗ ನಾನು ಅವರ ಮನೀಗೆ ಹೋಗಿದ್ದೆ. ಒಳ್ಳೆ ಸೂಟು ಹಾಕಿ ಕಟ್ಟಿಗೆ ಪೆಟ್ಟಿಗೆಯೊಳಗೆ ಜೇನ್ ತಂದಿನ್ನ ಮಲಗಿಸಿದ್ದರು. ಹೂವ ಹಾಕಿದ್ದರು. ಮೇಣಬತ್ತಿ ಹಚ್ಚಿಟ್ಟದ್ದರು. ಹೊಟ್ಟೆ ತುಂಬ ದುಃಖ ಇದ್ದರೂ ಯಾರೂ ಜೋರಾಗಿ ಅಳತಿದ್ದಿಲ್ಲಾ, ನೆರೆದ ವರೆಲ್ಲಾ ಮೇಣಬತ್ತಿ ಹಚ್ಚಿ, ಪ್ರಾರ್ಥನಾ ಮಾಡಿ ಮಾತಾಡದೆ ಸ್ವಲ್ಪ ಹೊತ್ತು ನಿಂತು, ನೋಡಿ ಹೋಗುತ್ತಿದ್ದರು. ಆ ಶಾಂತ ವಾತಾವರಣದೊಳಗೆ ಮೇಣ ಬತ್ತಿ ಬೆಳಕಿನ್ಯಾಗ ಕಣ್ಮುಚ್ಚಿ ನಿದ್ದಿ ಮಾಡ್ತಾರೇನೋ ಅನ್ನೂ ಹಾಂಗ ಮಲಗಿದರು. ಸ್ಮಶಾಸಕ್ಕ ಹೋದ ಮ್ಯಾಲೆ ಪೆಟ್ಟಿಗೇನ ತೆಗ್ಗಿನ್ಯಾಗ ಇಳಿಸಿ ಮಣ್ಣು ಮುಚ್ಚಿದ್ದರು. ಇದೆಲ್ಲಾ ನನಗ ಹೊಸಾದು. ಅಂತ್ಯಕ್ರಿಯೆ ಮುಗಿಸಿ ಬಂದೆ. ಆ ರಾತ್ರಿ ನನಗ ಎಚ್ಚರಾದಾಗ ಮಳೀ, ಗುಡುಗು, ಮಿಂಚು ಇತ್ತು. ಜೇನ್‌ನ ತಂದಿ ಬೆಚ್ಚಗ ಪೆಟ್ಟಿಗೆಯೊಳಗ ಮಲಗ್ಯಾರಲ್ಲ ಅಂತ ಅನಿಸ್ಯಿ ಮನಸ್ಸಿಗೆ ಸಮಾಧಾನ ಆತು. ಅವತ್ತಿನಿಂದ ನನ್ನ ಮನಸ್ಸಿನ ಮೂಲಿಯೊಳಗೆ ಇದೊಂದು ಆಸೇ ಬಂದು ಬಿಟ್ಟದ. ನಾ ಸತ್ತ ಮ್ಯಾಲೆ ನನ್ನ ದೇಹಾನ ಹಿಂಗ ಶಾಂತ ರೀತಿಯಿಂದ, ಪೆಟ್ಟಿಗೆಯೊಳಗ ಹಾಕಿ, ಮಣ್ಣಿನೊಳಗ ಹಾಕಬೇಕು ಅಂತ. ಅದೇ ರೀತಿ ನನ್ನ ಗಂಡ, ಮಕ್ಕಳು ನನ್ನ ಆಸೇ ಪೂರೈಸಬಹುದು ಅಂತ ಇಚ್ಛಾ ಮಾಡೇನಿ."

ಅಲ್ಲಿಯವರೆಗೆ ಕೋಣೆ ನಿಶ್ಯಬ್ದವಾಗಿತ್ತು. ಒಮ್ಮೆಲೆ ಗುಜು ಗುಜು ಶಬ್ದ, ತಲೆಗೊಂದು ಮಾತು. ನಮ್ಮ ಸಮಾಜದಾಗ ಹುಟ್ಟಿ ನಮ್ಮ ಪದ್ಧತಿ ನಡೆಸದಿದ್ದರ ಹ್ಯಾಂಗ. ಜನ ಸುಮ್ಮನಿರತಾರೇನು. 'ನಮ್ಮ ಹಿರೇರು ಎಲ್ಲಾ ವಿಚಾರ ಮಾಡೇ ಪದ್ಧತಿ ಮಾಡಿ ಇಟ್ಟಾರ. ಅದರ ವಿರುದ್ಧ ನಾವು ಹೋದರ ಛೀ ಅಂತಾರ ಜನರು.' 'ಮುತ್ತೈದಿ ಮಗಳು ಪುಣ್ಯವಂತಿ. ಅರಿಶಿಣ ಕುಂಕುಮ ಸೂರಿ ಮಾಡಬೇಕು. ಸೀರೆ-ದಂಡಿ ಎಲ್ಲಾ ಕಟ್ಟಬೇಕು. ಮತ್ತೆ ಬೇಡಿದರೂ ಇವು ಸಿಗಂಗಿಲ್ಲಾ.' 'ಅಳಬಾರದಂತ, ಅತ್ತರ ಹೆಣಾ ಭಂದವ್ವಾ. ಸರಸವ್ವಂದು ಲೋಕದ ಹೊರ್ತ ಮಾತು.' 'ತಾನು ಓದು ಬಲ್ಲಾಕಿ ಅಂತ ಎಲ್ಲಾರ್ನೂ ಮೀರಿ ನಿಲ್ಲಬಾರದವ್ವಾ.' 'ಅವರು ಶ್ರೀಮಂತರವ್ವ ಏನ ಮಾಡಿದರೂ ನಡೀತದ.'

ವಿರುಪಾಕ್ಷಪ್ಪನವರ ತಂಗಿ ಎದ್ದು ಬಂದಳು. "ಓದಿದ್ದು ಆಯ್ತಲ್ಲ. ಏಳ್ರಣ್ಣಾ. ಹೆಣಾ ಬಿರುಸಾಗ್ತದ, ಕಾಲು ಮುರೀಬೇಕಾಗತದ. ಇನ್ನೂ ಮೈ ತೊಳೀಬೇಕು. ಸೀರಿ ಉಡಸಬೇಕು. ಎಲ್ಲಾರಿಗೂ ತಡಾ ಆಗ್ತದ, ಏಳ್ರಿ."

"ನಾಗವ್ವತ್ತೀ, ಇಷ್ಟೋತ್ತನಾ ಅವ್ವನ ಆಸೆ ಏನು ಇತ್ತು ಓದಿದ್ರಲ್ಲ. ಕೇಳಿದಿ ಇಲ್ಲೊ." ಮಧುಮತಿ ಅತ್ತೆಯನ್ನು ಎದುರಿಸಿದಳು.

"ಅಯ್ಯ, ಬ್ಯಾನಿ ಬಿದ್ದಾಕಿ. ಆಕಿ ಏನೋ ತಿಳೀಲಾರದ ಹಾಂಗ ಬರಸ್ಯಾಳಂತ ನೀವು ಹಾಂಗ ಮಾಡವರೇನು."

"ಅವ್ವ ಬ್ಯಾನಿ ಬಿದ್ದರೂ ಆಕಿ ಬುದ್ಧಿ ಸರಿ ಇತ್ತು. ಅತ್ತೀ, ಆಕಿ ವಿಚಾರವಂತಳು. ಆಕಿ ವಿಚಾರ ಬುದ್ಧಿ ನಿಮಗ ಅರ್ಥ ಆಗೂದು ಸಾಧ್ಯ ಇಲ್ಲ. ನಮ್ಮವ್ವನ ವಿಷಯ ನಮಗ ಸರಿ ಕಂಡಾಗ ಮಾಡ್ತೀವಿ." ವಿವೇಕ ಕಡ್ಡಿ ಮುರಿದಂತೆ ಉತ್ತರ ಕೊಟ್ಟ.

ಬಂಧುಗಳೆಲ್ಲ ಎದ್ದರು. "ವಿರುಪಾಕ್ಷಪ್ಪ, ನೀ ಏನು ಅಂತೀ ಹೇಳು. ಕುಣೀ ಕಡಿಯಾಕ, ಜಂಗಮರಿಗೆ, ವಿಮಾನಕ್ಕ, ಭಜನಿಯವರಿಗೆ ಮಣ್ಣಿಗೆ ಬರಲಿಕ್ಕೆ ಊರ ಜನರಿಗೆ ಹೇಳು ಅಂದರ ಹೇಳ್ತೀವಿ. ಮಕ್ಕಳ ಹಾಂಗ ನೀನೂ ಮಾತಾಡಿದರ ನಾವು ಹೊರಡ್ತೀವಿ."

"ಅವ್ವನ ಆಸೆ ಪೂರೈಸಬೇಕು ಅಂತ ಮಕ್ಕಳಿಗೆ ಆಸೆ ಇದ್ದಾಂಗ ಹೆಂಡತಿ ಕಡೀ ಇಚ್ಛಾ ಪೂರ್ಣ ಮಾಡಬೇಕು ಅಂತ ನನಗೂ ಮನಸ್ಸದ ಗುರುಪ್ಪಣ್ಣಾ. ಆಕೀ ಇರೂತನಾ ನಿಮ್ಮೆಲ್ಲಾರ ಕೂಡ ಛೊಲೋತ್ನಾಗ ನಡಕೊಂಡಾಳ. ಜೀವ ಇಲ್ಲದಿದ್ದರೂ ಆಕೀ ದೇಹ ಅದ. ಆಕಿ ಇಚ್ಛಾದಂಗ ನಾಳೆ ಮುಂಜಾನೆ ಹತ್ತು ಗಂಟೇಕ ನಾವು ಮಣ್ಣು ಮಾಡ್ತೀವಿ. ನಿಮಗೆಲ್ಲಾ ಸರಿ ಅನಿಸಿದರ ಸ್ಮಶಾನಕ್ಕ ಬರ್ರಿ. ನಾನು ಆಕೀಗೆಮಾತು ಕೊಟ್ಟೇನಿ ಅದರಂತೇ ನಡೀತಿನಿ."

ವಿರೂಪಾಕ್ಷಪ್ಪನವರ ಮಾತು ಕೇಳಿದ ಕೆಲವರು ಸಿಡಿದು ದಡದಡ ಹೋಗಿ ಬಿಟ್ಟರು. ಕೇವಲ ಕೆಲವರು ಅವರ ಒಳ್ಳೆಯತನಕ್ಕೋ ಋಣಭಾರಕ್ಕೋ ಒಳಗಾಗಿ ಅಲ್ಲಿಯೇ ಉಳಿದರು. ದುಃಖವನ್ನು ಹತ್ತಿಕ್ಕಿಕೊಂಡ ಮಧು, ಶಶಿ, ಅವಳ ತಾಯಿ ಸರಸ್ವತಿಯ ದೇಹಕ್ಕೆ ಸ್ನಾನ ಮಾಡಿಸಿ, ಬಿಳಿಯ ಜರದಂಚಿನ ಸೀರೆ ಉಡಿಸಿ, ಪನ್ನೀರು ಚಿಮುಕಿಸಿ, ಗುಲಾಬಿ ಹೂ ಹಾಕಿ, ಮಿತವಾಗಿ

ಅಲಂಕಾರ ಮಾಡಿ, ವಿವೇಕ ಮಾಡಿಸಿ ತಂದ ಪೆಟ್ಟಿಗೆಯಲ್ಲಿ ಮಲಗಿಸಿ ಸುತ್ತ ದೀಪ ಹಚ್ಚಿ ಕುಳಿತರು. ವಿಷಯ ತಿಳಿದ ಜನ ಗುಂಪು ಗುಂಪಾಗಿ ಬಂದು ನೋಡಿದರು. ಆಡಿಕೊಂಡ ಮಾತುಗಳೆಲ್ಲ ಗಾಳಿಗೆ ಹಾರಿ ಹೋದವು.

ಸ್ಮಶಾನದಲ್ಲಿ ಪೆಟ್ಟಿಗೆ ಕುಣಿಯಲ್ಲಿ ಇಳಿಸುವಾಗ ಕೊನೆಯ ಬಾರಿಗೆ ಮುಖ ತೋರಿಸಲು ಮುಚ್ಚಳ ತೆರೆದರು. ಸರಸ್ವತಿಯ ತುಟಿ ಕೊಂಕೀತೇ ? ಮಧುಮತಿ ದಿಟ್ಟಿಸಿ ನೋಡಿದಳು. "ಅವ್ವ ನಗ್ತಾಳ, ಅಪ್ಪಾ, ಅಲ್ನೋಡು, ಅವ್ವ ನಗ್ತಾಳ" ಅಪ್ಪನನ್ನು ಅಪ್ಪಿಕೊಂಡು ಭೋರೆಂದು ಅತ್ತಳು ಮಧುಮತಿ. ಅವಳನ್ನು ಪ್ರಶಾಂತನಿಗೊಪ್ಪಿಸಿ ವಿರುಪಾಕ್ಷಪ್ಪ ಬಗ್ಗಿ ಹೆಂಡತಿಯ ಮುಖ, ಹಣೆ ಸವರಿದರು.

"ನಿನ್ನ ಮೈಗೆ ಮಣ್ಣು ಹತ್ತೂದಿಲ್ಲ ಸರೂ, ಮಳೀ ಗಾಳೀ ಏನೂ ಹತ್ತೂದಿಲ್ಲ. ಬೆಚ್ಚಗ, ಆರಾಮ" ಮಲಗು. ಅವಳು ನಗುತ್ತಿದ್ದಳು.

"ಅಪ್ಪಾಜಿ, ಅಪ್ಪಾರ ಎಲ್ಲಾ ಕೆಲಸ ಮುಗೀತು. ನಡೀರಿ ಮನೀಗೆ ಹೋಗೋಣ." ಕಣ್ಣು ಒರೆಸಿಕೊಳ್ಳುತ್ತ, ಎದ್ದ ವಿರುಪಾಕ್ಷಪ್ಪ ವಿವೇಕ, ಪ್ರಶಾಂತರ ಆಧಾರದಿಂದ ಅನಾಥಾಶ್ರಮದ ಮೆಟ್ಟಲಿಳಿದರು.

ಚಿತ್ರ

“ಇಲ್ಲೆ ಬರ್ರಿ ಅವ್ವ ಒಳಗ ಮಲಗ್ಯಾಳ” ಗುನುಗುನು ಕೇಳುತ್ತಿದ್ದ ದನಿ ಸ್ಪಷ್ಟವಾಗಿ ಹತ್ತಿರವಾಗುತ್ತಿದ್ದಂತೆ ಮೀನಾಕ್ಷಿ ಕಣ್ಣು ಮುಚ್ಚಿಕೊಂಡಳು.

“ಚ್ಚು, ಚ್ಚು, ಎಷ್ಟು ಸೊರಗ್ಯಾರಲ್ರಿ.” ಪ್ರಕಾಶರ ದನಿ ಗುರುತು ಹತ್ತಿದರೂ ಮೀನಾಕ್ಷಿ ಮಿಸುಕಲಿಲ್ಲ.

“ಅವ್ವ ಹಾಸಿಗಿ ಹಿಡದು ಮೂರ ತಿಂಗಳಾತು ಅಂಕಲ್. ಅರ್ಧಾಂಗ ವಾಯು ಆದವರು ಎಷ್ಟೋ ಮಂದಿಗೆ ಗುಣಾ ಆಗೇದ. ಟ್ರೀಟ್‌ಮೆಂಟ್ ನಡೆದದ. ಆದರೂ ಯಾಕೋ ಅವ್ವ ತಾನು ಬದುಕೂದೇ ಇಲ್ಲಾ ಅನ್ನೂ ಹಾಂಗ ಮಾತಾಡ್ತಾಳ.” ಅಜಯನ ಮಾತಿನಲ್ಲಿಯ ಕಳವಳ ಅವಳ ಕಣ್ಣು ಹಸಿ ಮಾಡಿತು. ತೆರೆದರೆ ರೆಪ್ಪೆದಾಟಿ ಕಂಬನಿ ತುಳುಕೀತೆನ್ನುವ ಆತಂಕದಿಂದ ಇನ್ನೂ ಬಿಗಿ ಹಿಡಿದಳು.

“ಅವ್ವಾ.” ಅಜಯ ಪಿಸುಗುಟ್ಟಿದ. “ಮಲಗಲಿ ಬಿಡ್ರಿ.” ಹೆಜ್ಜೆಗಳು ನಿಧಾನವಾಗಿ ದೂರವಾದವು.

ಒಂದು ದಿನ ಸ್ನಾನ ಮಾಡಿ ಹೊರಗೆ ಬರುತ್ತಿದ್ದವಳು ಹಾಗೇ ಪ್ರಜ್ಞೆ ತಪ್ಪಿ ಬಿದ್ದುಬಿಟ್ಟಿದ್ದಳು. ಆಸ್ಪತ್ರೆಯಲ್ಲಿ ಎಚ್ಚರವಾದಾಗ ಬಾಯಿ ಓರೆಯಾಗಿ ಮಾತು ನಿಂತಿತ್ತು. ಬಲಗಡೆಯ ಸ್ವಾಧೀನ ತಪ್ಪಿಹೋಗಿತ್ತು. ಬಡೋದೆಯಿಂದ ಅಖಿಲ ಹೆಂಡತಿ-ಮಕ್ಕಳೊಡನೆ ಬಂದು ನೋಡಿ ಹೋದ. ಒಬ್ಬಳೇ ಮಗಳು ಅನುರಾಧಾ ಬಂದು ಕಣ್ಣೀರಿಟ್ಟಳು. ಮಕ್ಕಳಿಬ್ಬರೂ ಹೊರಟು ನಿಂತಾಗ ಇನ್ನೊಮ್ಮೆ ಅವರನ್ನು ನೋಡುವೆನೋ ಇಲ್ಲವೋ ಎನ್ನುವ ಸಂಕಟದಿಂದ ತನ್ನ

ಕಣ್ಣೀರು ತಾವಾಗಿಯೇ ಇಳಿದುಹೋಗುತ್ತಿದ್ದವು. ಸಾವಿಗಾಗಿ ಹೆದರಿ ಅಳುತ್ತಿದ್ದೇನೆ ಎನ್ನುವ ತಪ್ಪು ಕಲ್ಪನೆಯಿಂದ ಬಂದವರೆಲ್ಲರೂ ಬದುಕುವ ಭ್ರಮಾಲೋಕವನ್ನು ಸೃಷ್ಟಿಸುವವರೇ.

"ಈಗಿನ ಕಾಲದಾಗ ಎಷ್ಟೋ ಹೊಸಾ ಔಷಧ ಬಂದಾವ. ಗುಣಾ ಆಗ್ತದ ನಿಮಗ. ಕಾಳಜಿ ಮಾಡಬ್ಯಾಡ್ರಿ."

"ಡಾ. ಪಾಟೀಲರಿಗೆ ಒಮ್ಮೆ ತೋರಿಸಿದ್ದರ ನೆಟ್ಟಗಿತ್ತು. ಅವರ ಕೈಗುಣಾ ಬಾಳ ಛೊಲೋ ಅದ."

"ನಮ್ಮ ನೆಗೆಣ್ಣ ತಂದಿಗೆ ಅರ್ಧಾಂಗಿ ಆದಾಗ ಅಂಕೋಲಾದಿಂದ ಎಣ್ಣೀ ತರಿಸಿದ್ದರು. ದಿನಾ ಮಾಲಿಷ ಮಾಡುತ್ತಿದ್ದರು."

"ಇದೇನ ದೊಡ್ಡದಲ್ಲ ಬಿಡ್ರಿ ಬ್ರೇನಕ ಲಕ್ವಾ ಹೊಡೆದು ಎಚ್ಚರ ಇಲ್ಲದ ಎಷ್ಟೋ ವರ್ಷ ಮಲಗಿದವರು ಇದ್ದಾರ. ನೀವೇನ ಮನಸಿಗೆ ಹಚ್ಚಿಕೋಬ್ಯಾಡರಿ."

"ಪಾಪ. ಎಷ್ಟು ಕೆಲಸಾ ಮಾಡವರು. ಗಂಡ, ಮಕ್ಕಳು, ಬರು ಹೋಗುವವರು ಎಲ್ಲಾರಿಗೂ ತಾವs ಸ್ವತಾ ಊಟ, ಉಪಚಾರಾ ಮಾಡಿದರ ಅವರಿಗೆ ಸಮಾಧಾನ. ಅಂಥವರು ಹಿಂಗ ನಿರ್ಜೀವ ಆಗಿ ಮಲಗೂದಂದರ ಮನಸ್ಸಿಗಿ ತ್ರಾಸ ಆಗ್ತದರೆವಾ."

"ಒಂದ, ಎರಡ ಹೋಲಿಗಿ ಹೆಣಿಕಿ, ಹಾಡು, ಅಡಿಗಿ ಎಲ್ಲಾದರೊಳಗೂ ಶಾಣ್ಯಾರವ್ವ ನಾವು ಅಂತಿದ್ವಿ ಇಷ್ಟೆಲ್ಲಾ ಹ್ಯಾಂಗ ಮಾಡುತಿದ್ದಾರು ಅಂತ."

"ಭಾಳ ಹಚಿಕೊಂಡು ಮಾಡಿ ಮಾಡೇ ಹಿಂಗಾಯ್ತೋ ಏನೋ, ಯಾರು ಬಲ್ಲರು ? ಜಡ್ಡು ಬಂದ ಮೇಲೆ ಬೇಕಾದಷ್ಟು ಔಷಧ ಕೊಡತಾರ. ಆದರ ಜಡ್ಡ ಯಾಕ ಬರ್ತಾವ ಅನ್ನೂದು ಇನ್ನೂ ಕಂಡುಹಿಡೀವೊಲ್ಲರು."

"ಭಾಳ ಒಳ್ಳೇ ಸ್ವಭಾವ ಮೀನಾಕ್ಷಮ್ಮಂದು. ಯಾರಿಗೂ ಒಂದು ಬಿರುಸು ಮಾತು ಆಡೂವವರಲ್ಲ. ಏನಿದ್ದರೂ ಒಳಗ ನುಂಗಿ ನಗನಗ್ತಾ ಇರುವವರು. ಪಾಪ ಹಿಂಗ ಮಲಗಿಬಿಟ್ಟಾರ."

"ಈ ಜನ್ಮದಾಗ ಅಲ್ಲದಿದ್ದರೂ ಹಿಂದಿನ ಜನ್ಮದಾಗಿನ ಪಾಪಕರ್ಮ ಇರಬೇಕು. ಅದಕ್ಕ ಯಾರು ಏನೂ ಮಾಡೂದು ಸಾಧ್ಯ ಇಲ್ಲಲ್ಲ. ಎಲ್ಲಾ ಆ ದೇವರ ಇಚ್ಛಾ ಅನ್ನೂದೂ."

ತಿರುಗಿ ಮಾತನಾಡಲು ಬಾಯಿ ಇಲ್ಲದಿದ್ದ ಆ ದಿನಗಳಿಂದ ಇಂಥ ಮಾತುಗಳು. ತಲೆ ಚಿಟ್ಟು ಹಿಡಿಸಿ ಉಸಿರುಗಟ್ಟಿಸುತ್ತಿವೆ. ಬೇರೆಯವರ ಕನಿಕರ ಮುಳ್ಳಾಗುತ್ತದೆ. ಅನುಕಂಪ ಇರಿಯುತ್ತದೆ. ಬೇನೆಯ ತೀವ್ರ ಸ್ಥಿತಿಯಲ್ಲಿ ಕೊರಡಿನ ಹಾಗೆ ಸುಮ್ಮನೆ ಬಿದ್ದುಕೊಳ್ಳುದದೊಂದೇ ಉಪಾಯ. ತಡೆಯಲು ಅಸಾಧ್ಯವಾದಾಗ ಡಾಕ್ಟರರಿಂದ ಭೆಟ್ಟಿಗೆ ಯಾರನ್ನೂ ಬಿಡಬಾರದೆಂದು ಸದಾನಂದನಿಗೆ ಹೇಳಿಸಿದ್ದಳು.

ಅನುರಾಧಾ ಹತ್ತಿರವಿರುವವರೆಗೆ ತಾಯಿಯ ಮಡಿಲಲ್ಲಿ ಮಲಗಿದ್ದ ಮಗುವಿನಂತೆ ಮೀನಾಕ್ಷಿ ನಿಶ್ಚಿಂತೆಯಾಗಿದ್ದಳು. ಎಂಥ ಯಾತನೆಯಾಗುತ್ತಿದ್ದರೂ ಮಗಳು ಒಮ್ಮೆ ಮೈಮೇಲೆ ಕೈಯಾಡಿಸಿದರೆ ಸಾಕು. ಆಗಿನ ಮಟ್ಟಿಗಾದರೂ ನೋವು ಕಡಿಮೆಯಾಗುತ್ತಿತ್ತು. ಪ್ರೀತಿಗಾಗಿ ಹಾತೊರೆದು ಸೋತುಹೋದ ಜೀವ ಅವಳದು.

ಗಂಡ, ಮಕ್ಕಳಿಗೆ, ವಯಸ್ಸಾದ ಅತ್ತೆಗೆ ತೊಂದರೆಯಾಗುವದೆಂದು ಕಣ್ಣೀರು ಒರೆಸುತ್ತ ಹೊರಟು ನಿಂತಳು ಅನುರಾಧಾ.

"ನಿನ್ನ ಸಂಸಾರಕ್ಕ ತ್ರಾಸ ಆಗಬಾರದು ಅನು. ನೀ ಬಂದು ಒಂದು ತಿಂಗಳಾತು. ಇದು ಲಗೂ ಗುಣಾ ಆಗೂ ಜಡ್ಡಲ್ಲ. ನೀಲೂ ಅಜಯ ನೋಡಿಕೋತಾರ ನೀ ಹೋಗಿ ಬಾ." ತೊದಲು ಮಾತಿನಲ್ಲಿ ತಾನೇ ಹೇಳಿ ಮಗಳನ್ನು ಕಳಿಸಿದ್ದಳು.

"ಅಮ್ಮಾ, ನಿಮಗ ರಾತ್ರಿ ಏನಾರ ಬೇಕಾಗ್ತದಲ್ಲ. ನಾ ಇಲ್ಲೆ ನಿಮ್ಮ ಮಂಚದ ಹತ್ತರ ಕೆಳಗ ಮಲಕೋತೀನಿ." ಮಲಗುವ ಸಿದ್ಧತೆಯಲ್ಲಿ ನೀಲೂ ಬಂದಿದ್ದಳು ಆ ರಾತ್ರಿ.

ಮಯೂರ ಅಜಯನ ಹತ್ತಿರ ಮಲಗಿದ್ದ. ನೀಲೂ ರಾತ್ರಿ ಬಹಳ ಹೊತ್ತಿನವರೆಗೆ ಅತ್ತಿತ್ತ ಹೊರಳುತ್ತ ಎಚ್ಚರವಿದ್ದಳು. ಬೆಳಿಗ್ಗೆ ಕಣ್ಣು ಕೆಂಪಗಿದ್ದವು. "ಅಮ್ಮಾ, ಗುಂಗಾಡು ಭಾಳ ಅದಾವ. ನನಗ ಲಗೂನ ನಿದ್ದೀನೇ ಬರಲಿಲ್ಲ."

ಚಿಕ್ಕ ವಯಸ್ಸಿನಲ್ಲಿ ಯಾವ ಹುಡುಗೀಗೆ ಗಂಡನಿಂದ ದೂರ ಮಲಗೋದು ಇಷ್ಟವಾಗ್ತದೆ. ಸುಖದ ಕನಸುಗಳನ್ನು ಮೈತುಂಬ ಮನದ ತುಂಬ ತುಂಬಿಕೊಂಡು ಅವನ ಅಪ್ಪುಗೆಯಲ್ಲಿ ಮಲಗುವ ವಯಸ್ಸು ಇದು–

"ಅಪ್ಸರೆಯರು ಅನಾಮತ್ತಾಗಿ ಎತ್ತಿ ತಂದು ನನ್ನ ಬೊಗಸಿಯೊಳಗ ಇಟ್ಟಾರ ಈ ಎರಡು ನಕ್ಷತ್ರು." ಸದಾನಂದ ಮೃದುವಾಗಿ ಮುದ್ದಿಡುತ್ತಿದ್ದ.

"ಈ ಮುಖಕಮಲದೊಳಗ ಎರಡು ದುಂಬಿ ಯಾಕ ಬಡದಾಡತಾವ." ಕಮಲವನ್ನು ಅಂಗೈಯಲ್ಲಿ ಹಿಡಿದು ಎದೆಗೆ ಒಪ್ಪಿಕೊಳುತ್ತಿದ್ದ.

"ಬೆಳಕು ಬ್ಯಾಡ, ಬ್ಯಾಡ ಮಿನ್ನಿ. ಈ ಕಣ್ಣಿನ್ಯಾಗಿನ ಮಿಂಚು ನನ್ನ ಇಡೀ ಜೀವನಕ್ಕ ಬೆಳಕು ತೋರಸ್ತದ." ತುಂಟತನದಿಂದ ಲೈಟು ತೆಗೆದು ಬಿಡುತ್ತಿದ್ದ.

ಗುಂಯ್....ಗುಂಯ್....ಹಂ. ಉಹುಂ....ಓಹ್! ಮತ್ತೆ ಮತ್ತೆ ಬಂದು ಕೊಡುತ್ತಿದ್ದ ಗುಂಗಾಡಿನ ಕಡಿತಕ್ಕೆ ಎಡಗೈ ಚಲಿಸಿದಳು ಮೀನಾಕ್ಷಿ.

ಒಂದು ಗುಂಗಾಡು ಕಚ್ಚಿದರೆ ಸಹಿಸಿಕೊಳ್ಳದ ಈ ದೇಹವನ್ನು ನಾಳೆ ಮಣ್ಣಿನಲ್ಲಿ ಹಾಕಿದಾಗ ಹೇಗಿರುತ್ತದೆಯೋ. ಸಾವು ಹತ್ತಿರವಾಗುತ್ತಿದ್ದಂತೆ ಅದರ ಬಗೆಗಿನ ಭಯವೂ ಮಾಯವಾಗುತ್ತದೆ. ಸುಮ್ಮನೆ ಮಲಗಿ ಮಾಡುವ ದಾದರೂ ಏನು? ದೇಹ ಅಲುಗದಿದ್ದರೂ ತಲೆ ಕೆಲಸ ಮಾಡುತ್ತಲೇ ಇರುವುದಲ್ಲ. ಈಗೀಗ ತನ್ನ ವಿಚಾರಗಳೆಲ್ಲ ಸಾವಿಗೇ ಹೋಗಿ ಮುಟ್ಟುತ್ತವೆ. ಸಾವು ಹೇಗಿರುತ್ತದೆ ಎನ್ನುವ ಅರ್ಥ ತಿಳುವಳಿಕೆ ತನಗೀಗ ಆಗಿದೆ ತನ್ನ ಚೈತನ್ಯ ಅರ್ಧ ತುಂಡಾಗಿದೆ. ಇನ್ನರ್ಧವೂ ಮುಗಿದಾಗ ಈ ಯೋಚನೆಗಳೂ ಇರುವುದಿಲ್ಲ. ಎಲ್ಲೆಂದರಲ್ಲಿ ನೋಯುತ್ತಿರುವ, ನವೆಯುತ್ತಿರುವ ಈ ದೇಹ ತಣ್ಣಗಾಗಿ ಆರಾಮಾಗಿ ಮಣ್ಣಿನಲ್ಲಿ ಮಲಗುತ್ತದೆ. ಆಹ್! ಸಾವಿನಲ್ಲಿ ಎಷ್ಟು ಸುಖ! ಆದರೆ ಆ ಕ್ಷಣ ಬರುವವರೆಗೂ ಹೀಗೇ ಒದ್ದಾಡುತ್ತಿರಬೇಕಲ್ಲ. ಮಗ–ಸೊಸೆ ಪ್ರೀತಿಯಿಂದ ಸೇವೆ ಮಾಡಿದರೂ ಇನ್ನೂ ಎಷ್ಟು ದಿನ ಅವರಿಗೆ ಭಾರವಾಗಿ ರೋಮ ಎನ್ನುವ ಚಿಂತೆ ತನ್ನನ್ನು ಒಳಗೇ ಕೊರೆಯುತ್ತದೆ–

ಕಣ್ಣು ಜಗ್ಗುತ್ತಿದ್ದರೂ ಈ ಚಿಕ್ಕ ಕೀಟ ತನ್ನನ್ನು ಬಿಡಲೊಲ್ಲದು. ತನ್ನ ಯೋಚನೆಗಳೆಲ್ಲ ಸಾವಿನ ಸುತ್ತ ಸುತ್ತುತ್ತಿರುವಂತೆ ಇದು ಬಿಟ್ಟೂಬಿಡದೆ ತನ್ನ ಕೈಯನ್ನೇ ಮತ್ತೆ ಮತ್ತೆ ಮುತ್ತಿಡುತ್ತದೆ. ಮಚ್ಚರದಾನಿ ಬಿಟ್ಟಿದ್ದರೆ ಚೆನ್ನಾಗಿತ್ತು. ಯಾರಾದರೂ ಬರುವರೇ? ಬರಬಾರದೇ? ಪ್ರಕಾಶರನ್ನು ಕಳಿಸಿದ ಅಜಯ ಬರುವನೇ? ನೀಲೂ ಅಡಿಗೆಮನೆಯಲ್ಲಿದ್ದಾಳೇನೋ? ಉಹುಂ. ಇಲ್ಲ ಬಚ್ಚಲಿನಲ್ಲಿ ಇರಬಹುದು. ಮಯೂರನಿಗೆ ಸ್ನಾನ ಮಾಡಿಸಿ

ತನ್ನ ಹತ್ತಿರ ತರುತ್ತಾಳೆ. ಎಡಗೈಯಿಂದ ಅವನ ತಲೆ, ಬೆನ್ನು ಸವರಿ ಮುದ್ದಿಡುತ್ತೇನೆ. ಅವನ ಮೈ ಸುವಾಸನೆ ಮೂಗನ್ನು ತುಂಬುತ್ತದೆ ಹತ್ತಿರ ಎಳೆದು ಅಪ್ಪಿಕೊಳ್ಳುವ ಪ್ರಯತ್ನ ಮಾಡುತ್ತೇನೆ. ಅವನೋ ಚೈತನ್ಯದ ಬುಗ್ಗೆ. ಅವನು ಹತ್ತಿರವಿದ್ದಷ್ಟು ಹೊತ್ತು ಆ ಚೈತನ್ಯ ತನ್ನಲ್ಲಿ ಹರಿದು ಬರುತ್ತಿರುವಂತೆ ಲವಲವಿಕೆ. ಆದರೆ ಆ ಸುಖ ಐದು ನಿಮಿಷದ್ದು ಮಾತ್ರ. ತಾಯಿಯೊಡನೆ ಅವನು ಹೊರಗೆ ಹೋದನೆಂದರೆ ಆಯಿತು. ಮಯೂರದಂತೆಯೆ ನರ್ತಿಸುತ್ತಿದ್ದ ತನ್ನ ಮನದ ಚೈತನ್ಯವೆಲ್ಲ ಸೋರಿ ಹೋಗಿ ಗಾಢವಾದ ಶೂನ್ಯ ತುಂಬಿಕೊಳ್ಳುತ್ತದೆ.

ಮತ್ತೆ ಹೆಜ್ಜೆ ಸಪ್ಪಳ, ಕಿವಿ ನಿಮಿರುತ್ತವೆ. ಆ ಸಪ್ಪಳಕ್ಕಾಗಿ ತನ್ನ ಕಿವಿಯಷ್ಟೇ ಅಲ್ಲ. ಹೃದಯವೂ ಸದಾಕಾಲ ಕಾಯುತ್ತಿರುತ್ತದೆ. ಬಾಗಿಲು ವರೆಗೆ ಬಂದ ಸಪ್ಪಳ ಅಲ್ಲಿಯೇ ನಿಲ್ಲುತ್ತದೆ. ಬಂದರೇ ? ಹತ್ತಿರ ಬರಬಾರದೇ ? ಬಂದು ತನ್ನ ಹತ್ತಿರ ಕುಳಿತು ಮೈದಡವಿ, ಮುಖದ ಮೇಲೆ ಕೈಯಾಡಿಸಿ, ಹಣೆಗೆ ಮುತ್ತಿಟ್ಟು ಮೊದಲಿನಂತೆ 'ಮಿನ್ನಿ ಹ್ಯಾಂಗ ಅದೀ ?, ಎಂದು ಕೇಳುವರೇ? ಉಹುಂ. ಇಲ್ಲ ಇನ್ನೂ ಬಂದಿಲ್ಲ. ಕಣ್ಣು ತೆರೆದು ನೋಡಲೇ? ಉಹುಂ ನನ್ನ ಮನದ ಆಸೆ ಕಣ್ಣುಗಳಲ್ಲಿ ಇಣುಕಿತು. ದೇವರಲ್ಲಿಯೇ ಏನನ್ನೂ ಕೇಳದ ನಾನು ಇಲ್ಲಿ ಬೊಗಸೆ ಒಡ್ಡಲೇ?ಕೇಳದೇ ಕೊಡುವದೇ ಅನನ್ಯ ಪ್ರೀತಿ ಅಲ್ಲವೇ ? ಅವರನ್ನು ನೋಡಿದೊಡನೆ ಕಣ್ಣೀರು ತುಂಬಿ ಇಳಿದು, ತನ್ನ ದೌರ್ಬಲ್ಯ ಪ್ರದರ್ಶಿಸುವದು ಬೇಡ, ಉಹುಂ ಏನಿದು ? ಹೆಜ್ಜೆ ಸಪ್ಪಳ ಕ್ಷೀಣವಾಗುತ್ತ ಹೋಯಿತಲ್ಲ ? ಹೊರಟೇ ಹೋದರೇ ? ಕಣ್ಣು ಪಸಿಯಾದವೇ ? ಇಲ್ಲ ಇತ್ತಿತ್ತಲಾಗಿ ಅವೂ ಬತ್ತಿ ಹೋಗಿವೆ.

ಒಳಗೆ ಬಂದ ಅಜಯ 'ಅವ್ವಾ ಈ ಗುಳಿಗೀ ನುಂಗಿ ಹಾಲು ಕುಡಿ' ಗುಳಿಗೆ ಅಂಗೈಯಲ್ಲಿಟ್ಟು ನೀರಿನ ವಾಟಿ ಕೊಟ್ಟು ಹಾಲು ತರಲು ಒಳಗೆ ಹೋದ. ಮೀನಾಕ್ಷಿ ಗುಳಿಗೆಯನ್ನು ದಿಟ್ಟಿಸಿ ನೋಡಿ ಮಂಚದ ಕೆಳಗಿದ್ದ ಕಸದ ಬುಟ್ಟಿಗೆ ಶಬ್ದವಾಗದಂತೆ ಬಿಸಾಕಿ ನೀರು ಕುಡಿದಳು. ಅಜಯ ತಂದ ಹಾಲು ಎರಡು ಗುಟುಕು ಕುಡಿದು "ಹಾಲು ಟೀಪಾಯ್ ಮ್ಯಾಲೆ ಇಡು ನನಗ ಬೇಕಾದಾಗ ತೊಗೋತೀನಿ" ಎಂದು ಮುಸುಕು ಎಳೆದಳು. ಅವ್ವ ಹೇಳದೆಯೆ

ಮಚ್ಚರದಾನಿ ಹಾಕಿ ಬಾಗಿಲು ಮುಚ್ಚಿಕೊಂಡು ಹೊರಗೆ ಹೋದ ಅಜಯ. ಮೀನಾಕ್ಷಿ ಮುಚ್ಚಿದ ಕಣ್ಣುಗಳ ಹಿಂದಿನ ಚಿತ್ರ ನೋಡತೊಡಗಿದಳು.

ಎದೆಗೆ ಒರಗಿಸಿಕೊಂಡು ಭಾವಪರವಶನಾಗಿ, ಆವೇಶದಿಂದ ಮತ್ತೆ ಮತ್ತೆ ತನ್ನ ಕಣ್ಣುಗಳನ್ನು ಮುದ್ದಿಸುತ್ತಿದ್ದ ಸದಾನಂದನ ಅಪ್ಪುಗೆಯಲ್ಲಿ ಕರಗಿ ಕಾಲದ ಪರಿವೆ ಇಲ್ಲದೆ ಮೈಮರೆಯುತ್ತಿದ್ದ ಆ ದಿನಗಳು ಎಷ್ಟು ಬೇಗಕ ಳಿದು ಹೋದವು.

"ಅಬ್ಬಾ ! ಎಂಥಾ ಕಣ್ಣು ಮಿನ್ನಿ. ಇಲ್ಲೆ ನೋಡಿದರ ನಕ್ಷತ್ರಲೋಕದ ಸಾಕ್ಷಾತ್ಕಾರ ಆಗ್ತದ. ನನ್ನ ಕುಂಚದಿಂದ ಒಂದಿಲ್ಲಾ ಒಂದು ದಿನಾ ಇವುಗಳ ಚಿತ್ರಾ ಬಿಡಿಸೇ ತೀರ್ತೀನಿ." ಗಂಡನ ಆ ಹೊಗಳಿಕೆಗೆ ಸುಸ್ತಾಗಿ ತಾನು ಕಣ್ಣು ಮುಚ್ಚಿರುತ್ತಿದ್ದಳು.

"ಈ ರವಿವಾರ ನಿನ್ನ ಚಿತ್ರಾ ತಗೀತೀನಿ ಮಿನ್ನಿ." ಮೈಯೆಲ್ಲ ಕಚಗುಳಿ. ಆಸೆಯಿಂದ ಮನೆಗೆಲಸ ಮುಗಿಸಿ ಹೊರಬರುವಷ್ಟರಲ್ಲಿ ಸದಾನಂದ ಡ್ರೆಸ್ ಮಾಡಿಕೊಂಡಿದ್ದ. "ವೆಂಕಟೇಶ್ ಬಂದಾರ. ಪ್ರೋಗ್ರಾಂ ಫಿಕ್ಸ್ ಮಾಡಲಿಕ್ಕೆ ಹುಬ್ಬಳ್ಳಿಗೆ ಹೋಗಬೇಕಾಗೇದ. ಸಾರಿ ಚಿತ್ರಾ ಮುಂದಿನ ವಾರ ತಗೀತೀನಿ."

ಮುಂದಿನ ವಾರ ಸಂಗೀತ ಶ್ರವಣ ಆಕಾಶವಾಣಿ ಕಾರ್ಯಕ್ರಮ. ಅಂಗವಿಕಲರಿಗಾಗಿ ಮನರಂಜನಾ ಕಾರ್ಯಕ್ರಮ, ಗೆಳೆಯರೊಡನೆ ಪಿಕ್‌ನಿಕ್, ಆಫೀಸ್ ಟೂರು, ಸಾಹಿತಿಗಳ ಸಂದರ್ಶನ, ಗೆಳೆಯನ ತಂದೆಯ ಸಾವು, ಅತ್ತೆಯವರ ಅನಾರೋಗ್ಯ....ತಿಂಗಳು, ವರ್ಷಗಳು ಉರುಳಿದವು. ಸದಾನಂದನಿಗೆ ವೇಳೆ ಸಿಗಲೇ ಇಲ್ಲ. ಕುಂಚ ಅನಾಥವಾಗಿ ಮೂಲೆ ಸೇರಿತು. ಮೂವತ್ತು ವರ್ಷಗಳಲ್ಲಿ ಒಂದೇ ಒಂದು ದಿನವೂ ತಾನು ಮತ್ತೆ ಆ ಬಗ್ಗೆ ಚಕಾರವೆತ್ತಲಿಲ್ಲ. ಮನದ ಆಸೆ ಒಳಗೆ ಸುಟ್ಟು ಬೂದಿ ಮಾತ್ರ ತಳದಲ್ಲಿ ಉಳಿಯಿತು. ಮಕ್ಕಳಿಗೆ ಮದುವೆಯಾಯಿತು. ಹೊಸ ಪೀಳಿಗೆ ಹುಟ್ಟಿತು. ಯಾರಲ್ಲಿಯೂ ತನ್ನ ಕಣ್ಣು ಮೂಡಿಬರಲಿಲ್ಲ. ಕನ್ನಡಿಯಲ್ಲಿ ನೋಡಬೇಕೆಂದರೆ ಕನ್ನಡಕ ಅಡ್ಡಿಯಾಯಿತು. ಅರೇ ! ವಾಹ್ ! ಎಷ್ಟು ಛಂದ ಕಣ್ಣು ! ಕಳೆದ ದಿನಗಳ ನೆನಪೆಂದರೆ ಒಣ ತುಟಿಗಳಿಗೆ ಜೇನು ಸವರಿದಂತೆ. ಅದನ್ನು ಸವಿಯುತ್ತಿರುವದೇ ತನಗೀಗ ಆಧಾರ. ಎಡಗೈ ಎತ್ತಿ ಎರಡೂ ಕಣ್ಣು ಸವರಿಕೊಂಡಳು. ತನ್ನ ದೇಹದೊಡನೆ ಇವೂ ಮಣ್ಣಾಗಿ ನಾಶವಾಗಬೇಕೇ ?

ಇವು ಸಾರ್ಥಕವಾಗಲಾರವೇ ? ಹಂ, ಹೌದು. ಇವುಗಳ ಅಳಿವು ಉಳಿವು ತನ್ನ ಕೈಯಲ್ಲಿಯೇ ಇದೆಯಲ್ಲ. ಇಂಥ ಕಣ್ಣಿನ ನಾಶಕ್ಕೆ ತಾನು ಅವಕಾಶವೀಯ ಬಾರದು.

ಆ ಸಂಜೆ ಮೀನಾಕ್ಷಿ ಅಜಯನೊಡನೆ ಮಾತನಾಡಿದಳು. ತಾಯಿಯ ಬಯಕೆ ಕೇಳಿ ಮಗನ ಕಣ್ಣು ತುಂಬಿದವು ಆದರೂ ಅವಳ ಪಟಕ್ಕೆ ಮಣಿಯಲೇ ಬೇಕಾಯಿತು. ಅದು ಕೊನೆಯ ಆಸೆ ಎಂದಾಗ ಅಜಯ ಅಸಹಾಯನಾದ.

ತನಗೀಗ ಐವತ್ತೆಂಟು ವರುಷ ತುಂಬಿದ್ದರೂ ಬದುಕಿನ ಹರವು ವಿಸ್ತಾರ ವಾಗುತ್ತಿದ್ದಂತೆ ಭಾಸ. ಹಿಂದಕ್ಕೆ ತಿರುಗಿ ನೋಡಲು ಮುಂದಿನ ಬಗ್ಗೆ ಚಿಂತಿಸಲು ಸಮಯವಿಲ್ಲದಂತೆ ಓಡುತ್ತಿದ್ದ ತಾನು ಒಮ್ಮೆಲೆ ಗಕ್ಕನೆ ನಿಂತುಬಿಟ್ಟಿದ್ದ. ಸಮ್ಮೇಳನದ ಕೊನೆಯ ದಿನ. ಇನ್ನೂ ಪ್ರೇಕ್ಷಣೀಯ ಸ್ಥಳ ನೋಡುವ ಕಾರ್ಯಕ್ರಮವಿದ್ದಾಗ ಅಜಯನ ತಾರು ಬಂದಿತ್ತು. ಧಾವಿಸಿ ಹೋದೆ. ಬೆಚ್ಚಿ ಬಿದ್ದೆ. ಮೀನಾಕ್ಷಿಯ ಮೈ ತುಂಬ ನಳಿಗೆ, ಮಾತಿಲ್ಲ. ಕಣ್ಣು ತೆರೆದಿಲ್ಲ. ಉಸಿರಾಡುವ ಹೆಣ. ತಲೆ ತಿರುಗಿ ಕಣ್ಣುಕತ್ತಲೆ ಬಂದಿತು. ನಿಲ್ಲಲು ಸಾಧ್ಯ ವಾಗದೆ ಹೊರಗೆ ಬಂದು ಕುಕ್ಕರಿಸಿದೆ. ನನ್ನ ಮಿನ್ನಿ ಕೈಬಿಟ್ಟಳೇ ? ಊಹುಂ ಇಲ್ಲ ರಿಕವರ್ ಆಗುತ್ತಾರೆನ್ನುವ ಆಶ್ವಾಸನೆ ಕೊಟ್ಟಿದ್ದಾರೆ ಡಾಕ್ಟರ್.

ಅವಳಿಗೆ ಎಚ್ಚರ ಬಂದೊಡನೆ ಅಜಯ ಬಂದು ನನ್ನನ್ನು ಕರೆದ. ನನ್ನ ಎದೆ ಹೊಡೆದುಕೊಳ್ಳುತ್ತಿತ್ತು. ಕಾಲು ನಡುಗುತ್ತಿದ್ದವು. ಹೇಗೋ ಹತ್ತಿರ ಹೋಗಿ ಕುಳಿತೆ. ಬಲಭಾಗ ನಿರ್ಜೀವವಾಗಿತ್ತು. ನನ್ನ ಜೀವನರಥ ಒಗ್ಗಾಲಿ ಯಾಗಿತ್ತು. ಅದು ಮತ್ತೆ ಮೊದಲಿನಂತೆ ಓಡಬಲ್ಲುದೇ ? ಉಹುಂ. ಸಾಧ್ಯ ವಿಲ್ಲವೆನಿಸಿತು. ಅದೇ ನನ್ನ ಮನಸ್ಸಿನಲ್ಲಿ ಗಟ್ಟಿಯಾಗಿ ಬೇರೂರಿ ಬಿಟ್ಟಿತು. ಅವಳ ಎಡಗೈ ಹಿಡಿದುಕೊಂಡು "ನೀ ಆರಾಮ ಆಗ್ತೀಯಂತ ಡಾಕ್ಟರ ಹೇಳ್ಯಾರ." ನನಗೇ ಭರವಸೆ ಇಲ್ಲದ ಮಾತನ್ನು ಅವಳಿಗೆ ಹೇಳಿದೆ. ನನ್ನ ಮಾತನಲ್ಲಿಯ ಪೊಳ್ಳು ಅವಳಿಗೆ ಕುಡಿರಬೇಕು. ಅಳತೊಡಗಿದಳು. ಭಾವೋ ದ್ವೇಗಕ್ಕೆ ಒಳಗಾಗಬಾರದೆಂದು ಡಾಕ್ಟರ್ ಹೇಳಿದ್ದರು. ನಾನು ಹೆಚ್ಚು ಮಾತ ನಾಡದೆ ಅವಳ ಕಣ್ಣೀರು ಒರೆಸಿ ಹೊರಗೆ ಬಂದೆ.

ನೀಲೂ ಬಹಳ ಒಳ್ಳೆಯ ಹುಡುಗಿ ಅತ್ತೆಯನ್ನು ಚೆನ್ನಾಗಿ ನೋಡಿ

ಕೊಳ್ತಾಳೆ. ಸಿದ್ದವ್ವ ಅವಳಿಗೆ ಸಹಾಯ ಮಾಡ್ತಾಳೆ. ಅಜಯನಿಗೆ ಅವ್ವ ಎಂದರೆ ಪ್ರಾಣ. ಮೀನಾಕ್ಷಿಯಾದರೂ ಅಷ್ಟೇ. ತನ್ನ ಪ್ರೀತಿಯನ್ನು ಎಲ್ಲರಿಗೂ ಧಾರಾಳವಾಗಿ ಹಂಚಿದ್ದಳು. ಮನೆಯಲ್ಲಿ ಎಲ್ಲರ ಮೇಲೂ ಅವಳ ಪ್ರೀತಿಯ ಅಧಿಕಾರದ ಮುದ್ರೆ. ಅವಳ ಉಪಚಾರ, ಉಪದೇಶ, ಆಜ್ಞೆ, ಆದರ್ಶ ಎಲ್ಲದಕ್ಕೂ ಎಲ್ಲರೂ ಒಪ್ಪಬೇಕು. ಅದು ಉಳಿದವರಿಗೆ ಪ್ರಿಯವಾದದ್ದು ಕೂಡ. ಅವಳ ಇಂಥ ಪ್ರೀತಿಯ ಆಧಾರದ ಮೇಲೆ ನಾನು ಇಷ್ಟು ದಿನ ಸುಖ ವಾಗಿ ಜೀವನ ನಡೆಸಿದ್ದೆನಲ್ಲ. ನನ್ನ ಆಧಾರಸ್ತಂಭ ಕಡಿದು ಬಿದ್ದಾಗಿನಿಂದ ನನ್ನ ಜೀವ ಜೋಲಿ ಹೊಡೆಯುತ್ತಿದೆ. ಕೋಣೆಯಲ್ಲಿ ಕಾಲಿಟ್ಟಾಗ ಅವಳೇ ಕಣ್ಣು ಮುಚ್ಚಿದ್ದರೆ ಮಾತ್ರ ಹತ್ತಿರ ಹೋಗುವುದು ನನ್ನಿಂದ ಸಾಧ್ಯವಾಗು ತ್ತಿತ್ತು ಇಲ್ಲವಾದರೆ ಆ ಸೋತ ಕಣ್ಣುಗಳಲ್ಲಿಯ ಶೂನ್ಯದೃಷ್ಟಿ ನನ್ನ ಹೃದಯಕ್ಕೆ ಚೂರಿ ಹಾಕುತ್ತಿತ್ತು. ಅಲ್ಲಿ ಒಂದು ನಿಮಿಷವೂ ನಿಲ್ಲುವ ಧೈರ್ಯ ಸಾಲದೆ ಚಡಪಡಿಸಿ ಯಾರನ್ನಾದರೂ ಕರೆಯುವ ನಟನೆ ಮಾಡುತ್ತ ಅಲ್ಲಿಂದ ಹೊರ ಬೀಳುತ್ತಿದ್ದೆ. ರಾತ್ರಿ ಎಲ್ಲ ನಿದ್ದೆ ಬಾರದೆ ಹೊರಳಾಡುತ್ತಿದ್ದೆ. ಕಣ್ಣು ಮುಚ್ಚಿದರೆ ನನ್ನ ಬೊಗಸೆಯಲ್ಲಾಡುತ್ತಿದ್ದ ಆ ಸುಂದರ ಕಣ್ಣುಗಳದೇ ಚಿತ್ರ– ಮಿನ್ನಿ ತಿರುಗಿ ಮೊದಲಿನಂತೆ ಆಗುವಳೇ ? ಉಹುಂ. ಇಲ್ಲ ಇಲ್ಲ ಎಂದು ಬಾಯಿ ಓರೆಯಾಗಿ ವಿಕಾರವಾದ ಆ ಮುಖ ಕಣ್ಣು ಮುಂದೆ ಬಂದು ನನ್ನ ಒಳಗಿನ ದನಿಯೊಂದು ಚೀರುತ್ತಿತ್ತು. ಈ ರೀತಿ ಬದುಕುವದಕ್ಕಿಂತ ಸಾವೇ ಮೇಲಲ್ಲವೆ ? ನನ್ನ ಒಳದನಿಗೆ ಬೆಚ್ಚಿ ಗಟ್ಟಿಯಾಗಿ ಎದೆಯನ್ನು ಮುಚ್ಚಿ ಕೊಳ್ಳುತ್ತಿದ್ದೆ. ನನಗಾಗುವ ಸಂಕಟವನ್ನು ಯಾರ ಮುಂದೆ ಹೇಳಲಿ? ಮೊನ್ನಿನ ವರೆಗೂ ಅದನ್ನೆಲ್ಲ ಕೇಳಿ ಸಾಂತ್ವನ ನೀಡುತ್ತಿದ್ದವಳೇ ಮೀನಾಕ್ಷಿ.

ತಿಂಗಳುಗಳು ಕಳೆಯುತ್ತ ನಿಧಾನವಾಗಿ ಮೀನಾಕ್ಷಿ ಚೇತರಿಸಿಕೊಂಡಿ ದ್ದಳು. ಬಾಯಿ ಓರೆಯಾಗಿದ್ದರೂ ತೊದಲು ಮಾತು ಬಂದಿತ್ತು. ಹಾಸಿಗೆ ಬಿಟ್ಟು ಏಳಲು ಮಾತ್ರ ಸಾಧ್ಯವಾಗಿರಲಿಲ್ಲ. ಅವಳ ಯಾತನೆ ನೋಡಲು ಹಿಂಜರಿದು ಕೋಣೆಗೆ ಹೋಗುವುದನ್ನೇ ಕಡಿಮೆ ಮಾಡಿದ್ದೆ. ಬಾಣ ಚುಚ್ಚಿಸಿ ಕೊಂಡ ಜಿಂಕೆಯಂತೆ ವೇದನೆಪಡುತ್ತ ಅವಳು ಹೊರಳಾಡುತ್ತಿದ್ದಳು ಇಲ್ಲವೇ ನಿಷ್ಕ್ರಿಯಳಾಗಿ ಮಲಗಿರುತ್ತಿದ್ದಳು. ಛೆ....ಛೇ....ದೇವರು ದಯಾಮಯ

ನಾಗಿದ್ದರೆ ಇಂಥ ನೋವಿನಿಂದ ಇವಳನ್ನು ಮುಕ್ತಗೊಳಿಸಬಾರದೇ ?–ಕೊನೆಗೂ ಆ ದಿನ ಬಂದಿತ್ತು.

ತೆರೆದ ಕಣ್ಣುಗಳು ಹಾಗೆಯೇ ಇದ್ದವು. ಮೀನಾಕ್ಷಿ ಹೋಗಿಬಿಟ್ಟಿದ್ದಳು. ಅಜಯ ಅಳುತ್ತಲೇ ಎದ್ದು ಹೋಗಿ ಯಾರಿಗೋ ಫೋನ್ ಮಾಡಿ ಬಂದ. ಡಾಕ್ಟರ್ ಬಂದರು. "ಅಪ್ಪಾ ನೀವು ಅಲ್ಲಿಂದ ಸರೀರಿ" ಅಜಯನ ದನಿ ನಡಗುತ್ತಿತ್ತು. ಡಾಕ್ಟರ್ ಪೆಟ್ಟಿಗೆ ತೆಗೆದು ತಮ್ಮ ಕೆಲಸ ಸುರು ಮಾಡಿದರು. ನಾನು ಗಟ್ಟಿಯಾಗಿ ಚೀರಿದೆ. "ಏನಿದು ?" "ಹೌದು ಅಪ್ಪಾ ಅವ್ವ ಸಾಯೂಕಿಂತ ಮೊದಲು ತನ್ನ ಕಣ್ಣು ದಾನಾ ಮಾಡ್ಯಾಳ. ಈ ಫಾರ್ಮ ನೋಡ್ರಿ ಡಾಕ್ಟರ ಕೆಲಸಕ್ಕೆ ಅಡ್ಡೀ ಮಾಡಬ್ಯಾಡ್ರಿ ಲಗೂನ ಕೆಲಸಾ ಮುಗಸ್ಲಿ. ಇಲ್ಲಾಂದರ ಅವ್ವನ ಕೊನೇ ಆಸೆ ಈಡೇರಿಸಲಿಕ್ಕೆ ಸಾಧ್ಯ ಆಗೂದಿಲ್ಲ." ಮೂಕನಾಗಿ ನಾನು ಎದ್ದು ಬಂದಿದ್ದೆ. ತನಗೆ ತಿಳಿಸದೆ ಮೀನಾಕ್ಷಿ ಕಣ್ಣು ಕೊಟ್ಟಳೇ ? ಅವ್ವ ಮಗ ಒಂದಾದರು. ಸಾಯುವ ಹೊತ್ತಿನಲ್ಲಿ ನಾನು ಪರಕೀಯನಾಗಿಬಿಟ್ಟೆ. ದೈಹಿಕವಾಗಿ, ಮಾನಸಿಕವಾಗಿ ಅವಳು ನನ್ನಿಂದ ದೂರವಾಗುತ್ತಲೇ ಇದ್ದಳು. ಅವಳ ಸಾವನ್ನು ಬಯಸಿದ ನಾನೇ ಅಪರಾಧಿಯಾಗಿದ್ದೆ. ನನ್ನ ಅಂತರಂಗವನ್ನೆಲ್ಲ ಅವಳು ಚೆನ್ನಾಗಿ ಅರ್ಥಮಾಡಿಕೊಂಡಿರುವುದು ಸಾಧ್ಯ. ಅವಳ ಸಾವಿನ ಅಪೇಕ್ಷೆ ನನ್ನ ಕಣ್ಣುಗಳಲ್ಲಿ ಮೂಡಿ ಅವಳ ಹೃದಯಕ್ಕೆ ತಟ್ಟಿತೇ ? ಅಜಯ ಹೇಳಿದ ಇನ್ನೊಂದು ಮಾತು ನನ್ನ ಸಾವಿನವರೆಗೂ ನನ್ನನ್ನು ಹಿಂಬಾಲಿಸುತ್ತದೆ. ಕೊನೆಯ ಒಂದೆರಡು ತಿಂಗಳು ಅವಳು ಔಷಧಿ ಸೇವಿಸಿಲ್ಲ. ಸಾವನ್ನೆ ಬಯಸುತ್ತಿದ್ದಳು. ಕಾರಣ ಬದುಕಿನಲ್ಲಿ ಆಸಕ್ತಿ ಇರಲಿಲ್ಲ. ಅವಳನ್ನು ಜೀವನಕ್ಕೆ ಕಟ್ಟಿ ಹಾಕುವ ಸೂತ್ರ ನನ್ನ ಕೈಯಲ್ಲಿತ್ತು. ಆದರೆ ನನ್ನ ಮನೋದೌರ್ಬಲ್ಯದಿಂದಾಗಿ ನಾನೇ ಅದನ್ನು ಕತ್ತರಿಸಿದ್ದೆ. ನನ್ನ ಮನದ ನೋವನ್ನು ಅವಳಿಗೆ ತಿಳಿಯುವಂತೆ ಹೇಳಲು ನನ್ನಲ್ಲಿ ಶಬ್ದಗಳಿರಲಿಲ್ಲ. ಇಲ್ಲಿ ನಾನು ಸೋತೆ. ಒಂದು ದೃಷ್ಟಿಯಲ್ಲಿ ಕೊಲೆಪಾತಕಿಯಾದೆ. ಈ ಮನದ ಭಾರವನ್ನು ಹೊತ್ತು ಜೀವನ ಕಳೆಯುವುದರಲ್ಲಿ ನಾನು ಹಂಚ್‌ಬ್ಯಾಕ್ ಆಗಿಬಿಡುತ್ತೇನೇನೋ. ನನ್ನ ಸಾವು ಯಾವಾಗ ? ಹೇಗೆ ? ಯಾರು ಬಲ್ಲರು ?

ಸದಾನಂದ ಕುಂಚವನ್ನು ಕೈಗೆತ್ತಿಕೊಂಡು ತನ್ನ ಭಾರವನ್ನು ಕಡಿಮೆ ಮಾಡಿಕೊಳ್ಳತೊಡಗಿದ.

ನಂಬಿಕೆ

ದೀಪಾಳ ಕಣ್ಣು ಪುಸ್ತಕದ ಮೇಲಿದ್ದರೂ, ಲಕ್ಷ್ಯವೆಲ್ಲ ಗೇಟಿನ ಸಪ್ಪಳದ ಕಡೆಗೇ ಇತ್ತು. ಓದಲು ಕುಳಿತ ಹೊತ್ತಿನಲ್ಲಿ ಇಪ್ಪತ್ತು ಸಲ ಗಡಿಯಾರ ನೋಡಿಕೊಂಡಿದ್ದಳು. ಇನ್ನೂ ಹನ್ನೊಂದು ಮುಕ್ಕಾಲು. ಹಾಲಿನ ಪಾರವ್ವ ಬರುವ ಹೊತ್ತು ಒಂದರ್ಧ ಗಂಟೆ ಹೆಚ್ಚು ಕಡಿಮೆಯಾಗುವದೂ ಉಂಟು-ಒಂದು ತಾಸು ಕಳೆದಿದ್ದರೂ ಹತ್ತು ಪುಟ ಓದಲಾಗಿರಲಿಲ್ಲ. ವಿಷಯವನ್ನು ಮಿದುಳು ಗ್ರಹಿಸುತ್ತಲೇ ಇಲ್ಲ. ಓದಿದ್ದನ್ನೇ ಮತ್ತೆ ಮತ್ತೆ ಓದುತ್ತಿದ್ದಾಳೆ. ಹೀಗಾದರೆ ಪರೀಕ್ಷೆ ಪಾಸಾದಂತೆಯೇ, ಇಡೀ ವರ್ಷದ ಓದನ್ನು ಎರಡು ತಿಂಗಳಲ್ಲಿಯೇ ಮುಗಿಸಬೇಕಲ್ಲ. ತನ್ನ ಬುದ್ಧಿಯ ಮೇಲೆ ಭರವಸೆ ಇಟ್ಟು ಕ್ಲಾಸು ತಪ್ಪಿಸಿ ಅತ್ತಿತ್ತ ತಿರುಗಿದ್ದಕ್ಕೆ ಈಗ ಗಾಬರಿ ತುಂಬಿಕೊಂಡಿದೆ. ಪರೀಕ್ಷೆ ಪಾಸಾಗದಿದ್ದರೆ ಅವ್ವ ಸುಮ್ಮನಿರುವುದಿಲ್ಲ. ಕಾಲೇಜು ಬಿಡಿಸಿ ಮನೆ ಕೆಲಸಕ್ಕೆ ಹಚ್ಚುತ್ತಾಳೆ. ಬೇಗ ವರ ಹುಡುಕಲು ಅಪ್ಪನಿಗೆ ಬೆನ್ನು ಹತ್ತುತ್ತಾಳೆ. ಇಷ್ಟು ಬೇಗ ವರ ಸಿಗುವದೇನು ಖಾತ್ರಿಯಿಲ್ಲ. ಅಲ್ಲದೆ ಸಪ್ಲಿಮೆಂಟರಿ ಪರೀಕ್ಷೆಗೆ ಕೂತು ಪಾಸಾಗಬಹುದು. ಆದರೆ ಕಾಲೇಜಿಗೆ ಹೋಗುವಂತಿಲ್ಲವಲ್ಲ. ವಿಶ್ವಾಸನ ಭೆಟ್ಟಿ ಎಲ್ಲಿ ? ಹೇಗೆ ?

ಗೇಟು ಕಿರ್ರೆಂದಿತು. ತವಕದಿಂದ ಕಿಟಕಿಯತ್ತ ಓಡಿದಳು. ಉಹುಂ ಇಂದು ಪಾರವ್ವ ಬಂದಿಲ್ಲ. ಅವಳ ಮಗಳು ನಾಗೂ ಬಂದಿದ್ದಾಳೆ. ಓಹ್ ! ಅಪಾಯದ ಒಂದು ದಿನ ದಾಟಿತು. ನಿಶ್ಚಿಂತಗೊಂಡ ಮನಸ್ಸು ಯಾಂತ್ರಿಕವಾಗಿ ಪುಸ್ತಕ ತೆರೆಯಿತು. ಛೀ, ಇದೇನಿದು ಪುಟ ತಿರುವಿದರೂ ಅಕ್ಷರಗಳೇ ಕಾಣಿಸುತ್ತಿಲ್ಲ. ಚಿಗುರು–ಮೀಸೆಯ ಕೆಳಗಿನ ತುಟಿ

ಗಳೆರಡು ನಗುತ್ತಿವೆ ಕಣ್ಣು ಮುಂದೆ. ಸಾಲುಗಳ ಮಧ್ಯದಲ್ಲಿ ತನ್ನನ್ನು ಮುದ್ದಿಸಿ ಮೈ ಮರೆಸುವ ತುಂಟ ತುಟಿಗಳು ಮೃದುವಾಗಿ ಬೆರಳಾಡಿಸಿದಳು. ತನಗೆ ಸಿಗರೇಟಿನ ವಾಸನೆ ಆಗುವದಿಲ್ಲವೆಂದು ತಿಳಿದಾಗಿನಿಂದ ಆ ತುಟಿಗಳ ಮಧ್ಯ ಸಿಗರೇಟ ಕಂಡಿರಲಿಲ್ಲ.

"ಅಕ್ಕಾ, ಏನ ಮಾಡತಿದ್ದೀ. ಕುರಡರು ಬ್ರೇಲ್ ಲಿಪಿ ಓದಿದಾಂಗ ಪುಸ್ತಕದ ಮ್ಯಾಲೆ ಬೆರಳ ಆಡಸಲಿಕ್ಕೆ ಹತ್ತೀದಿ. ಯಾಕ ಕಣ್ಣು ಕಾಣೂದಿಲ್ಲೇನು" ರೂಪಾನ ನಗುವಿಗೆ ಬೆಚ್ಚಿದಳು. "ಯಾವದೋ ಲೋಕದಾಗ ಇದ್ದ್ಹಾಂಗ ಹಾಂಗ ಯಾಕ ಮೆಟ್ಟಿ ಬೀಳತಿ. ಯಾಕ ವಿಶ್ವಾಸನ ನೆನಪ ಆಗೇದೇನು ? ಸಾಕ ಸಾಕು. ಮೊದಲು ಅಭ್ಯಾಸ ಮಾಡು. ಪರೀಕ್ಷೆ ಮುಗೀಲಿ, ರಿಜಲ್ಟ ಆಗಲಿ ಪಾಸಾಗಿ ಇಬ್ಬರೂ ನೌಕರೀ ಹಿಡೀರಿ. ಆಮ್ಯಾಲೆ ಪ್ರೀತಿ-ಪ್ರೇಮ ಎಲ್ಲಾ. ಮೊದಲ ಕನಸ ಕಾಣೂದು ಬಿಟ್ಟು ಈ ಜಗತ್ತಿಗೆ ಇಳದ ಬಾ. ಪರೀಕ್ಷೆ ಸಮೀಪ ಬಂದದ, ನೆನಪಿಡು." ತಂಗಿಯ ಮಾತು ಮುಗಿಯುವ ಮೊದಲೇ ಎದ್ದು ಸಲಿಗೆಯಿಂದ ಅವಳ ಕಿವಿ ಹಿಂಡಿ "ಏ ರೂಪೀ, ಸಾವಕಾಶ ಮಾತಾಡು, ಅವ್ವಗ ಕೇಳಿಸೀತು. ಆಮ್ಯಾಲೆ ಅಪ್ಪಗ ಗೊತ್ತಾದರ ಮುಗೀತು ನನ್ನ ಕಥೀ. ಕಾಲೇಜು, ಡಿಗ್ರಿ ಎಲ್ಲಾ ಬಿಟ್ಟು ಮನ್ಯಾಗ ಬಿದ್ದಿರು ಅಂತಾರ."

"ನನಗ ಅಷ್ಟೂ ಗೊತ್ತಾಗೂದಿಲ್ಲೇನ ಅಕ್ಕಾ, ನಿನ್ನ ಗುಟ್ಟು ನಾ ಅವ್ವಗ ಬಿಟ್ಟು ಕೊಟ್ಟೇನೇನು? ಅವ್ವ ನಾಗೂನ ಕರಕೊಂಡು ಹಿತ್ತಲದಾಗ ಹೋಗ್ಯಾಳ. ಹುಲ್ಲು ಕೆತ್ಯಾಕ ಹಚ್ಚಿರಬೇಕು. ಆಯ್ತು. ನಾ ಹೇಳಿದ್ದು ನೆನಪಿಡು. ಮನಸ್ಸ ಕೊಟ್ಟು ಅಭ್ಯಾಸ ಮಾಡು. ಪರೀಕ್ಷಾ ಆಗೂತನಕಾ ವಿಶ್ವಾಸನ ಭೆಟ್ಟಿ ಆಗಲಿಕ್ಕೆ ಹೋಗಬ್ಯಾಡಾ" ಎನ್ನುತ್ತ ಹೊರಗೆ ನಡೆದಳು.

ರೂಪಾ ತನಗಿಂತ ಎರಡು ವರ್ಷ ಚಿಕ್ಕವಳಾದರೂ ತುಂಬಾ ಬುದ್ಧಿವಂತೆ. ಅವಳೂ ಕಾಲೇಜಿಗೆ ಬಂದ ಮೇಲೆ ವಿಶ್ವಾಸನ ಪರಿಚಯವಾಗಿತ್ತು. ಅಕ್ಕಾ, ವಿಶ್ವಾಸ ಬ್ಯಾರೆ ಜಾತಿಯಂವಾ, ನಿನಗಿಂತ ಒಂದು ವರ್ಷ ದೊಡ್ಡಾಂವಾ. ಅಪ್ಪ ಅವ್ವ ನಿಮ್ಮ ಮದುವೀಗಿ ಒಪ್ಪೂದಿಲ್ಲಾ, ಅವರು ಎಷ್ಟು ಸಂಪ್ರದಾಯಸ್ಥರು ಅದಾರ. ಸಮಾಜಕ್ಕ ಹೆದರಿ ನಡೀತಾರ ಅನ್ನೂದು ನಿನಗೂ ಗೊತ್ತದ. ವಿಶ್ವಾಸನ ಮನೀಯವರು ನಿನ್ನ ಸೊಸಿ ಅಂತ ಒಪ್ಪಿಕೊಳ್ಳತಾರ ಅನ್ನೊ ಖಾತ್ರಿ ಅದ ಏನು ನಿನಗ ? ಅವರೂ ಒಪ್ಪದಿದ್ದರ ನಿಮಗ ಆಶ್ರಯ

ಯಾರ ಕೊಡುವವರು, ಅದಕ್ಕ ನಿಮ್ಮ ಕಾಲ ಮ್ಯಾಲೆ ನೀವು ನಿಂತ ಮ್ಯಾಲೆ ಮದುವೀ ವಿಚಾರ ಮಾಡಬೇಕಾಗತದ. ಓದು ಮುಗಿಸಿ, ಡಿಗ್ರಿ ತೊಗೊಂಡು ನೌಕರಿ ಹಿಡಿಯುತನಾ ಮನಸ್ಸು ಗಟ್ಟಿ ಮಾಡಿಕೊಳ್ರಿ. ಮದುವಿ ಆದ ಮ್ಯಾಲೆ ಸುದ್ಧಾ ಸಮಾಜ ಎದುರಿಸಿ ನಿಲ್ಲುವಷ್ಟು ಧೈರ್ಯ ಅದ ಏನು ನಿನಗ? ನೀನು ಸೂಕ್ಷ್ಮ ಇದ್ದೀ, ಭಾವುಕಳೂ ಇದ್ದೀ. ಮಾತಿ ಗೊಮ್ಮೆ ಕಣ್ಣೀರು ಸುರಸತೀ. ಅದಕ್ಕ ಇನ್ನಾದರೂ ವಿಚಾರ ಮಾಡು. ಕೊನೆವರೆಗೆ ಇದನ್ನ ಸಾಧಿಸೋದು ನಿನ್ನಿಂದ ಆಗದಿದ್ದರ ಈಗ ವಿಶ್ವಾಸನಿಂದ ದೂರ ಉಗು. ಕಟುವಾಗಿದ್ದರೂ ಅವಳು ಸತ್ಯವನ್ನೇ ಹೇಳಿದ್ದಳು.

"ರೂಪಾ, ವಿಶ್ವಾಸನ ಮನೀಯೊಳಗ ಅವನ ಮಾತ ನಡೀತದಂತ. ಅಂವಾ ಬೇಡಿದ್ದು ಯಾವದೂ ಇಲ್ಲಾ ಅನ್ನೂದಿಲ್ಲಂತ. ಒಂದು ವ್ಯಾಳೆ ಅಪ್ಪ ಅವ್ವ ಬ್ಯಾಡಾ ಅಂದರ ನಾವು ಮನೀ ಬಿಟ್ಟು ಹೋಗಿ ಮದುವೀ ಮಾಡಿ ಕೊಳ್ಳೋಣು ಅಂತಾನ."

"ನೀವು ಗಟ್ಟಿಯಾಗಿದ್ದರ ಆಯ್ತು. ಆದರ ನೀನು ಎಂಥಾ ಪರಿಣಾಮಕ್ಕೂ ತಯಾರ ಇರಬೇಕು. ಪ್ರೀತಿ ಮಾಡೂದು ಅಂದರ ಅಷ್ಟು ಸರಳ ಅಲ್ಲಾ ನಾವು ಪ್ರೀತಿ ಮಾಡಿದವರನ್ನು ಅವರ ದುರ್ಗುಣ, ದೌರ್ಬಲ್ಯದ ಸಮೇತ ಒಪ್ಪಿಕೋಬೇಕಾಗತದ. ಹೊಸಾ ಬಿಸಿ ಇದ್ದಾಗ ಜೀವನ ಕಾಮನ ಬಿಲ್ಲಿನಾಂಗ ಛಂದ ಇರ್ತದ. ಆದರ ಮುಂದ ಕತ್ತಲು ಮಳಿ, ಗುಡುಗು, ಸಿಡಿಲು ಎಲ್ಲಾ ಸಹಿಸಿಕೋಬೇಕಾಗತದ. ಆಗ ನೀನು ಜೀವನ ಎದುರಿಸಲಾರದ ಹೇಡಿ ಆಗಬಾರದು ಅಂತ ಇಷ್ಟೆಲ್ಲಾ ಹೇಳಿದೆ. ಇದಕ್ಕೆಲ್ಲಾ ನೀ ತಯಾರ ಇದ್ದರ ನಿನಗ ನನ್ನ ಸಪೋರ್ಟ ಅದ. ತನ್ನ ಕೈಮೇಲೆ ಮೃದುವಾಗಿ ತಟ್ಟಿ ರೂಪಾ ಹೇಳಿದಾಗ ತನಗೆ ಆಧಾರ ಸಿಕ್ಕಂತಾಗಿ ವಿಶ್ವಾಸನೊಡನೆ ಮದುವೆ ಆಗಿಹೋಯಿ ತೇನೋ, ಎನ್ನುವಷ್ಟು ಹೃದಯ ಅರಳಿತ್ತು. ಆದರೆ ಈಗ....

ರೂಪಾ ಹೇಳುವಂತೆ ತಾನು ಬಹಳ ಮಿದುವು. ಮಾತಾಡುವಾಗ ಅಪ್ಪನ ದನಿ ಏರಿದರೆ, ಚಿಕ್ಕ ತಮ್ಮ ಕಾಡಿಸಿದರೆ ಕಣ್ಣೀರು ತುಂಬಿಕೊಳ್ಳುತ್ತವೆ. ಅಳು ಮುಂಜಿ ಎಂದೇ ತನಗೆ ಅಡ್ಡ ಹೆಸರು. ಶಾಲೆಯಲ್ಲಿದ್ದಾಗ ಹುಡುಗರನ್ನು ಕಂಡಾಗ ಭೂತ ಕಂಡವರಂತೆ ಅಷ್ಟು ದೂರ ಓಡುತ್ತಿದ್ದ ತಾನು ಕಾಲೇಜಿನಲ್ಲಿ ವಿಶ್ವಾಸನ ಸೆಳೆತಕ್ಕೆ ಸಿಕ್ಕಿದ್ದು ಅದ್ಭುತ ಕಥೆಯಾಗಿದೆ.

ಯಾವಾಗಲೂ ತನ್ನ ಜೊತೆಗೆ ಇರುತ್ತಿದ್ದ ಮುಕ್ತಾಗೆ ಆಟವೇದರೆ ವಿಪರೀತ ಹುಚ್ಚು, ಅದರಲ್ಲೂ ಫುಟ್‌ಬಾಲ್ ಅಂದರೆ ಪ್ರಾಣ, ಆಫ್ ಪೀರಿಯಡ್‌ನಲ್ಲಿ ಅಲ್ಲಿ ಇಲ್ಲಿ ಸುತ್ತಾಡದೆ ಆಟದ ಬಯಲು ಕಾಣೋ ಹಾಗೆ ಅಟ್ಟದ ಮೇಲೆ ನಿಂತುಕೊಳ್ಳೋದು ತಮ್ಮ ರೂಢಿ. ಅಲ್ಲಿ ಒಂದಿಲ್ಲೊಂದು ಆಟ ನಡೆದೇ ಇರ್ರಿತ್ತು. ಪ್ರ್ಯಾಕ್ಟೀಸು ಇಲ್ಲವೆ ಮ್ಯಾಚು. ಫುಟ್‌ಬಾಲ್ ಟೀಮಿನಲ್ಲಿದ್ದ ವಿಶ್ವಾಸ ನನಗೆ ಎದ್ದು ಕಂಡ. ಅವನ ವೇಗದ ಓಟ, ಎದುರಾಳಿಗಳನ್ನು ತಪ್ಪಿಸಿ ಚೆಂಡು ಪಾಸ್ ಮಾಡೋದು ಆಕಾಶಕ್ಕೇ ಹೋಯಿತೇನೋ ಅನ್ನೋ ಹಾಗೆ ಚೆಂಡು ಒದೆಯೋದು. ಎಲ್ಲಾ ಒಂದಕ್ಕಿಂತ ಒಂದು ಆಕರ್ಷಕ. ಅವನ ಆಟ ಇದ್ದಾಗಲೆಲ್ಲ ತಾನು ಕ್ಲಾಸು ತಪ್ಪಿಸಿಯಾದರೂ ಅಲ್ಲಿ ಹಾಜರು ಇರಲೇಬೇಕು. ತನ್ನ ಕಣ್ಣು ಅವನನ್ನು ಸೆಳೆಯುದೇ ಇರಲಿಲ್ಲ. ಪರಿಚಯ, ಹರಟೆ, ಆಟದ ಬಗ್ಗೆ ಮಾತು ಶುರುವಾಗಿ ತಿಳಿಯದೆ ಹತ್ತಿರವಾದೆವು. ಒಬ್ಬರನ್ನೊಬ್ಬರು ನೋಡದೇ ಇದ್ದ ದಿನಗಳೇ ಇರಲಿಲ್ಲ. ಆಕಸ್ಮಾತ್ ತಪ್ಪಿದಾಗ ಮನಸ್ಸಿನ ತುಂಬ ಶೂನ್ಯ. ಇಂಥ ಪರಿಸ್ಥಿತಿಯಲ್ಲಿ ವಿಶ್ವಾಸನನ್ನು ಭೆಟ್ಟಿಯಾಗ ಬೇಡ ಅಂತಾಳಲ್ಲ ಈ ರೂಪಾ, ಅವಳು ಹೇಳುವದೂ ತನ್ನ ಒಳ್ಳೆಯದಕ್ಕೇ. ಈಗಲೇ ತನ್ನ ಪ್ರೇಮ ಪ್ರಕರಣ ಮನೆಯಲ್ಲಿ ಗೊತ್ತಾದರೆ ತಮ್ಮ ಪ್ಲ್ಯಾನ್ ಎಲ್ಲಾ ಕೆಟ್ಟು ಹೋಗ್ತದೆ ಅನ್ನುವ ಚಿಂತೆ. ಇಷ್ಟೇ ಅಲ್ಲದೆ ನಾಲ್ಕಾರು ದಿನಗಳಿಂದ ಮತ್ತೊಂದು ಚಿತೆ ಸುರುವಾಗಿದೆ. ಅದನ್ನಿನ್ನೂ ರೂಪಾಗೆ ತಾನು ಹೇಳಿಲ್ಲ....

ಆ ದಿವಸ ವಿಶ್ವಾಸ, ನಾನು ದಿನಾಲು ಭೆಟ್ಟಿ ಆಗೋ ಜಾಗಾದಾಗ ಬ್ಯಾರೆ ಯಾರೋ ಕೂತಿದ್ದರು. ಅದಕ್ಕ ನಾವಿಬ್ಬರೂ ಹಾಂಗ ಮಾತಾಡಿಕೋತ ಕಾಲೇಜಿನ ಹಿಂದಿನ ಹಳ್ಳಿಗೆ ಹೋಗೂ ಕಾಲುದಾರಿಗುಂಟ ನಡೆದಿದ್ವಿ. ತಾಸುಗಟ್ಟಲೆ ಮಾತಾಡಿದರೂ ನಮ್ಮ ಮಾತು ಮುಗಿಯೋದೇ ಇಲ್ಲಾ. ದಾರಿ ಬದೀಗೆ ಹುಲ್ಲಿನ ಮ್ಯಾಲೆ ಬುಟ್ಟೀ ಹೊತಗೊಂಡು ಯಾರೋ ಬರತಿದ್ರು, ಹತ್ತರ ಬರೂತನಾ ಆಕೀ ನಮ್ಮ ಹಾಲಿನ ಪಾರವ್ವ ಅನ್ನೋದು ಲಕ್ಷ್ಯಕ್ಕ ಬರಲಿಲ್ಲಾ. ಅವಳು ನಮ್ಮನ್ನು ಹಾದು ಹೋಗುತನಾ ನಾ ಮಾರೀ ಮ್ಯಾಲೆ ಎತ್ತಲಿಲ್ಲಾ, ಮಾತಾಡಲಿಲ್ಲಾ. ಆದರ ಆಕೀ ನನ್ನ ನೋಡದ ಇರತಾಳೇನು. ನಾನು ಹುಟ್ಟೋಕ್ಕಿಂತ ಮೊದಲಿಂದ ಆಕಿ ನಮಗ ಹಾಲು ಕೊಡ್ತಾಳೆ. ಮನೀ

ಕೆಲಸದಾಗ ಸಹಾಯ ಆಗ್ತಾಳ. ತನ್ನ ಸುಖ ದುಃಖ ಅವ್ವನ ಕೂಡ ಹಂಚಿಕೋತಾಳ. ಎಮ್ಮೀ ಕೊಳ್ಳೊ ಮುಂದ ಅಪ್ಪನ ಕಡೆ ಸಾಲಾ ತೊಗೋತಾಳ. ಹಿಂಗ ಪಾರವ್ವ ನಮ್ಮಾಕೀನೆ ಆಗಿ ಬಿಟ್ಟಾಳ. ವಿಶ್ವಾಸನ ಜೋಡಿ ನನ್ನ ನೋಡಿ ಆಕೀಗೆ ಏನ ಅನಸಿತೋ ಏನೋ, ಅವ್ವನ ಮುಂದ ಆಕೀ ಹೇಳೇ ಹೇಳ್ತಾಳ. ಅವ್ವ ನನ್ನ ಕೇಳ್ತಾಳ. ಅಪ್ಪ ಸಿಟ್ಟಾಗಿ ದನಾ ಬಡದಂಗ ಬಡದು ಕೈಕಾಲು ಮುರದು ಮೂಲ್ಯಾಗ ಕೂಡ್ರಸ್ತಾರ....

ಕಣ್ಣೀರು ಟಪ ಟಪ ಪುಸ್ತಕದ ಮೇಲೆ ಬೀಳುತ್ತಿದ್ದವು. ದೀಪಾನ ಮನಸ್ಸು ಪಾರವ್ವನತ್ತ ಹೊರಳಿತು. ಪಾರವ್ವ ನಮ್ಮ ಮನೀಗೆ ಬಂದಾಗ ಅವ್ವನ ಜೊತೀಗೆ ಮಾತಾಡೇ ಮಾತಾಡ್ತಾಳ. ಈ ಹಳ್ಳಿ ಹೆಂಗಸರ ಹೊಟ್ಯಾಗ ಮಾತ ನಿಲ್ಲೂದಿಲ್ಲಾ. ಊರ ಸುದ್ದಿ ಎಲ್ಲಾ ಅವ್ವನ ಮುಂದ ಹೇಳೂವಾಕಿ ಇದನ್ನ ಬಿಟ್ಟಾಳೇನು. ಸೂಕ್ಷ್ಮ ಆಗಿ ಆದರೂ ಅವ್ವಗ ನನ್ನ ಬಗ್ಗೆ ಸೂಚನೆ ಕೊಡ್ತಾಳ. ಇದನ್ನೆಲ್ಲಾ ತಡೀಬೇಕು. ಆದರ ಹ್ಯಾಂಗ....? ಪಾರವ್ವ ನಮ್ಮ ಮನೀಗೆ ಬರಲಾಗದ ಹಾಂಗ ಮಾಡಿದರ....? ಏನಾರ ಮಾಡಿ ಆಕಿ ಹಾಲು ತರೋದನ್ನ ತಪ್ಪಿಸಿ ಬಿಡಬೇಕು. ದೀಪಾನ ಬುದ್ಧಿ ಚುರುಕಾಗಿ ಕೆಲಸ ಮಾಡುತ್ತಿತ್ತು....

"ಅವ್ವಾs, ನಾಗೂಗ ನನ್ನ ಖೋಲಿ ಕಸಾ ಉಡುಗಿ ನೆಲಾ ಒರಸ ಅನ್ನು" ದೀಪಾ ಕೂಗಿದಳು. ಹಿತ್ತಿಲ ಕಸ ತೆಗೆದ ನಾಗೂ ಕಸಬರಿಗೆ ಹಿಡಿದು ಒಳ ಬಂದಳು. ತಾನು ಉಟ್ಟು ಬಿಟ್ಟು ಕೊಟ್ಟ ಸೀರೆ ಉಟ್ಟ ನಾಗೂ ಸಲಿಗೆಯಿಂದ "ನೀವು ಅಲ್ಲಿಂದ ಸರೀರಿ ಅಕ್ಕಾವ್ರ" ಎಂದ ನಾಗೂನನ್ನು ನೋಡಿ ಮನಸ್ಸು ಕಸವಿಸಿಪಡುತ್ತಿದ್ದರೂ ಕಲ್ಲು ಮಾಡಿಕೊಂಡು ಹೊರಗೆ ವರಾಂಡಕ್ಕೆ ಹೋದಳು ದೀಪಾ. ನಾಗೂ ತಂದ ಹಾಲಿನ ಬುಟ್ಟಿ ಅಲ್ಲಿಯೇ ಇತ್ತು.

ಬಟ್ಟೆ ಒಗೆದು, ಅಡಿಗೆ ಮನೆ ಒರೆಸಿ ನಾಗೂ ಹೋಗುತ್ತೇನೆಂದಾಗ ದೀಪಾ "ಅವ್ವಾs, ಅವ್ವಾ" ಎನ್ನುತ್ತ ಗಾಬರಿಯಾಗಿಯೇ ಬಂದಳು. "ನನ್ನ ಕಿವ್ಯಾಗಿನ ರಿಂಗು ಸಿಗವೊಲ್ಲವು ಅವ್ವಾ, ದಿನಾ ಇಡೂ ಹಾಂಗ ಕನ್ನಡಿ ಮುಂದ ಇಟ್ಟಿದ್ದೆ. ಮುಖಾ ತೊಳಕೊಂಡು ಹಾಕ್ಕೋಬೇಕಂತ ನೋಡಿದರ ಇಲ್ಲು ಇಲ್ಲಾ." ಅವಳು ಹೇಳುತ್ತಿದ್ದುದನ್ನು ನಂಬದವರಂತೆ ಮತ್ತೆ ಮತ್ತೆ ಕೇಳಿದರು

ಇಂದಿರಕ್ಕ. "ನೆನಪು ಮಾಡಿಕೋ, ಹಾಸಿಗ್ಯಾಗ ಹುಡುಕು. ಮರೆತು ಎಲ್ಲ್ಯಾರೆ ಇಟ್ಟಿದ್ದೀ. ಅವಕೇನು ಕಾಲು ಬರ್‍ತಾವೇನು."

"ಬಂಗಾರದ ರಿಂಗಿಗೆ ಕಾಲು ಹ್ಯಾಂಗ ಬರ್‍ತಾವ ಅವ್ವಾ ಕಾಲು ಇದ್ದವರು ಯಾರರೆ ಎತ್ತಿದ್ದಾರು. ಈ ದಿನದಾಗ ಯಾರ್‍ನೂ ನಂಬಬಾರದು. ದಿನಾ ಒಂದು ಸುದ್ದಿ ಬರ್‍ತಾವ ಪೇಪರಿನ್ಯಾಗ ಕಳವು ಹ್ಯಾಂಗ ಮಾಡ್ತಾರ ಅಂತ ಓದ್ದಿ ಇಲ್ಲೋ."

"ಇಲ್ಯಾರ ಅದಾರ ಕಳವುಮಾಡವ್ರು. ಒಳಗ ಯಾರ ಬಂದಾರ. ಹಾಂಗ ಯಾಕ ಮಾತಾಡ್ತೀ. ನಾಗೂನ ಮ್ಯಾಲೆ ಸಂಶಯ ಅದ ಏನು ನಿನಗ? ಆಕಿ ಅಂಥಾ ಹುಡುಗಿ ಅಲ್ಲ್ಲಾ ಪಾರವ್ವನ ಮಗಳು ಆಕಿ."

"ಪಾರವ್ವನ ಮಗಳು ಆದರ ಏನಾತು? ಆಕೀ ಪೇರಲ ಹಣ್ಣು ಹೂವು ಕದಿಯೂ ಮುಂದ ನೋಡಿ ನಾವs ಎಷ್ಟ ಸಾರೆ ಬೈದಿಲ್ಲಾ. ಆಕಿನ ಬಿಟ್ಟರ ಒಳಗ ಯಾರೂ ಬಂದಿಲ್ಲಾ. ಬಂಗಾರ ಅಂದರ ಎಲ್ಲಾರ ಬಾಯಾಗೂ ನೀರು ಬರ್‍ತಾವ."

ತಾಯಿ ಮಗಳ ಮಾತು ಕೇಳುತ್ತಿದ್ದ ನಾಗೂ ಆಗಲೇ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. "ರಿಂಗು ನಾ ನೋಡಿಲ್ರಿ. ನಾ ಯಾವ ಸಾಮಾನು ಮುಟ್ಟ್ಯಾದಿಲ್ಲಾ. ನಮ್ಮವ್ವಗ ಗೊತ್ತಾದರೆ ನನ್ನ ಬರಲು ತೊಗೊಂಡು ಹೊಡೀತಾಳ್ರಿ, ನಂಬ್ರಿ ನನ್ನ ಮಾತು. ನಾ ತೊಗೊಂಡಿಲ್ಲಾ." ಅಳುತ್ತಲೇ ತನ್ನ ಸೀರೆ ಝಾಡಿಸಿದ್ದಳು. ಕುಪ್ಪಸ ತೆಗೆದು ತೋರಿಸಿದಳು.

"ನಿನ್ನ ಬುಟ್ಟೀ ನೋಡೋಣು ನಡಿ" ಎಂದ ದೀಪಾಳೊಡನೆ ಧೈರ್ಯವಾಗಿ ಹೋದಳು. ಬುಟ್ಟಿಯ ತಳದಲ್ಲಿದ್ದ ರಿಂಗು ದೀಪಾಳ ಕೈಗೆ ಸಿಕ್ಕಾಗ ಥರ ಥರ ನಡುಗತೊಡಗಿದ್ದಳು. "ದೇವರಾಣೆ ಅವ್ವಾರ. ನಾ ಇಟ್ಟಿಲ್ರಿ ಇವನ್ನ. ಇಲ್ಲೆ ಹ್ಯಾಂಗ ಬಂದೂವಂತ ನನಗ ಗೊತ್ತಿಲ್ರಿ."

"ಅರೇದ ಮಳ್ಳೀ ಹಾಂಗ ಮಾತಾಡ್ತೀಯಲ್ಲs ಬಂಗಾರದ ರಿಂಗು ತಾವ ಎದ್ದು ಬಂದು ಕುಂತಾವೇನ ನಿನ್ನ ಬುಟ್ಟ್ಯಾಗ, ಅಂತೂ ನಂಬಿದ್ದಕ್ಕ ಛೋಲೋ ಕೈ ತೋರಿಸಿದಿ. ಸಾಕಿನ್ನು ನಿಮ್ಮಂಥವರ ಸಹವಾಸಾ. ಈಗ ಹೋಗು ನಾಳೆ ಪಾರವ್ವಗ ಬಂದು ಹಾಲಿನ ರೊಕ್ಕಾ ಒಯ್ಯ ಅನ್ನು. ನಿಮ್ಮ

ಹಾಲೂ ಬ್ಯಾಡಾ, ನಿಮ್ಮ ಮಾರೀನೂ ಬ್ಯಾಡಾ." ಅಪ್ಪ ಸಿಟ್ಟಿನಿಂದ ಕೂಗಿಕೊಂಡಾಗ ದೀಪಾಳಿಗೂ ಅಲ್ಲಿ ನಿಲ್ಲುವದಾಗಲಿಲ್ಲ.

ಇಂದಿರಕ್ಕ ಮರುದಿನವೇ ಪಾರವ್ವನನ್ನು ಲೆಕ್ಕ ಚುಕ್ತಾ ಮಾಡಿ ಆಚೆ ಕಳಿಸಿದ್ದರು. ಇಷ್ಟು ದಿನದ ಅವಳ ಒಳ್ಳೆಯ ನಡತೆಗಾಗಿ ಪೋಲೀಸರಿಗೆ ತಿಳಿಸುವದಿಲ್ಲವೆಂದು ದೊಡ್ಡ ಗುಣ ತೋರಿದರು. ದೀಪಾ ನಿಶ್ಚಿಂತೆಯಾಗಿ ಪುಸ್ತಕ ಕೈಗೆತ್ತಿಕೊಂಡಳು.

ಇದೆಲ್ಲಾ ನಡೆದು ನಾಲ್ಕು ವರ್ಷಗಳೇ ಕಳೆದಿವೆ. ಹೆರಿಗೆ ಆಸ್ಪತ್ರೆಯ ಹೆಬ್ಬಾಗಿಲಿನಲ್ಲಿ ಇಂದಿರಕ್ಕನಿಗೆ ಅಕಸ್ಮಾತ್ತಾಗಿ ಪಾರವ್ವ ಭೆಟ್ಟಿ ಆದಳು. ಪಾರವ್ವನ ಮರೆವೆಯೋ ಹಿಂದಿನ ಋಣಾನುಬಂಧವೊ ಕಹಿ ನೆನಪು ಇಬ್ಬರಿಗೂ ಮರೆತು ಹೋಗಿತ್ತು.

"ಅವ್ವಾರ ಆರಾಮ ಆದಿರ್ಯಾ" ಎಂದಳು ಪಾರವ್ವ.

"ಏನು ಪಾರವ್ವ ಇತ್ಲಾಗ ಬಂದಿದ್ದಿ" ಇಂದಿರಕ್ಕನಿಗೆ ಮಾತು ಬೇಕಾಗಿತ್ತು.

"ನಮ್ಮ ಊರಾಕಿಗೆ ಇಲ್ಲೆ ಆಪರೇಸನ್ ಆಗೇತ್ರಿ. ನೋಡಾಕ ಬಂದಿದ್ದೆ ಅಕ್ಕಾರು ಎಲ್ಲಾರು ಆರಾಮ ಅದಾರೇನ್ರಿ."

"ಹೂಂನವ್ವಾ ದೀಪಾನ ಮದುವೀ ಆತು ಬ್ಯಾರೆ ಜಾತಿ ಹುಡುಗನ ಜೊತಿ. ಮದುವೀ ಮಾಡಿಕೋತೀನಿ ಅಂತ ಹಟಾ ಹಿಡದ್ಲು. ಬ್ಯಾಡಾ ಅಂದದ್ದಕ್ಕ ಟಿಕ್‌ಟ್ವೆಂಟಿ ಕುಡದ್ಲು. ಹಡದ ಕಳ್ಳು ಅವಳನ್ನು ಹ್ಯಾಂಗೋ ಗುದ್ದಾಡಿ ಉಳಿಸಿಕೊಂಡ್ವಿ. ಆಕೀ ಹಟಕ್ಕ ಮಣೀಬೇಕಾತು. ಅದ ಹುಡುಗ್ಗ ಮದುವೀ ಮಾಡಿಕೊಟ್ವಿ."

"ಛೋಲೋ ಆತ್ರಿ, ಈಗ ಸುಖಕಿಂದ ಅದಾರಲ್ರಿ."

"ಅತ್ತಿ, ಮಾವ, ಗಂಡ ಎಲ್ಲಾ ಛೋಲೋ ಅದಾರ ಪಾರವ್ವ, ದೀಪಾನ್ನ ಬಾಳ ಪ್ರೀತಿ ಮಾಡ್ತಾರ. ಆದರೂ ಆಕೀ ನಸೀಬ ಕೆಟ್ಟ, ಚೊಚ್ಚಲ ಗಂಡು ಹಡದ್ಲು, ಕೂಸು ತೀರಿಕೊಂಡಿತು. ಈಗ ಆಕೀ ದುಃಖಾ ನೋಡಲಾಗಸಲ್ಲ. ಬಾಳ ಸಂಕಟ ಆಗ್ತದ ಪಾರವ್ವ" ಇಂದಿರಕ್ಕ ಮಗುವಿನಂತೆ ಅತ್ತರು.

"ನಡೀರಿ ಅವ್ವಾರ. ದೀಪಕ್ಕನ್ನ ನಾನು ನೋಡ್ತೀನಿ" ಒಳಗೆ ನಡೆದರು.

"ದೀಪಾ, ಪಾರವ್ವ ಬಂದಾಳ ನೋಡು. ಹೊಟ್ಟಿಗೆ ಏನೂ ತಿನ್ನೂದಿಲ್ಲ. ಗ್ವಾಡೀ ಕಡೆ ಹೊಳ್ಳಿ ಅಳತಿರತಾಳ. ಪಾರವ್ವ, ಹಿಂಗಾದರ ನಾ ಈಕಿನ್ನ ಹ್ಯಾಂಗ ಸಂಬಾಳಿಸಲಿ."

ಪಾರವ್ವ ಹತ್ತಿರ ಕೂತು ದೀಪಾನ ಬೆನ್ನು ಸವರಿ "ಅಕ್ಕಾರ ಅಂವಾ ಕಸಗೊಂಡಾ. ಅತ್ತು ಹೈರಾಣಾಗಬ್ಯಾಡ್ರಿ. ಆ ದೇವರು ಮತ್ತ ಫಲಾ ಕೊಡ್ತಾನ, ಅಳಬ್ಯಾಡ್ರಿ." ಅಳುತ್ತಿದ್ದ ಪಾರವ್ವನನ್ನು ನೋಡಿ,

"ನಾ ಪಾಪಾ ಮಾಡಿದೆ ಪಾರವ್ವಾ, ಅದಕ್ಕs ನನ್ನ ಕೂಸು ಹೋತು, ನನಗ ಶಿಕ್ಷಾ ಆತು." ತನ್ನ ತಪ್ಪು ಕ್ಷಮಿಸಿಬಿಡು ಎನ್ನುವಂತೆ ದೀಪಾ ಕಾಣದ ದೇವರಿಗೆ ಕೈ ಜೋಡಿಸಿದಳು.

ಲೆಕ್ಕ ಸರಿಹೋಯಿತು

ಹವೆಯಲ್ಲಿ ಸೋಪಿನ ಪರಿಮಳ ಸೂಸುತ್ತಲೇ ಬಚ್ಚಲು ಮನೆಯಿಂದ ಹೊರಬಿದ್ದ ಪದ್ಮಳ ಲಕ್ಷ್ಯ ಗೋಡೆಯತ್ತ ಹೋಯಿತು. ಒಂಬತ್ತೂ ಕಾಲು! ಅವಸರದಿಂದ ಬೆಡ್‌ರೂಮ್ ಕನ್ನಡಿಯ ಮುಂದೆ ನಿಂತು ಎತ್ತಿ ಕಟ್ಟಿದ ಕೂದಲು ಬಿಚ್ಚಿದಳು. ಓಹ್! ಎಷ್ಟು ಬೇಗ ಎದ್ದರೂ ಕೆಲಸಗಳೇ ಮುಗಿಯು ವದಿಲ್ಲ. ಕುಕ್ಕರ ಇಳಿಸಿ, ಒಗ್ಗರಣೆ ಹಾಕಿ, ಚಪ್ಪಾತಿ ಲಟ್ಟಿಸುವದರಲ್ಲಿಯೇ ಬಸ್ಸಿನ ವೇಳೆಯಾಗುತ್ತದೆ. ಹತ್ತೂಕಾಲಿನ ಬಸ್ಸು ತಪ್ಪಿದರೆ ಮತ್ತೆ ಲೇಟು. ಬಾಸ್ ಹತ್ತಿರ ಅಪರಾಧೀಭಾವದಿಂದ ಹೋಗೋದಕ್ಕೆ ಒಂಥರಾ ನಾಚಿಕೆ. ಮುಗುಳ್ನಕ್ಕು, ಕಣ್ಣು ಅರಳಿಸಿ 'ಗುಡ್ ಮಾರ್ನಿಂಗ್ ಸರ್' ಅಂದರೆ ಸಾಕು, ಖುಷಿಯಿಂದ ಹಲ್ಲು ಕಿರಿಯುವ ಬಾಸ್. ನೋಡಿ ಜಿಗುಪ್ಸೆ, ಕೋಪ, ಗಡಿಬಿಡಿ ಎಲ್ಲ ಪಾಕವಾಗಿ ಕುದಿಯುತ್ತ ಮೈ ಪರಚಿಕೊಳ್ಳುವಂತಾಗುತ್ತದೆ. ಕೂದಲಿಗೆ ಪಿನ್ ಹಾಕಿಕೊಳ್ಳುತ್ತ ಮನಸ್ಸಿನಲ್ಲಿ ಬಾಸ್‌ನ ಅಕರಾಳ ಮುಖವನ್ನು ಕಲ್ಪಿಸಿ ಕೊಳ್ಳುತ್ತ, ತುಟಿಗಳು ಮಾತ್ರ ಅಭ್ಯಾಸಬಲದಿಂದ ಅಲುಗಿಸಿ ಹೇಳಿಕೊಳ್ಳುವ ದೇವಿ ಸ್ತೋತ್ರ ಗಂಟಲು ದಾಟಿ ಹೊರಬರುತ್ತಿರಲಿಲ್ಲ.

ಹಾಂ, ಏನೆಂದರೂ ಲಕ್ಷ್ಮೀ ಗುಡಿ ಪೂಜಾರಿ ಮಗಳಲ್ಲ, ನೀ ಯಾಕ ಬಿಟ್ಟೀ ಆ ಮಣಾ ಮಣಾ ಮಂತ್ರಾ ಹೇಳೂದು. ಕಾಶೀನಾಥ ಆಗಾಗ ಹೆಂಡತಿ ಯನ್ನು ಛೇಡಿಸುತ್ತಿದ್ದ.

ಗಂಡ, ಮಕ್ಕಳು, ಮನೀ, ಆಫೀಸು ಈ ಜಂಜಾಟದಾಗ ತಾಸೊತ್ತು ಕೂತು, ಪೂಜಿ ಮಾಡಲಿಕ್ಕೆ ಟೈಂ ಎಲ್ಲ್ಯದ ನನಗ. ಹೋಗಲಿ, ಸ್ತೋತ್ರಾನೂ

ಅನಬ್ಯಾಡ ಅಂತೀರಾ ? ಪದ್ಮ ಸಿಡಿ ಸಿಡಿ ಎಂದಾಗ ನಗುತ್ತ ಅಲ್ಲಿಂದ ಜಾರಿಕೊಳ್ಳುತ್ತಿದ್ದ ಕಾಶೀನಾಥ.

ಸ್ವಚ್ಛ ಆಕಾಶ, ಕೆರೆಯ ನೀರಲ್ಲಿ ಥಳಥಳಿಸುವ ಚಂದ್ರ, ಮಂದವಾಗಿ ಬೀಸುವ ತಂಗಾಳಿ, ಗುಡಿಯಲ್ಲಿ ಹೂವು, ಊದುಬತ್ತಿ, ಗಂಧದ ಪರಿಮಳ. ಲಕ್ಷ್ಮೀದೇವಿಯ ಎದುರು ಪದ್ಮಾಸನ ಹಾಕಿ ಕುಳಿತು ಸಂಧ್ಯಾ ಮಂತ್ರ ಹೇಳುತ್ತಿದ್ದ ಅಪ್ಪ. ಹತ್ತಿರ ದುಂಡಗೆ ಕೂತು ದನಿಗೂಡಿಸುವ ಚಿಳಿ ಪಿಳ್ಳೆಗಳು. ಸ್ವಲ್ಪ ದೂರದಲ್ಲಿ ಕಂಬಕ್ಕೆ ಆತು ಕಣ್ಮುಚ್ಚಿ, ಕೈಮುಗಿದು ಕೂತ ಅವ್ವ. ಆ ಆನಂದ–ಶಾಂತಿಯ ತೂಗುಯ್ಯಾಲೆ–ಓಹ್ ! ಅಪ್ಪ, ಅವ್ವ ಈಗ ಬರಿ ನೆನಪು. ದಿನವೂ ಸ್ನಾನ ಮಾಡಿದೊಡನೆ ಯಾಂತ್ರಿಕವಾಗಿ ತುಟಿ ಅಲುಗುತ್ತಿದ್ದರೂ ಮನದ ಮೂಲೆಯಲ್ಲಿ ಮೂಡುವ ಈ ಚಿತ್ರ ಎಂದೂ ಮಾಸುವಂತಿಲ್ಲ.

"ಅವ್ವಾ" ಮಣಮಣಿಸುತ್ತ ಕುಂಕುಮ ತೀಡುತ್ತಿದ್ದ ಪದ್ಮಾ ತಿರುಗಿದಳು. "ಅವ್ವಾ ನಾ ಈಗ ಕಾಲೇಜ ಸ್ಟೂಡೆಂಟು, ನನಗೆ ವಾಚು ಬೇಕು. ಅಪ್ಪ ಅವ್ವಾ ಇಬ್ಬರೂ ಗಳಸತಾರ ನಿಂದು ಚೈನಿ ಅಂತಾರ ಗೆಳತೇರು ಎಲ್ಲಾರೂ ವಾಚು ಕಟ್ಟತಾರ ಆದರೆ ನನಗೆ ಇಲ್ಲಾ. ಈ ತಿಂಗಳು ನನಗ ಹೊಸಾ ನಮೂನಿ ವಾಚು, ಪಟ್ಟಿ, ಬೇಡಬೇಕು ನೋಡು." ಅವಳ ಹುಟ್ಟುಹಬ್ಬಕ್ಕೆ ಕೊಂಡ ಹೊಸ ಡ್ರೆಸ್ ಹಾಕಿಕೊಂಡು ತನ್ನೆತ್ತರಕ್ಕೆ ಬೆಳೆದು ನಿಂತ ಮಗಳನ್ನು ತುಂಬು ಪ್ರೀತಿಯಿಂದ ದಿಟ್ಟಿಸಿದಳು ಪದ್ಮಾ.

ಅವ್ವನ ಹಳೆಯ ಸೀರೆಯನ್ನು ಹರಿದು ಮಾಡಿದ ಪರಕಾರ ತೊಟ್ಟ ಅಕ್ಕತಂಗಿಯರು ಚಪಕ್ ಚಪಕ್ ಜಿಗಿಯುತ್ತ ಹಗ್ಗದಾಟದ ಜಿದ್ದಿನಲ್ಲಿದ್ದರು. ಜಿಗಿತಕ್ಕೆ ಸರಿಯಾಗಿ ಕೈಬಳೆಗಳ ಮಂಜುಳ ತಾಳ. ಬಾಯಾರಿ, ಏದುಸಿರು ಬಿಡುತ್ತ, ಬೆವರು ಹನಿ ತಟಗುಡುತ್ತಿದ್ದರೂ ಇಬ್ಬರಲ್ಲಿ ಒಬ್ಬರೂ ಸೋಲುತ್ತಿರಲಿಲ್ಲ. ಆ ಉಮೇದು, ಮನಸ್ಸು, ತುಂಬಿ ಹೊರಚೆಲ್ಲುವ ಸಂತೋಷ ಎಲ್ಲ ಬಾಲ್ಯದೊಡನೆಯೇ ಸೋರಿ ಹೋಗಿದೆಯೇ ?

"ಅವ್ವಾ, ನನಗ ಹೊತ್ತಾಗತದ ಲಗೂನ ಚಪಾತಿ ಮಾಡ ಬಾ." ಎಚ್ಚತ್ತ ಪದ್ಮ ಅಡಿಗೆ ಮನೆಗೆ ಧಾವಿಸಿದಳು.

"ಪದ್ಮಾ, ನಾ ಇವತ್ತ ಸೈಟಿನ ಸಾಲದ ಕಂತು ತುಂಬಲಿಕ್ಕೆ ಹೋಗಬೇಕು. ನೀ ಆಫೀಸಿಗೆ ಬಸ್ಸಿಗೆ ಹೋಗು." ಕಾಶೀನಾಥ ಸ್ಕೂಟರ ಹತ್ತಿ ಹೊರಟು

ಹೋದ. ಕಾಲೇಜಿಗೆ ಹೋದ ವಿಲಾಸ ಬಂದೊಡನೆ ಕೀಲಿ ಕೈ ಕೊಡಲು ನೆರೆ ಮನೆಯವರಿಗೆ ಹೇಳಿ ಬಸ್ ಸ್ಟಾಪಿನತ್ತ ಧಾವಿಸುತ್ತಿದ್ದಳು. ಪದ್ಮಾ ಅವಳ ಪಕ್ಕದಲ್ಲೊಂದು ಕಾರು ನಿಂತಿತು. ಅವಳ ಸಹೋದ್ಯೋಗಿ ಸುಬ್ಬರಾವ್. ಒಡವೆ-ಜರಿ ಸೀರೆಯಿಂದ ಅಲಂಕೃತಳಾದ ಹೆಂಡತಿಯೊಡನೆ ಇಳಿದು ಬಂದರು.

"ಹಲೋ ಮಿಸೆಸ್ ಮುಳಗುಂದ, ನಾವು ನಿಮ್ಮ ಮನೀಗೆ ಹೊರಟಿದ್ವಿ, ೨೬ಕ್ಕೆ ನಮ್ಮ ಮಗಳ ಲಗ್ನ ಅದ. ನೀವು ನಿಮ್ಮ ಮನೀಯವರು ಬರಬೇಕು. ಮಕ್ಕಳ್ನೂ ಕರಕೊಂಡು ಬರ್ರಿ."

"ಆಗಲಿ, ಬರ್ತೀವಿ" ಅಂಬಾಸಡರ್ ಅವಳ ಮುಖಕ್ಕೆ ಧೂಳು ಎರಚಿ ಮಾಯವಾಯಿತು. ಲಕೋಟೆ ಬಿಚ್ಚಿದಳು. ಡಾಕ್ಟರ್ ಅಳಿಯನಿಗೆ ಎಷ್ಟು ಸುರಿದಿದ್ದಾರೋ ಸುಬ್ಬರಾವ್. ಅವರಿಗೇನು ಕಡಿಮೆ ಮೇಲು ಸಂಪಾದನೆಯೇ ಸಾಕಷ್ಟಿದೆ. ಸ್ವಂತ ಮನೆಯಾಯಿತು, ಕಾರು. ಈಗ ಮಗಳ ಮದುವೆ, ಎಲ್ಲ ಭರ್ಜರಿಯಾಗಿಯೇ ನಡೀತಿದೆ. ಅವರ ಹೆಂಡತಿಯ ಬಿಗುಮಾನ ಎಷ್ಟು? ಗಂಡನ ಜೊತೆಗೆ ಕೆಲಸ ಮಾಡುವವಳು ತನ್ನ ಸರಿಸಮ ಅಲ್ಲ ಎಂದು ತಿಳಿದೋ ಏನೋ ತುಟಿ ಎರಡು ಮಾಡಲಿಲ್ಲ. ಶ್ರೀಮಂತಿಕೆಯ ಅಹಂಕಾರ ಬೇರೆ. ಇವರ ಶ್ರೀಮಂತಿಕೆಯ ಗುಟ್ಟು ನನಗೆ ಗೊತ್ತಿಲ್ಲವೇ? ಸುಬ್ಬರಾವ್‌ರಂಥವರೇ ಬಹಳಷ್ಟು ಜನ. ಅಂಥ ಎಂಜಲು ಹಣ ತೊಗೋಬಾರದು ಎನ್ನುವ ನನ್ನಂಥ ವರಿಗೆ ಮೈ ತುಂಬ ಸಾಲ. ತಲೆಗಿದ್ದರೆ ಕಾಲಿಗಿಲ್ಲ, ಕಾಲಿಗಿದ್ದರೆ ತಲೆಗಿಲ್ಲ ಅನ್ನೋ ಹಾಗೆ ನಮ್ಮ ಜೀವನ ನಡೀತಿದೆ. ಕಾರು ಹೋಗಲಿ. ಸ್ಕೂಟರ್ ಸಾಲವೇ ಇನ್ನೂ ಮುಟ್ಟಿಲ್ಲ. ಸ್ವಂತ ಮನೆ ನಮಗೆ ಕನಸೇ ಆಗಬಹುದು. ಸೈಟಿನ ಸಾಲವೇ ತಿಂಗಳಿಗೆ ಆರು ನೂರು. ಮಕ್ಕಳಿಬ್ಬರ ಕಾಲೇಜು ಖರ್ಚು, ಅರಿವೆ-ಅಂಚಡಿ, ಪುಸ್ತಕಗಳಿಗೇ ಶೇಷಣ್ಣನ ಹತ್ತಿರ ಕೈ ಸಾಲ ಕೇಳಬೇಕಾಯ್ತು. ಇನ್ನು ಸರಿತಾನ ವಾಚಿಗೆ ಹಣ ಎಲ್ಲಿಂದ ತರಬೇಕು. ಎಲ್ಲಾರಿಗೂ ವಾಚು ಅದ, ತನಗ ಇಲ್ಲಾ ಮನಸ್ಸು ಸಣ್ಣದು ಮಾಡಿಕೋತಾಳ. ಇರೋಳು ಒಬ್ಬಳ ಮಗಳು. ಅವಳ ಸಣ್ಣ ಅಪೇಕ್ಷಾನೂ ಪೂರೈಸಲಿಲ್ಲಾ ಅಂದರ ಇಬ್ಬರೂ ದುಡದು ಏನು ಉಪಯೋಗ ಅಂಥ ಅನಸ್ತದ....

"ಗೋಪಿ ಹೊಲದಿಂದ ಬಂದನೇನು? ಬಂದಿದ್ದರ ಊಟಕ್ಕೆ ಕರಿ ಪದ್ಮಾ. ಹುಡುಗರೆಲ್ಲಾ ಸಾಲಿಂದ ಬಂದಾರ. ಅವರದೂ ಪೂಜಿ ಮುಗದದ ಎಲ್ಲಾರಿಗೂ

ಎಲಿ ಹಾಕಿ ನೀರು ಇಡು. ಹೊತ್ತಾಗಿ ಹೋತು, ಹೊಟ್ಟೆ ಹಸಿದಿದ್ದೀತು. ಲಗೂನ ಬರ್ರಿ" ಅವ್ವನ ಅಕ್ಕರೆಯ ಕರೆಗೆ ಬೆಳಗಿನ ಒಂದು ಕಪ್ಪು ಚಹಾ ಕುಡಿದ ಹೊಟ್ಟೆ ಹಸಿದು, ಅಡಿಗೆ ಮನೆಗೆ ಧಾವಿಸುತ್ತಿತ್ತು. ರೊಟ್ಟಿ, ಪಲ್ಲೆ, ಅನ್ನ, ಮಜ್ಜಿಗಿ ಅಮೃತಕ್ಕಿಂತಲೂ ಸವಿ. ತುಂಡು ಹೊಲದಲ್ಲಿ ದುಡಿದು ಬಂದ ಅಣ್ಣನಿಗೆ ಒಂದು ರೊಟ್ಟಿ ಹೆಚ್ಚು. ಉಳಿದವರೆಲ್ಲ ಚಿಕ್ಕವರೇ. ಇದ್ದುದನ್ನೇ ಹಂಚಿಕೊಂಡು ಉಂಡು ಹೊಟ್ಟೆ ತುಂಬ ಮಜ್ಜಿಗೆ ಕುಡಿದರೆ ಆಯಿತು. ಆಟಕ್ಕೆ, ಪಾಠಕ್ಕೆ, ಕೆಲಸಕ್ಕೆ ಎಲ್ಲರೂ ಪರಾರಿ. ಮತ್ತೆ ರಾತ್ರಿವರೆಗೆ ಹೊಟ್ಟೆ ಹಪ ಹಪ ಎಂದದ್ದೇ ಇಲ್ಲ, ಅಷ್ಟು ಸಂತೃಪ್ತಿ ಎಲ್ಲರಲ್ಲೂ....

"ಬಾಯಿಯವರ, ಸಾಹೇಬ್ರು ನಿಮ್ಮನ್ನು ಕರೀತಾರ್ರಿ" ರಂಗಪ್ಪನ ಕರೆಗೆ ತಲೆ ಎತ್ತಿದ ಪದ್ಮಾಳ ಕಣ್ಣುಗಳಲ್ಲಿಯ ಕನಸು ಕರಗಿತ್ತು.

"ಶಹಾ ಅವರದೊಂದು ಫೈಲಿನ ಬಗ್ಗೆ ಮೊನ್ನೆ ನಿಮಗೆ ಹೇಳಿದ್ನಲ್ಲ. ಆದರದೆಲ್ಲಾ ಕಾಗದ ತಯಾರ ಅದಾವೇನು ?"

"ಎಲ್ಲಾ ಆಗೇದ್ರಿ ಸರ್, ಇನ್ನ ಹತ್ತು ಮಿನಿಟಿನ್ಯಾಗ ಎಲ್ಲಾ ಮುಗಿಸಿ ತಂದು ಕೊಡತೀನ್ರಿ" ಅಲ್ಲಿ ಕುಳಿತಿದ್ದ ಇನ್ನೊಬ್ಬರತ್ತ ನೋಡಿ ಹೊರ ಬಂದಳು ಪದ್ಮಾ.

"ಮಿ. ಹುಲ್ಲೂರ, ಮೊನ್ನಿಯಿಂದ ಕೇಳತೇನಿ ಆ ಕಾಗದಾ ತಯಾರ ಆಗಿದ್ದರ ಕೊಡ್ರಿ ಅಂತ. ಈಗ ಸಾಹೇಬರ ಕೇಳಲಿಕ್ಕೆ ಹತ್ಯಾರ. ಶಹಾ ಅವರ ಮ್ಯಾನೇಜರ ಬಂದಾರ, ಈಗರೆ ಕೊಡ್ರಿ."

"ಕೊಡತೀನಿ. ನಾ ಎಲ್ಲೆ ಇಲ್ಲಾ ಅಂತೀನಿ. ಆದರೆ ದಕ್ಷಿಣೆ ಇಲ್ಲದ ಯಾವ ದೇವರೂ ಈಗ ಪ್ರಸನ್ನ ಆಗೂದಿಲ್ಲಾ ಅನ್ನೂದು ನಿಮಗೂ ಗೊತ್ತದ. ನೀವಂತೂ ಜಗತ್ತಿನ ಕೂಡ ಹೋಗವರು ಅಲ್ಲಾ. ನಿಮ್ಮ ಜೋಡಿ ನಮ್ಮನ್ನೂ ಉಪಾಸ ಕೆಡವತೀರಿ. ನೋಡ್ರಿ, ಸುಬ್ಬರಾವ್ ಲಕ್ಷ ರೂಪಾಯಿಗೆ ಡಾಕ್ಟರ ಅಳಿಯಾನ್ನ ಖರೀದಿ ಮಾಡ್ಯಾನ. ಕುಲಗೆಟ್ಟು ಸುಖಾ ಪಡತಾನ. ನೀವಿದ್ದ ಜಾಗದಾಗ ಯಾರ ಇದ್ದರೂ ಬೆಳ್ಳಿ, ಬಂಗಾರ, ಕಾರು, ಮನಿ ಎಲ್ಲಾ ಮಾಡಿ ಕೊತಿದ್ದರು. ಆದರ್ಶದ ಬೆನ್ನು ಹತ್ತಿ ನೀವು ಹಿಂಗ ಜೀವನಾ ಮಾಡಿದರ ನಾಳೆ ಮಕ್ಕಳ ಕೈಯಾಗ ಪರಟೀ ಕೊಡ್ತೀರಿ ಆಯ್ತು."

ಪದ್ಮಾಳ ಹುಬ್ಬು ಸಂಕುಚಿತಗೊಂಡು ಸಿಟ್ಟೇರಿ ಇನ್ನು ಏನಾದರೂ

ಅಂದು ಬಿಡುವವಳೇ. ಅವಳ ಮುಖ ನೋಡಿ ಹುಲ್ಲೂರ ತುಟಿಯಲ್ಲೇ ನಗುತ್ತಿದ್ದ. ಹಾಂ, ಸಿಟ್ಟು ಮಾಡಿಕೊಳ್ಳುವಂಥಾದ್ದು ಏನೂ ಇಲ್ಲ ಇದರೊಳಗ. ಇದ್ದದ್ದನ್ನ ಎಲ್ಲಾ ಕಡೆ ನಡೆಯೂ ಮಾತನ್ನ ಎತ್ತಿ ಹೇಳ್ಯಾರ ಹುಲ್ಲೂರ. ಬಾಸ್, ಸುಬ್ಬರಾವ್, ಹುಲ್ಲೂರ ಇನ್ನೂ ಅಂಥಾ ಎಷ್ಟೋ ಜನರ ಭ್ರಷ್ಟತನಾ ಗೊತ್ತಿದ್ದೂ ಅವರ ಅಧಿಕಾರಶಾಹಿ, ಅಹಂಕಾರ, ಆಡಂಬರಾ ನೋಡಿ ಜನಾ ಬಾಯಿ ಬಿಡ್ತಾರ ಹೊರತು ಇದು ಅನ್ಯಾಯ ಅಂತ ದನೀ ಎತ್ತೂದಿಲ್ಲ...

ಸರಿತಾನ ರೂಪ, ಗುಣಾ, ವಿದ್ಯಾ ನೋಡಿ ಯಾರರೆ ಆಕೀನ್ನ ಲಗ್ನ ಆಗಲಿಕ್ಕೆ ಬರ್ತಾರೇನು ? ಉಹುಂ ನಾವು ಎಣಿಸೂ ರೊಕ್ಕದ ಮ್ಯಾಲೆ ಅವರ ಕಣ್ಣು ಇರ್ತದ ಅನ್ನೂದ ಖರೇ. ಒಂದು ವಾಚು ಕೊಡಿಸಲಿಕ್ಕೆ ಆಗಲಾರದವರು, ಲಕ್ಷ ರೂಪಾಯಿ ಸುರದು ಒಳ್ಳೇ ಕಡೆ ಕೊಟ್ಟು ಮದುವೀ ಮಾಡೋದು ಸಾಧ್ಯ ಆದೀತೇನು ?

'ಹೂಂ' ಲಗೂನ ಕನ್ಯಾ ಕರಕೊಂಡು ಬರ್ರಿ. ಕಾಶೀನಾಥರಾಯರ ಮಾಂಗಲ್ಯ ಕಟ್ಟರಿ. ಇಬ್ಬರೂ ಸಾ ಹೇಳಿದಾಂಗ ಅನ್ನರಿ. ಮುತ್ತು ಕಂಡೆ, ರತ್ನಾ ಕಂಡೆ ಅನ್ನರಿ. ಹಾರಾ ಹಾಕರಿ. ಕೈ ಕೈ ಹಿಡಕೊಳ್ರಿ. ನಾನು ಶೆಲ್ಲೇಕ ಸೆರಗಿಗೆ ಗಂಟು ಹಾಕ್ತೀನಿ ಎಲ್ಲಾರಿಗೂ ನಮಸ್ಕಾರಾ ಮಾಡ್ರಿ. ಮೊದಲ ನನಗೆ ಮಾಡ್ರಿ. ನಿಮುಗ ದೇವರು ಕಲ್ಯಾಣ ಮಾಡಲಿ. ಲಕ್ಷ್ಮೀದೇವಿಯ ಸಾನಿಧ್ಯದಲ್ಲಿಯೇ ತಮ್ಮ ಮದುವೆ ಸರಳವಾಗಿ ನಡೆದಿತ್ತು. ಅಪ್ಪ ಅವ್ವನಿಗೆ ಭಾರವಾಗಿ ಕಾಣದಂತೆ ಕಾಶೀನಾಥ ನಡೆದುಕೊಂಡಿದ್ದ. ನಮ್ಮ ಪದ್ದೂನ ನಸೀಬ ಭೋಲೋ ಅದ ಭಂಗಾರದಂಥಾ ಗಂಡ ಸಿಕ್ಕಾರ ರಾಣಿ ಹಾಂಗ ಇರತಾಳ. ಅವ್ವ ಸಂತೋಷ ದಿಂದ ಕಣ್ಣು ಒರೆಸಿಕೊಂಡಿದ್ದಳು.

ಶ್ರೀಮತಿ ಪದ್ಮಿನಿ ಮುಳಗುಂದ ಆದಮ್ಯಾಲೆ ಕಾಶೀನಾಥನ ಇಚ್ಛ್ಯಾದಂಗ ಎಸ್.ಎಸ್.ಎಲ್.ಸಿ. ಪಾಸಾದೆ. ಅತ್ತೀಯವರು ಮನಿ ಕೆಲಸಕ್ಕೆ ಸಹಾಯ ಆಗ್ತಿದ್ದರು. ಮೈದುನ ಕಾಲೇಜಕ್ಕೆ ಹೋಗತಿದ್ದಾ. ಟೈಪಿಂಗ್, ಶಾರ್ಟ್‌ಹ್ಯಾಂಡ್ ಕಲಿತೆ. ಸಣ್ಣ ನೌಕರಿ ಸಿಕ್ಕಿತು. ವಿಲಾಸ ಹುಟ್ಟಿದಾ. ಮೈದುನ ಮದುವೀ ಆಗಿ ಬ್ಯಾರೆ ಮನಿ ಮಾಡಿ ಹೋದಾ. ಎಕ್ಸಟರ್ನಲ್ ಬಿ.ಎ. ಮಾಡಿದೆ. ಸರಿತಾ ಹುಟ್ಟಿದಳು. ಅತ್ತೀಯವರು ತೀರಿಕೊಂಡರು. ಕೆಲಸದೊಳಗ ಬಡತಿ ಸಿಕ್ಕಿತು. ಸಂಸಾರ ಹಾದಿಗ ಹತ್ತಿತು ಅನ್ನೂದರೊಳಗ ಹುಡುಗರು ದೊಡ್ಡವರಾದರು.

'ಮೇಡಂ' ಮೃದುಪಾದ ಕರೆಗೆ ಬೆಚ್ಚಿ ಬಿದ್ದಳು. 'ಮೇಡಂ' ನಮ್ಮ ಫೈಲು ತಯಾರ ಆಯ್ತ ?' ಮ್ಯಾನೇಜರ ಇವಳ ಟೇಬಲ್ಲಿಗೇ ಬಂದಿದ್ದರು. 'ಒಂದ್ನಿಮಿಷ' ಎಂದು ಫೈಲನ್ನು ಸಾಹೇಬರ ಹತ್ತಿರ ಒಯ್ದು ಸಹಿ ಮಾಡಿಸಿ ತಂದುಕೊಟ್ಟಳು. ಕಾಗದ ಕೈಗೆ ಸಿಕ್ಕೊಡನೆ ಕಿಸೆಯಿಂದ ಲಕೋಟೆಯೊಂದನ್ನು ತೆಗೆದು ಅವಳ ಟೇಬಲ್ ಮೇಲಿಟ್ಟು ಥ್ಯಾಂಕ್ಸ್ ಹೇಳಿ ಮ್ಯಾನೇಜರ ಹೊರಟುಹೋದರು. ಪದ್ಮಾ ಬಿಟ್ಟ ಕಣ್ಣುಗಳಿಂದ ಆ ಲಕೋಟೆಯನ್ನೇ ದಿಟ್ಟಿಸುತ್ತಿದ್ದಳು.

ಇಷ್ಟು ಕಷ್ಟಪಟ್ಟದ್ದಕ್ಕೂ ಏನು ಸಿಕ್ಕದ? ಕೆಲಸಾ ಮಾಡಲಿಕ್ಕೆ ನಾಲಾಯಕ್ ಅನ್ನೂ ಮಾತು ಬಿಟ್ಟರ. ಎರಡು ಒಳ್ಳೇ ಮಾತು ಕೂಡಾ ಇಲ್ಲಾ. ಹತ್ತರ ಕೂಡ ಹನ್ನೊಂದ ಆದರ ಈ ಜನಾ ಸುಮ್ಮನೆ ಇದ್ದಾರು. ಸಿಡದು ನಿಂತರ ಎಲ್ಲಾರ ಕಣ್ಣು ಕೆಂಪು. ಆಡಿಕೋಳ್ಳಿಕ್ಕೆ ಒಂದು ವಸ್ತು. ಜೀವಕ್ಕ ಸುಖಾ ಇಲ್ಲಾ, ತ್ಯಾಗಕ್ಕ ಬೆಲಿ ಇಲ್ಲಾ. ಹುಚ್ಚರ ಪಟ್ಟಾ ಕಟ್ಟಿದರೂ ಆಶ್ಚರ್ಯ ಇಲ್ಲಾ. ಇದs ರೀತಿ ನಡಕೊಂಡರ ಮಗಾ ಇಂಜೀನಿಯರ ಆಗಲಿಕ್ಕಿಲ್ಲಾ. ಮಗಳಿಗೆ ಒಳ್ಳೇ ವರಾ ಸಿಗೂದು ಸಂಶಯಾನ. ನಾಳೆ ಪೆನ್‌ಶನ್ ಆದಾಗ ತಲೀಮ್ಯಾಲೆ ಒಂದು ಸೂರು ಇರದಿದ್ದರ ದೇವರೇ ಗತಿ! ಈಗ ಕೊಡು ಏಳ್ನೂರು ರೂಪಾಯಿ ಮನೀ ಬಾಡಿಗಿ ಆಗ ಸಾವಿರ ಮ್ಯಾಲೆ ಆಗಿರ್ತದೋ ಏನೋ. ಬಾಡಿಗಿ ಕೊಟ್ಟ ಮ್ಯಾಲೆ ಹೊಟ್ಟಿಗಿ ಏನು ಉಳದೀತು. ಮಕ್ಕಳಿಗೆ ತಮ್ಮ ಜೀವನಾನ, ಭಾರ ಆಗಿರೂವಾಗ ನಾವು ಒಜ್ಜೆ ಹಾಕಬೇಕ? ಪದ್ಮಾಳ ಮನಸ್ಸು ಕುದಿಯುವ ನೀರಿನಂತೆ ಸಳ ಸಳ ಹೊಯ್ದಾಡುತ್ತಿತ್ತು.

ನಿಧಾನವಾಗಿ ಕೈ ಚಾಚಿ ಲಕೋಟೆಯನ್ನೆತ್ತಿ ಪರ್ಸನಲ್ಲಿ ಹಾಕಿದಳು. ಪದ್ಮಾಳ ಗಂಟಿಕ್ಕಿದ, ಹುಬ್ಬು ನೇರವಾದವು. ಶಾಕ್ ಹೊಡೆದವನಂತೆ ಅವಳನ್ನೇ ದಿಟ್ಟಿಸುತ್ತಿದ್ದ ಹುಲ್ಲೂರ ಮುಗುಳ್ನಕ್ಕ. ಅಂತೂ ಕೊನೆಗೆ ಮೇಡಂ ತಮ್ಮ ಹಾದಿಗೆ ಬಂದಳೆನ್ನುವ ಸಮಾಧಾನ ಅವನಿಗೆ.

ಪದ್ಮಾ ಕೊಟ್ಟ ಕವರನ್ನು ಆತುರದಿಂದ ಬಿಚ್ಚಿದ ಕಾಶೀನಾಥ. ಐದು ನೂರರ ನೋಟು ಹಿಡಿದು ಹೆಂಡತಿಯತ್ತ ನೋಡಿದ. ಗಂಡನ ದೃಷ್ಟಿ ಎದುರಿಸದೆ ಪದ್ಮಾ ಎಲ್ಲ ವಿವರಿಸಿ ಹೇಳಿದಳು. "ಆಸೇಕ ಬಿದ್ದು ಈ ಹಣಾ ತೊಗೊಂಡೆ. ಆದರ ಯಾಕೋ ನನ್ನ ಮನಸ್ಸಿಗೆ ಸಮಾಧಾನ ಇಲ್ಲರಿ."

"ಎಲ್ಲಾರೂ ತೊಗೊಳ್ಳೊವುುಂದ ನಾನು ಲಂಚಾ ತಿಂದರ ತಪ್ಪೇನಿಲ್ಲಾ ಅನ್ನೊ ತರ್ಕ ಖರೇ. ಆದರ ಪದ್ದೂ, ಹಣಕ್ಕಿಂತ ಮನಸ್ಸಿನ ಶಾಂತಿ ಮುಖ್ಯ ಹೌದಲ್ಲೊ. ಮಕ್ಕಳ ಮನಸ್ಸಿಗೆ ಸಂತೋಷಾ ಕೊಡಲಿಕ್ಕೆ ನಾವು ನಮ್ಮ ನೆಮ್ಮದಿ ಕಳಕೋಬಾರದು. ನಿನ್ನ ಆತ್ಮಸಾಕ್ಷಿ ಒಪ್ಪೊ ಹಾಂಗ ಕೆಲಸ ಮಾಡು ನಾನು ಇವರಾಗ ಮತ್ತೇನೂ ಹೇಳೂದಿಲ್ಲಾ."

ಗಂಡನ ಮಾತುಗಳನ್ನು ಮೆಲುಕು ಹಾಕುತಿದ್ದ ಪದ್ಮಾ ಎಷ್ಟೋ ಹೊತ್ತು ಹಾಸಿಗೆಯಲ್ಲಿ ಹೊರಳುತ್ತಿದ್ದಳು.... ಕೋಮಲವಾದ ಬಿಳಿಯ ಮುಂಗೈಗೆ ಬಂಗಾರಲೇಪನದ ಸುಂದರವಾದ ಪುಟ್ಟ ವಾಚು—ಸರಿತಾ ಸಂತೋಷ ದಿಂದ ತನ್ನ ಹೆಗಲ ಮೇಲೆ ಕೈ ಇಟ್ಟು ಬಗ್ಗಿ ಕೆನ್ನೆಗೆ ಮುತ್ತು ಕೊಡುತ್ತಿದ್ದಾಳೆ. ಅರೇ ಯಾರು ? ಯಾರವನು ? ಕಳ್ಳ ಕಳ್ಳಾ ಹಿಡೀರಿ ಸರೀತಾನ ವಾಚು ಎಳಕೊಂಡಾ ಹಿಡೀರಿ ಕಳ್ಳಾ. ಅಯ್ಯಾ ಸರಿತಾ, ಏ ಸರಿತಾ, ಎಲ್ಲ್ಯದಾಳ ಸರಿತಾ. ಸರಿತಾ ಅವನ ಹಿಂದೆ ಓಡಿ ಹೋದಳಲ್ಲರೀ ಯಾರೂ ಇಲ್ಲಾ ಇಲ್ಲೆ. ಆಂ ಯಾರು ಓಡಿ ಹೋದಾಕಿ ? ಸರಿತಾ ಅಲ್ಲಾ, ಲಕ್ಷ್ಮೀ ನಮ್ಮ ಗುಡ್ಯಾಗಿನ ಲಕ್ಷ್ಮೀ, ಲಕ್ಷ್ಮೀ ಎಲ್ಲಿ ಮಾಯ ಆದಳು ? ಗರ್ಭ ಗುಡಿಯೊಳಗೆ ದೇವೀನ ಇಲ್ಲಾ. ಲಕ್ಷ್ಮೀ ಎಲ್ಲಿ ಹೋದಿ ? ಯಾಕ ಕಾಣವೊಲ್ಲಿ ಅಪ್ಪ ಅವ್ವ ನೆಲಕ್ಕೆ ಬಿದ್ದು ಬೋರಾಡಿ ಅಳಾಕ ಹತ್ಯಾರ ಲಕ್ಷ್ಮೀ ಬಾ. ನಮ್ಮನ್ನ ಬಿಟ್ಟು ಹೋಗಬ್ಯಾಡ ಬಾ...............

"ಪದ್ದೂ ಯಾಕ ಪದ್ದೂ, ಕನಸು ಬಿತ್ತೇನು ? ಹಾಂಗ ಯಾಕ ಚೀರಿದಿ ? ಕೆಟ್ಟ ಕನಸು ಬಿತ್ತೇನು ?" ಗಂಡನ ಕರೆಗೆ ಎಚ್ಚತ್ತ ಪದ್ಮಾ ಥರ ಥರ ನಡುಗುತ್ತಿದ್ದಳು. ಬೆವರಿನಿಂದ ತೊಯ್ದು ತಪ್ಪಡಿಯಾಗಿ, ಗಂಟಲು ಒಣಗಿ ಮಾತು ಬಾರದೆ, ಗಂಡನ ಹೆಗಲಿಗೆ ಒರಗಿ ಅತ್ತಳು. ಹೆಂಡತಿಯ ಅಳಲನ್ನು ತಿಳಿದಿದ್ದ ಕಾಶೀನಾಥ ಮೌನವಾಗಿ ಬೆನ್ನು ಸವರಿದ. ಹೊಸ ವಾಚು ಕಟ್ಟಿಕೊಂಡ ಮಗಳ ಸಂತೋಷಕ್ಕೆ ಮೂಕಳಾಗಿ ಸ್ಪಂದಿಸಿದ್ದರೂ ಪದ್ಮಳ ಆತ್ಮಸಾಕ್ಷಿ ಎಚ್ಚತ್ತಿತ್ತು.

ದಿನಾಲು ಕಾಶೀನಾಥನಿಗೆ ಸ್ಕೂಟರ್ ನಿಧಾನವಾಗಿ ಬಿಡಲು ಹತ್ತಾರು ಸಲ ಎಚ್ಚರಿಸುತ್ತಿದ್ದಳು. ಅನಾಹುತವನ್ನು ಊಹಿಸಿ ಅವಳ ಎದೆ ಡವ ಡವ ಎನ್ನುತಿತ್ತು. ಆಫೀಸಿನವರೆಲ್ಲ ತನ್ನನ್ನೇ ನೋಡುತ್ತಾರೆ. ಏನೋ ಮಾತ

ನಾಡಿಕೊಂಡು ನಗುತ್ತಾರೆ ಎನ್ನುವ ಅಸುಮಾನದಿಂದ, ಆವರೊಡನೆ ಮೊದಲಿನಂತೆ ಸರಳವಾಗಿ ಇರಲು ಅವಳಿಂದ ಸಾಧ್ಯವಾಗದೇ ಹೋಯಿತು. ಆಫೀಸ್ ಕೆಲಸದಲ್ಲಿ ತಪ್ಪುಗಳಾಗ ಹತ್ತಿದವು. ಸಾಹೇಬರ ಮುಂದೆ ನಿಂತಾಗ ಏನು ಕೇಳುವರೋ ಎಂದು ಗಾಬರಿಯಾಗಿ ಕಾಲು ನಡುಗಿ ತಪ್ಪು ಮಾಹಿತಿ ಕೊಡುವಳು. ಮೆಮೊ ಬಂದಾಗ ಕಣ್ಣೀರು ಮರೆ ಮಾಡಲು ಲ್ಯಾಟ್ರಿನ್‌ಗೆ ಹೋಗಬೇಕಾಗಿತ್ತು. ಮನೆಯಲ್ಲೂ ಅಷ್ಟೇ ಯಾವ ಕೆಲಸದಲ್ಲಿಯೂ ಗಮನವಿಲ್ಲ, ಶಿಸ್ತಿಲ್ಲ. ಅಸಹನೆ, ಸಿಟ್ಟು ಹೆಚ್ಚಾಗುತ್ತಿತ್ತು. ಕಾಶೀನಾಥ ಮೂಕ ಪ್ರೇಕ್ಷಕನಾಗಿದ್ದ. ಅವಳ ಸಮಸ್ಯೆ ಅವನಿಗೆ ಗೊತ್ತಿದ್ದರೂ ಪರಿಹಾರ ಹೊಳೆದಿರಲಿಲ್ಲ. ಒಂದು ದಿನ ಅನಿರೀಕ್ಷಿತ ಘಟನೆ ನಡೆಯಿತು.

ಕಾಲೇಜಿನಿಂದ ತಡವಾಗಿ ಬಂದ ಸರಿತಾಳ ಮುಖ ಬಾಡಿತ್ತು. ಕಣ್ಣು ಕೆಂಪಾಗಿದ್ದವು. ತಿಂಡಿ ತಿನ್ನದೆ ತಲೆನೋವೆಂದು ಮಲಗಿಬಿಟ್ಟಳು. ತನ್ನ ಚಿಂತೆಯಲ್ಲಿ ಪದ್ಮಳೂ ಅಲಕ್ಷ್ಯ ಮಾಡಿದಳು. ಮರುದಿನ ವಿಷಯ ಹೊರಬಿತ್ತು. ಅವಳ ಪುಟ್ಟ ವಾಚು ಎಲ್ಲಿಯೋ ಬಿದ್ದುಹೋಗಿತ್ತು. ಕಾಲೇಜಿನಲ್ಲೆಲ್ಲ ಹುಡುಕಾಡಿಯೇ ಬಂದಿದ್ದಳು. "ಅವ್ವಾ, ಎಷ್ಟು ಗಟ್ಯಾಗಿ ಕಟ್ಟಿದ್ದೆ, ಆದರೂ ನನ್ನ ವಾಚು ಯಾವಾಗೋ ಬಿದ್ದು ಹೋಗೇದ. ಹೊಸಾ ವಾಚು ಕಳದು ಬಿಟ್ಟೇ ಸಿಟ್ಯಾಗ ಬ್ಯಾಡಾ ಅವ್ವಾ. ಇನ್ನೊಮ್ಮೆ ಹಿಂಗ ಮಾಡೂದಿಲ್ಲಾ. ವಾಚು ಬೇಕು ಅಂತ ನಿಮ್ಮನ್ನ ಕಾಡೂದಿಲ್ಲಾ" ಮಗಳು ಅಚ್ಚರಿಯಿಂದ ದಿಟ್ಟಿಸುತ್ತಿರುವಾಗ ಪದ್ಮಾಳ ಮುಖದ ಮೇಲಿನ ನೆರಳು ಸರಿದು ಹೋಯಿತು.

"ಅಳಬ್ಯಾಡಾ ಸರಿತಾ, ಸುಮ್ಮನಾಗು. ನನಗೆ ಸಿಟ್ಟು ಬಂದಿಲ್ಲಾ, ಕೆಟ್ಟ ಅನಿಸಿಲ್ಲಾ. ಆದರ ನನ್ನ ತಲಿ ಮ್ಯಾಲಿನ ಭಾರ ಇಳದು ಹಗುರ ಆಗೇದ. ವಾಚು ಹೋದರ ಹೋಗಲಿ ಬಿಡು, ನೀ ಅಳಬ್ಯಾಡಾ." ಪದ್ಮಾ ಮಗಳನ್ನು ಹತ್ತಿರ ಎಳೆದು ಅಪ್ಪಿಕೊಂಡಳು.

ಗುಳದಾಳಿ

ಕಪ್ಪು ಆಕಾಶದಲ್ಲಿ ಥಳ ಥಳ ಮಿಂಚುವ ಬಿಳಿ ಚಿಕ್ಕೆಗಳು. ಅವ್ವನ ಕಸೂತಿಯಿದ್ದ ಕರಿ ಚಂದ್ರಕಾಳಿಯ ಸೀರೆ ನೆನಪಾಗಿತ್ತು ರೋಜಿಗೆ. ದಿಟ್ಟಿ ಸುತ್ತಿದ್ದರೆ ಇವು ಕಣ್ಣು ಮಿಟುಕುಸುತ್ತಿವೆಯಲ್ಲ. ಸೋಜಿಗದ ಹಿಂದೆಯೇ ದುಃಖ ತನ್ನನ್ನು ಆಣಕಿಸುತ್ತಿದೆಯೇ ? ಥಟ್ಟನೆ ದೃಷ್ಟಿ ನೆಲಕ್ಕೆ ತಿರುಗಿಸಿದಳು. ಲೈಟಿನ ಬೆಳಕಿನಲ್ಲಷ್ಟೇ ಬಣ್ಣ ಬಣ್ಣಗಳ ಹೂವಿನ ಗುಂಪು. ಕಪ್ಪು ಹಿನ್ನೆಲೆಯಲ್ಲಿ ಹಸಿರು ಪೊದೆ. ತಂಪಿಗೆ ನೀರೆರೆಯುವ ಕಾರಂಜಿ. ದಿನವೂ ಇದೇ ಜಾಗದಲ್ಲಿ ಕುಳಿತು ಮೈ ಮರೆಯುವಳು ರೋಜಿ.

'ಹೊಲದ ಮನೆಯ ಹಿತ್ತಲಿನಲ್ಲಿ ಪುಟ್ಟ ತೋಟ. ಅವ್ವ ಹಾಲು ಕೊಡುವ ಅವ್ವಾ ಅವರ ಮನೆಗಳಲ್ಲೆಲ್ಲ ಕೇಳಿ– ಕದ್ದು, ತಂದು ಹಚ್ಚಿದ ತರತರದ ಹೂವಿನ ಗಿಡಗಳು. ಎಮ್ಮೆಗೆ ನೀರು ಕುಡಿಸುವಾಗ ಅವ್ವನ ಕಣ್ಣು ತಪ್ಪಿಸಿ ಗಿಡಗಳಿಗೆ ನೀರು. ಬಸ್ಯಾ ನಾಗ್ಯಾ ನೋಡಿದರೆ ಸಾಕು. ಅವ್ವನಿಂದ ಅಂದು ಮೈ ತುಂಬ ಏಟು. ದೂರದ ಹಳ್ಳದಿಂದ ನೀರು ಹೊತ್ತು ತರುವವರೇ ತಮ್ಮಂದಿರು, ತನಗೂ ನಾಲ್ಕಾರು ದಿನ ನೀರು ತರುವ ಶಿಕ್ಷೆ ಅವ್ವನ ಕೋರ್ಟಿನಲ್ಲಿ. ಅದೊಂದೇ ಕೆಲಸವಲ್ಲ ತನಗೆ. ಅಂಗಳ ಉಡಗುವುದು, ಶಗಣಿ ಕಸ ಬಳಿಯುವುದು, ಕಟ್ಟಿಗೆ ಮಾಡುವುದು, ರೊಟ್ಟಿ ಬಡಿಯುವುದು ಎಲ್ಲಾ ಇದ್ದದ್ದೇ. ಬೆಳಗಿನಿಂದ ಸಂಜೆಯವರೆಗೂ ದುಡಿತ. ತೋಟದ ತುಂಬಾ ಅರಳಿದ ಮಲ್ಲಿಗೆ, ಜಾಜಿ, ಗುಲಾಬಿ, ಹೆಸರು ತಿಳಿಯದ ಹೂಗಳನ್ನು

ನೋಡುತ್ತಿದ್ದರೆ ದಣಿವು ದೂಃಖ ಮಟಾಮಾಯ. ನೋಡುತ್ತಿದ್ದರೆ ಎರಡು ಕಣ್ಣು ಸಾಲವು.

ಇದೇನು ಒರಟು ಬೆರಳಿನ ಕರಿಕೈ ಮುಂದೆ ಬರುತ್ತಿದೆ. ಅರೆ! ಗುಲಾಬಿಗೇ ಕೈ ಹಾಕಿದೆ. ಉಹುಂ ಅದನ್ಯಾರು ಕೀಳಬಾರದು. ಗಬಕ್ಕನೆ ಆ ಕೈ ಗಟ್ಟಿಯಾಗಿ ಹಿಡಿದಳು. ಗುಲಾಬಿಯ ಮುಳ್ಳು ತರುಚಿ ಬೆರಳಿನಿಂದ ಕೆಂಪು ಮಣಿಕ್ಯವೊಂದು ಎದ್ದು ತಟತಟ ಗಲಾಬಿಯ ಮೇಲೆ ಉರುಳಿತು.

ಏ ಚಿನ್ನೀ ಏನs ನೂವಾತೇನ ? ರಗತ ಭಾಳ ಬರಾಕ ಹತ್ತೇತಿ. ಅವಳ ಬೆರಳು ಬಾಯುಲ್ಲಿಟ್ಟು, ಚೀಪಿದ ಮಲ್ಲ. ನಾಚಿಕೆಯಿಂದ ಕೈ ಕೊಸರಿದಳು. ಓಡಿ ಹೋಗಬೇಕೆಂದರೆ ಗಂಡ ಗಟ್ಟಿಯಾಗಿ ಕೈ ಹಿಡಿದಿದ್ದ. ಚಿನ್ನಿ ನೋವು ಕಡಿಮೆ ಆತೇನ ? ಅವಳಲ್ಲೆ ಪ್ರೀತಿಯ ದೃಷ್ಟಿ ನಟ್ಟು ಕೇಳಿದ್ದ ಮಲ್ಲ.

ಗುಲಾಬಿ ಹೂ ಗಿಡದಾಗ ನೋಡಾಕ ಛಂದ, ಇನ್ನೊಮ್ಮೆ ಹರೀಬ್ಯಾಡಾ.

ನಾ ನಿನ್ನ ಜಡ್ಯಾಗ ಹಾಕಲಿಕ್ಕೆ ಹರೀತಿದ್ದೆ ಚಿನ್ನಿ.

ಉಹುಂ. ಹರದು ಹಾಕ್ಕೊಂಡರ ಲಗೂನ ಬಾಡಿ ಹೋಗ್ತದ. ನನಗೆ ಅದು ಸೇರಂಗಿಲ್ಲಾ.

ಹಾಂಗ ಆಗಲಿ, ನಾನೂ ಹರಿಯೂದಿಲ್ಲಾ. ನೀ ಹೇಳಿದಾಂಗ ಮಾಡ್ತೇನಿ. ನಿನ್ನ ನೋಡಾಣಾ ನನಗೆ ಭಾಳ ಪ್ರೀತಿ ಬರ್ತದ. ಹಿಡಿದು ಮುದ್ದಾಡಬೂ ಹಾಂಗ ಆಗ್ತದ, ನೀ ನಮ್ಮೂರಿಗೆ ಯಾವಾಗ ಬರ್ತೀ ಚಿನ್ನಿ....

'ಅವ್ವ ಹೇಳ್ತಾಳ ನಾ ಇನ್ನೂ ದೊಡ್ಡಾಕಿ ಆಗಬೇಕಂತ. ಅವ್ಯಾಗ ಬರ್ತೀನಿ. ನಿಮ್ಮ ಮನ್ಯಾಗೂ ಹಿಂತಾದ ತ್ವಾಟಾ ಮಾಡ್ತೇನಿ ಹೂವಿಂದು. ಹೂ ನನಗ ಭಾಳ ಸೇರತೈತಿ.

ನೀನs ಹೂ ಇದ್ದಂಗ ಅದೀ, ಬಗ್ಗಿ ಅವಳ ಗಲ್ಲಕ್ಕೆ ಮುತ್ತು ಕೊಟ್ಟ ಮಲ್ಲ.

ಕೆನ್ನೆಯ ಮೇಲೆ ಕೈಯಾಡಿಸಿದಳು ರೋಜಿ, 'ಹೋ ಯಾರವರು?' ಬೆಚ್ಚಿ ಅತ್ತ ತಿರುಗಿದಳು. ಪಾರ್ಕಿನ ಗೇಟಿನಿಂದ ಲಾಠಿ ಬೀಸುತ್ತ ರಂಗಪ್ಪ ಬರುತ್ತಿದ್ದ.

ನೀ ಏನು ರೋಜಿ ರಾತ್ರಿ ಭಾಳ ಆತು. ಇನ್ನ ಮನೀಗೆ ಹೋಗು. ದೀಪಾವಳಿ ಅವಸಾಸಿ. ಇಂದ ನಾನು ನಿನ್ನ ಮನೀಗೆ ಬರೂದಿಲ್ಲಾ. ನಿನ್ನನ

ದಿನಾನೂ ಮನ್ಯಾಗ ಇರದಿದ್ದರೆ ಹೇಣ್ತಿ ಜಗಳಾಡತಾಳ. ನಿನಗ ಗೊತ್ತೈತಲ್ಲ. ಅವನ ಖಾಕಿ ಬಟ್ಟೆ, ಕೈ ಕೋಲು ಕಣ್ಮರೆಯಾಯಿತು. 'ನನ್ನ ಮನೀಗೆ ಬಂದಿದ್ದರ ನಾ ಜಗಳಾಡಬೇಕಾಗತಿತ್ತು'. ಎಂದುಕೊಳ್ಳುತ್ತ ಉತ್ಸಾಹವಿಲ್ಲದೆ ರೋಜಿ ಕಾಲು ಎಳೆದಳು.

"ಈ ಒಂದ ರಾತ್ರಿ ಯಾರೂ ಬರಬಾರದು. ತಾನೊಬ್ಬಳs ಇರಬೇಕು. ಒಬ್ಬಳs ಮಲಗಬೇಕು. ಬ್ಯಾರೆ ಗಿರಾಕಿ ಬಂದರ ತಿರಿಗಿ ಕಳಿಸೇನು, ಆದರ ರಂಗಪ್ಪಗ ಹ್ಯಾಂಗ ಬ್ಯಾಡಾ ಅನ್ನೂದು. ನಡದು ನಡದು ಸಾಕಾಗಿ ಹೊಟ್ಟ್ಯಾಗ ಕೂಳು ಇಲ್ಲ. ಬವಳಿ ಬಂದು ರಸ್ತೇದಾಗ ಬಿದ್ದಾಕಿನ್ನ ಎಬ್ಬಿಸಿ ತಂದು ಒಂದ ಸೂರು ಮಾಡಿ ಕೊಟ್ಟಾಂವನ ರಂಗಪ್ಪ. ಮೊದಮೊದಲ ತನ್ನ ಬಿಳಿ ತೊಗಲು, ಛಂದಾ ನೋಡಿ ಹುಚ್ಚಾಗಿಬಿಟ್ಟಿದ್ದ. ಯಮುನಕ್ಕ ಬಂದು ಹಾದೀ ರಂಪು ಬೀದಿ ರಂಪು ಮಾಡಿ ಎಳಕೊಂಡ ಹೋಗಬೇಕಾಗಿತ್ತು. ಮನ್ಯಾಗ ಮುತ್ತಿನಂತಾ ಹೆಂಡ್ತಿ, ಮೂರು ಮಕ್ಕಳು ಇದ್ದರೂ ರಂಗಪ್ಪಗ ನನ್ನ ಮ್ಯಾಲೆ ಆಸೇ. ಈ ಗಂಡ್ಸರ ಗುಣಾನ ಇಚಿತ್ರ. ಮನಸ ಎತ್ತಾಗ ಬೇಕ ಅತ್ತಾಗ ಹರಿಬಿಡತಾರ. ಆದಕೇನ ಲಂಗು-ಲಗಾಮು ಇಲ್ಲಾ. ನಸ ಮನೀ ಮಾಲಕರ ಏನು- ತಾ ಓದಿದರ ಕಲತಂವಾ. ಸೂಟು ಬೂಟು ಹಾಕ್ಕೊಂಡ ದರಬಾರ ಮಾಡಿಕೋತಾ ಅಡ್ಯಾಡಂವಾ. ಹೇಣ್ತಿ ತವರ್ಮನಿಗೆ ಹ್ವಾದ ಕೂಡ್ಲೆ ನಸ ಹಂತ್ಯಾಕ ಬರತಾನ. ಮನೀ ಫುಕಟ ಕೊಟ್ಟಾನ. ಪತ್ತಲಾ, ಗಂಧೆಣ್ಣಿ, ಪಾವಡರ ಅದೂ ಇದೂ ತಂದುಕೊಡ್ತಾನ. ರಂಗಪ್ಪ ಖರ್ಚಿಗೆ ಕೊಡತಾನ. ನಂದು ನಾಗವ್ವಂದು ಇಬ್ಬರ ಹೊಟ್ಟಿ ತುಂಬತೈತಿ. ಬ್ಯಾರೆ ಗಿರಾಕಿ ಬಂದಾಗ ಮನಸ ಬಂದರ ಕರಕೊಳ್ಳಾಕಿ. ಇಂದ ರಾತ್ರಿ ಅಂತೂ ಯಾವ ರಾಜಾ ಮಹಾರಾಜ ಬಂದರೂ ಒಳಗೆ ಕರ್ಯಾಕಿ ಅಲ್ಲಾ.

'ಸುಂಯ್ಞ್, ತಲೆ ಎತ್ತಿದಳು ರೋಜಿ. ವೇಗವಾಗಿ ಹಾರಿಹೋದ ಬಾಣ ಆಕಾಶದಲ್ಲೆ ಸಿಡಿದು ಬಣ್ಣಗಳೆಲ್ಲ ಚದುರಿ ಕಪ್ಪಿನಲ್ಲಿ ಮಾಯವಾದವು, ಅವಳ ಕನಸುಗಳ ಹಾಗೆಯೇ. ಎಲ್ಲರ ಮನೆಗೆ ತಳಿರು- ತೋರಣ, ರಂಗೋಲಿ, ಹೊಸಿಲಿಗೆ ದೀಪಗಳ ಸಾಲು. ಆಕಾಶಬುಟ್ಟಿ, ಹಿಗ್ಗು, ಕೇಕೆ, ಸಂಭ್ರಮ, ಮಧುರವಾಸನೆ, ಸಿಲ್ಕ ಸೀರೆ, ಹೊರೆ ಹೂವು ಥಳಥಳಗಟ್ಟುವ ಹೆಂಗಳೆಯರು ಆಕಾಶದ ನಕ್ಷತ್ರಗಳೆಲ್ಲ ಭೂಮಿಗೇ ಬಂದಂತೆ ಬೆಳಕಿನ ಸರಮಾಲೆ.

ಹೆಜ್ಜೆ ಸಪ್ಪಳ ಕೇಳಿದ ನಾಗವ್ವ ಕೇಳಿದಳು. "ರೋಜಕ್ಕಾ ಊಟಾ ಮಾಡ್ತೀಯೋನವ್ವಾ, ಮದ್ದಿನದಾಗೂ ತಾಟ ಬಿಟ್ಟಿ, ಎದ್ದ ಹ್ಯಾದಿ ಹೊಟ್ಟಿ ಹಸದಿದ್ದೀತ." ಹತ್ತಿರ ಬಂದು ಕಕ್ಕುಲತೆಯಿಂದ ಮೈ ತುಂಬ ಕೈಯಾಡಿಸಿದಳು.

"ಬ್ಯಾಡ ಯತ್ತೀs ನೀ ಉಂಡ ಬಾಗಲಾ ಹಾಕ್ಕೊಂಡ ಮಕ್ಕೋ. ಯಾರ ಬಂದರೂ ತಗೀಬ್ಯಾಡಾ."

ಕೋಣೆಯಲ್ಲಿ ಇದ್ದ ದೀಪವನ್ನು ಆರಿಸಿ, ನಕ್ಷತ್ರಗಳ ಮಿಂಚು, ದೀಪಗಳ ಬೆಳಕು, ಹೂವುಗಳ ಅಂದ. ತನ್ನ ಕನಸುಗಳನ್ನೇ ಹಾಸಿ ಹೊದ್ದುಕೊಂಡು ಗಟ್ಟಿಯಾಗಿ ಮುಸುಕು ಬಿಗಿದು ಇನ್ನೂ ಕತ್ತಲಾದಳು ರೋಜಿ.

'ತಂದು ಅನ್ನೂ ಒಂದ ಜೀಂವಾನೂ ಹತ್ತರ ಇಲ್ದಾಗ ಬಿಕ್ಕೀ ಬೇಡಿ ಕೋತ ತನ್ನ ಬಾಗಲಕ ಬಂದ್ಲು ನಾಗವ್ವ. ವಯಸ್ಸಾದಾಕಿ. ಬಲಗೈ ಮುರದು ಸೊಟ್ಟಾಗಿತ್ತು, ದಿಕ್ಕಿಲ್ದಾಕಿನ್ನ ಇಟಗೊಂಡರ ತನಗೂ ಜೋಡ ಆಗ್ತಾಳ ಅನ್ನಿಸ್ತು. ಎಲಿಗೆ ಅಡಿಕೆಗೆ ಅಂತ ಹೇಳಿ ರೊಕ್ಕಾ ತೊಗೊಂಡು ಬರಬರತ ಆಕಿ ರಂಗಪ್ಪನ ಪೈಕೀನೆ ಆಗಿಬಿಟ್ಲು, ಮನೀಗೆ ಯಾರ ಬಂದ್ರು ಹೋದ್ರೂ ರಂಗಪ್ಪಗ ಪರದಿ ಮುಟ್ಸಾಕ ಹತ್ತಿತು. ಮಾಲಕ ತನ್ನ ಹಂತೀಲೆ ಬರೂ ಸುದ್ದಿ ತಿಳಿದ ದಿನಾ ಜಿಗ್ಗಿ ಒದರಾಡಿದಾ ಸಿಟ್ಟಾಗಿ. ಆದ್ರೂ ಅದೇನ ಮಾಯಾಸೋ ಮಕ್ಕೊಂಡ ಎದ್ದ ಹೋಗೂ ಮುಂದ ಸುಮಾಕ ಹೋದಾ. ಒಂದೊಂದ ತಿಂಗ್ಳು ಖರ್ಚಿಗೆ ಕೊಡುದs ತಪ್ಪಸತಿದ್ದಾ. ಬ್ಯಾರೆ ಗಿರಾಕಿನ್ನ ಕರಕೊಳ್ಳಾಕ ಬೇಕಾತು. ಬಂದವರಿಗೆಲ್ಲಾ ಹೂಂ ಅನ್ನಾಕಿ ಅಲ್ಲಾ ತಾನೂ. ತನ್ನ ರೂಪ ಎಲ್ಲಾರ ಕಣ್ಣೂ ಕುಕ್ಕತೈತಿ. ಇದs ಅಲ್ಲಾ ತನ ಬಾಳೀ ಹಾಳ ಮಾಡಿದ್ದು. ತವರ್ಮನೀ, ಗಂಡನ ಮನೀ ಬಳಗಾ ಎಲ್ಲಾ ದೂರ ಮಾಡಿದ್ದು.

ದಡ ದಡ ನೂಕುವ ಸಪ್ಪಳ. 'ಯಾಂವಗ ತೆವಲು ಎತ್ತ್ಯೋ ಹಿಂತಾ ಹಬ್ಬದ ದಿನಾ' ನಾಗವ್ವ ಗೊಣಗಿದಳು. 'ಸುಮಾಕ ಇರು ಯತ್ತೀs ಏಳ ಬ್ಯಾಡಾ.' ಬಾಗಿಲ ಹೊರಗೆ ಕುಡಿದು ಬಂದು ಗಲಾಟೆ ಮಾಡುವ ಗಂಡಸು! ನೆನಪಿನ ಈಟಿ ಇರಿಯಿತು. ಮೊದಲ ಗಂಡಿನ ಸಹವಾಸ. ಮೇಸ್ತ್ರಿಯ ರಾಕ್ಷಸ ಹಿಡಿತ. ಹಿಚುಕಾಟ. ಕಡಿತ, ನೋವು, ನರಳಾಟ. ಚೀರಬೇಕೆಂದರೂ

ತುಟಿಗೆ ತುಟಿಯ ಅಂಚು. ಸಿಗರೇಟು ಮೈಬೆವರಿನ ಗಬ್ಬುನಾತ. ಹೊಟ್ಟೆ ನೋವು, ವಾಕರಿಕೆ. ನೆಲಕ್ಕೆ ಬಿದ್ದಾಗ ನೋವು ರಕ್ತವಾಗಿ ಹೊರಚಿಮ್ಮಿತ್ತು. 'ಇದೆಲ್ಲಾ ಆದದ್ದಽ ದೀಪಾವಳಿ ಹಬ್ಬದಾಗ. ಅದಕ್ಕ ಈ ಹಬ್ಬ ಬಂದರ ನನಗ ಬೆಳಕು ಕಾಣಾಂಗಿಲ್ಲ, ಕತ್ತಲ ತುಂಬತದ ಒಳಗ ಹೊರಗ ಕೂಡೇ. ಬೆಳಕ ಹುಡಿಕ್ಕೊಂಡು ಹೋಗದಿದ್ದರ ಹುಚ್ಚಽ ಹಿಡೀತದ ನನಗ.

ನನ್ನ ಮದುವಿ ಆದಾಗ ಒಂಬತ್ತುವರ್ಸದಾಕಿ ಇದ್ದೆ. ಮದುವ್ಯಾಗ ನನ್ನ ಗಂಡ ಮಲ್ಲನ್ನ ನೋಡಿದ್ದು. ಆಗ ಚಿಗರಮೀಸಿ ಒಡೀತಿದ್ದ. ಕಪ್ಪ ಇದ್ದರೂ ಕಳಾ ಇದ್ದಾ. ಉದ್ದನ್ನ ಮೂಗಿನ ಹಂತ್ಯಾಕ ಒಂದ ಕರೇ ನರೋಲಿ ಇತ್ತು. ಹೊಲಗೆಲಸಕ್ಕ ಸಹಾಯ ಆಗೂ ನೆಂವಾ ಮಾಡಿ ನನ್ನ ನೋಡಾಕ ನಮ್ಮೂರಿಗೆ ಯಾವಾಗರೆ ಬರತಿದ್ದಾ. ಮದಿವಿ ಗಂಡ ಅಂದರ ಏನ ಅನ್ನೂದ್ ನನಗ ಗೊತ್ತ ಇಲದಿದ್ರೂ ಅಂವಾ ಬಂದರ ಸಂತೋಸ ಆಗತಿತ್ತು. ಅಂವಾ ನಗೂದ ಎಷ್ಟು ಛಂದ. ಮಾತ ಎಷ್ಟು ಸಂವಿ ಅನಸತಿತ್ತು. ಅಂವಗೂ ಹಾಂಗ ಆಗತಿತ್ತಂತ. ಒಂದ ದಿನಾ ಕೇಳಿದ್ದಾ.

'ನಿನ್ನ ತಂಗಿ ಕಲ್ಲವ್ವ, ನಾಗಣ್ಣ-ಬಸಣ್ಣ ಯಾರೂ ನಿನ್ನಷ್ಟ ಬೆಳ್ಳಗಿಲ್ಲಲ್ಲ. ನಿಮ್ಮವ್ವಂತೂ ಕರ್ರಗ ಹಂಚೀ ಕಡ್ಡಿ ಆಗ್ಯಾಳ. ಈ ಬಣ್ಣಾ, ಕಣ್ಣಿ, ಕೂದಲಾ ನಿನಗ ಹ್ಯಾಂಗ ಬಂತು?'

'ನಮ್ಮಪ್ಪನ್ನ ಹೋತಿರಬೇಕ ನಾನು.' ಅವ್ವ ಯಾರ ಮುಂದೋ ಹೇಳಿದ ಮಾತನ್ನ ಸಟ್ಟನ ಮಲ್ಲಗ ಹೇಳಿದ್ದೆ. 'ಈ ರೂಪಕ್ಕೆ ಮೆಚ್ಚಿ ನಮ್ಮವ್ವ ನಿಮ್ಮ ಮನೀತನಾ ಬಂದು ನನ ಹೊಟ್ಟ್ಯಾಗಿನ ಕೂಸು ಒಂದ ವ್ಯಾಳೆ ಉಳಿದಿದ್ದರ ಮೇಸ್ತ್ರಿನ್ನ ಹೆಣ್ಣು ಕೇಳ್ಯಾಳ' ಎಂದಿದ್ದ. ಹೋಲತಿತ್ತೋ ಏನೋ ನನ ಗಂಡ, ಮಕ್ಳು, ಸಂಸಾರ ಎಲ್ಲಾ ಹಾಳ ಮಾಡಿದ ಆ ಪಿಶಾಚಿ ಮೇಸ್ತ್ರಿ. ಹಾಳಾಗಿ ಹೋಗಲಿ ಅಂವಾ, ರವರವ ನರಕಾ ಕಾಣ್ಲಿ.

ಹಸಿದಿಂಬು ರೋಜಿಯನ್ನು ಪೂರ್ತಿ ಎಚ್ಚರಿಸಿತು. ತಟಕ್ಕನೆ ಹಾಸಿಗೆ ಬಿಟ್ಟೆದ್ದು ಗೂಡಿನಲ್ಲಿನ ಗಿಲೀಟಿನ ಗುಳದಾಳಿ ಕೊರಳಿಗೆ ಹಾಕಿಕೊಂಡು ಮತ್ತೆ ಹಾಸಿಗೆಯ ಮೇಲೆಯೇ ಗೋಡೆಗೊರಗಿ ಕುಳಿತಳು. 'ಏನಾರ ಬೇಕೇನವ್ವಾ ರೋಜಕ್ಕಾ ?' ಎಚ್ಚರವಾಗಿಯೇ ಇದ್ದ ನಾಗವ್ವ ಕೂಗಿದಳು. ರೋಜಿ ಉತ್ತರ ಕೊಡಲಿಲ್ಲ. ಕೈ ಗುಳದಾಳಿಯನ್ನೇ ಸವರುತ್ತಿತ್ತು. ತುಟಿಗಳು ಮಲ್ಲನ

ಜಪ ಮಾಡುತ್ತಿದ್ದನು. ಮೈ ಮೇಲೆ ಎಚ್ಚರವಿಲ್ಲದೆ ಎಷ್ಟು ಹೊತ್ತು ಹಾಗಿದ್ದಳೋ....

ಮತ್ತೆ ಯಾರೋ ಬಾಗಿಲು ಬಡಿದರು. ತಿಳಿಯದೆ ರೋಜಿಯ ಎದೆ ಬಡಿದುಕೊಂಡಿತು. ಕೈಗಳು ತಾಳಿಯನ್ನು ಇನ್ನಷ್ಟು ಗಟ್ಟಿಯಾಗಿ ಹಿಡಿದವು. ದೇಹ ಮಧುರವಾಗಿ ಕಂಪಿಸಿತು. ಸುಖದ ಅನುಭವದಿಂದ ಜೀವ ಹೊಯ್ದಾಡಿತು. ಚಿತ್ತ ಚಂಚಲವಾಗಿ, ನಿರ್ಧಾರ ಸಡಿಲಿತು. 'ಯತ್ತೀ ಯಾರ ಬಂದಾರ ನೋಡು, ಒಳಗೆ ಕಳಸ ಅವ್ರನ್ನ.'

ಬಂದವನ ಮುಖ ಸರಿಯಾಗಿ ಕಾಣುತ್ತಿರಲಿಲ್ಲ. ದೀಪವಿಲ್ಲದಿದ್ದರೂ ಕೋಣೆಯಲ್ಲಿ ಬೆಳಕಿತ್ತು. ಹತ್ತಿರ ಬಂದವನೇ ತುಂಬ ಹಸಿದವನಂತೆ ಅವಳನ್ನು ಅಪ್ಪಿಕೊಂಡ. ಎಂದೂ ಕಾಣದ ಸುಖದ ಮತ್ತು ಅವಳನ್ನೂ ಆವರಿಸಿತು. ಅವನ ದೃಢವಾದ ಬಾಹುಗಳ ಬಿಗಿ ಅಪ್ಪುಗೆಯಲ್ಲಿ ಕೇಳಿ ಮೈ ಮರೆತಳು ರೋಜಿ. ಯಾವ ಗಿರಾಕಿಯ ಜೊತೆಗೂ ಹೀಗೆ ಸ್ಪಂದಿಸಿರಲಿಲ್ಲ. ಸೋತು ಮಲಗಿದಾಗಲೂ ಅಪ್ಪುಗೆ ಸಡಿಲಿರಲಿಲ್ಲ. ಅವನ ಕೂದಲಲ್ಲಿ ಬೆರಳಾಡಿಸುತ್ತಿದ್ದಳು. ಕಣ್ಣು ಮುಚ್ಚಿ ಸುಮ್ಮನೆ ಮಲಗಿದ್ದವನ ಮುಖದ ಮೇಲೂ ಅವಳ ಕೈ ಆಡಿತು. ಮೂಗಿನ ಹತ್ತಿರ ಬಂದಾಗ ನರೋಲಿ ಸಿಕ್ಕಿತು. ಮತ್ತೆ ಮತ್ತೆ ಮುಟ್ಟಿ ಖಾತ್ರಿ ಮಾಡಿಕೊಂಡಳು.

"ಸಣ್ಣಾಂದಿರಂತ ನನ ಮಾರಿ ಮ್ಯಾಲೆ ಕರೇ ಚಿಕ್ಕಿ ಐತಿ." ಗಂಡಸು ಖುಷಿಯಿಂದ ಅವಳ ಕೆನ್ನೆ ಹಿಂಡಿದ.

"ನಿಮ್ಮ ಹೆಸರ ಏನು"

"ಮಲ್ಲಣ್ಣ ಅಂತ. ಹಾರೋಗೇರಿಯಂವಾ."

ಬೆಚ್ಚಿದ ರೋಜಿ ಎದ್ದು ಸೆರಗು ಸುತ್ತಿಕೊಂಡು ದೂರ ಸರಿದು ಕುಳಿತಳು.

'ಇಕಾ ಇಡಿ ಇದನ್ನು' ಇಪ್ಪತ್ತು ರೂಪಾಯಿ ನೋಟು ಚಾಚಿ ಹೇಳಿದ. ರೋಜಿ ಕೈ ನೀಡಲಿಲ್ಲ.

"ಹಬ್ಬಕ್ಕ ಶಾರಕ, ಬಂದಿದ್ದೆ. ರೊಕ್ಕ ಎಲ್ಲಾ ಖರ್ಚಾಗಿ ಹೋದ್ವು. ನಾಳೆ ಮತ್ತ ಬರ್ತೀನಿ. ಆವಾಗ ಪತ್ತ ತಂದ ಕೊಡ್ತೀನಿ. ನನ್ನ ನಂಬು."

'ನಿಮ್ಮ ಹೇಣ್ತಿ' ದನಿ ಸೋತಿತ್ತು.

"ಹೇಣ್ತಿ ಸತ್ತು ಆರಂ ತಿಂಗಳಾತು. ಎಡ್ಡ ಮಕ್ಕಳ್ನ ಬಿಟ್ಟು ಸತ್ಲು. ಇವತ್ತ ಯಾಕೋ ಭಾಳ ಬ್ಯಾಸರಾತು. ನಿನ್ನ ಹಂತ್ಯಾಕ ಬಂದೆ. ನಿನಗ ಎಷ್ಟ ಕೊಟ್ಟರೂ ಕಡಿಮಿ ಅನ್ನಾಕ ಹತ್ತೈತಿ. ನನ್ನ ನಂಬು, ನಾಳೆ ತರ್ತೀನಿ ರೊಕ್ಕಾ."

ರೋಜಿ ಕಣ್ಣುಗಳಲ್ಲಿ ನೀರು ತುಂಬುತ್ತಿತ್ತು. ಕತ್ತಲೆ ಎಲ್ಲ ಮರೆ ಮಾಡಿತ್ತು. ಗಂಟಲು ಸರಿಪಡಿಸಿಕೊಂಡು "ನಾಳೆ ಬಂದಾಗ ತರ್ರಿ ಈಗ ಬ್ಯಾಡಾ."

ಅಮಾವಾಸ್ಯೆಯ ಮರುದಿನ ಪಾಡ್ಯ. ಹೂವು, ಹಣ್ಣು, ಸಿಹಿಯೊಡನೆ ಬಂದ ಮಲ್ಲಣ್ಣ. ರೋಜಿಯ ಮನಸ್ಸು ತಡೆಯದೆ ಅವನ ಕಾಲುಗಳ ಮೇಲೆ ಬಿದ್ದು ಅತ್ತುಬಿಟ್ಟಳು. "ನಾನು....ನಾನು ನಿಮ್ಮ ಚಿನ್ನಿ." ಮಲ್ಲಣ್ಣ ಬಾಯಿ ತೆರೆದು ಕುಳಿತ.

ನಮ್ಮ ದೊಡ್ಡಪ್ಪನ ಮಗಳು ಭಾಳ ಜುಲುಮಿ ಮಾಡಿ ತನ್ನ ಗಂಡನ ಊರಿಗೆ ಕರಕೊಂಡ ಹ್ವಾದ್ಲು, ಅವರ ಊರಾಗ ಹನ್ನೆಡ್ಡ ವರ್ಸಕ ಒಮ್ಮೆ ದ್ಯಾಮವ್ವನ ಜಾತ್ರಿ ಆಗತಿತ್ತಂತ. ಮದಿವೀ ಸೀರಿ ಉಟಗೊಂಡು ಬಂಗಾರದ ಗುಳದಾಳಿ ಹಾಕ್ಕೊಂಡು ಹೋಗಿದ್ದೆ. ಅದೂ ಅವ್ವ ಜಗಳವಾಡಿ ಕೊಟ್ಟಿದ್ಲು. ಸಣ್ಣಾಕಿ ಒಬ್ಬಾಕೆ ಎಮ್ಮಿ ಮೇಸಾಕ ಅಡ್ಡಾಡ್ತಿ ಅಂತ ಹೇಳಿ ಬಂಗಾರದ ತಾಳಿ ತಗದಿಟ್ಟು, ಎರಡು ರೂಪಾಯಿ ಕೊಟ್ಟು ತಂದ ಗಿಲೀಟಿನ ತಾಳಿ ಹಾಕಿ ಕಳಸತಿದ್ಲು. ಸಂಭ್ರಮದಿಂದ ಜಾತ್ರಿಗೆ ಹೋಗಿ ಆಳಕೋತ ತಿರಿಗಿ ಬಂದೆ. ಆ ಗದ್ದಲದಾಗ ತಾಳಿ ಯಾರೋ ಕತ್ತರಿಸಿಬಿಟ್ಟಿದ್ರು.

'ಏಳೆಂಟು ನೂರು ರೂಪಾಯಿ ನೀರಾಗ ಹಾಕಿದೆಲ್ಲ ಬೋಸಡಿ. ಬ್ಯಾಡಾ ಅಂತ ಚಾಲವರದ ಹೇಳ್ದೆ, ಕಳೆಕೊಂಡ ಬಂದಿ. ನಿಮ್ಮತ್ತಿ ಕೇಳಿದರ ಏನ ಹೇಳ್ಳಿ. ಮಳೀ ಇಲ್ಲ ಬೆಳೀ ಇಲ್ಲಾ, ಹೊಟ್ಟಿಗೇ ಇಲ್ಲದಾಗ ಬಂಗಾರ ಹ್ಯಾಂಗ ಕೊಳ್ಳಲಿ. ಅಂದಾಕರಾ ದಿಮಾಕದಾಕಿ ಅಡಾಳ ನೀಲವ್ವ. ಮದಿವ್ಯಾಗ ಅಳಿಯಾಗ ಬಂಗಾರ ಕೊಟ್ಟಿಲ್ಲಂತ ಸಿಟ್ಟ ಬಂದೈತಿ ಆಕೀಗೆ. ನಿಮ್ಮಪ್ಪ ಸತ್ತು ಪಾರಾದ. ನನ್ನ ಕೊಳ್ಳಿಗೆ ಉರಲು ಹಾಕಿ ಹ್ವಾದಾ' ಅಂತ ಬರಲು ತೊಗೊಂಡ ಬಡ್ಯಾಕ ಹತ್ತಿದ್ಲು, ಅವ್ವ. ಮೈ ತುಂಬ ಬಾರ ಮೂಡಿದ್ವು. ಕೈ ಸೋತು ಸಾಕಾಗಿ ಬರಲು ಚೆಲ್ಲಿ ಭೋರಂತ ಅಳಾಕ ಹತ್ತಿದ್ಲು. ನಾ

ಆಗಲೇ ಹನ್ನೆಡ್ಡ ವರ್ಸದಾಕಿ. ಇವತ್ತೋ ನಾಳ್ಯೋ ದೊಡ್ಡಾಕಿ ಆಗಾಕಿ. ಎಲ್ಲಾ ತಿಳೀತಿತ್ತು, ನನ್ನ ತೆಪ್ಪ ಗೊತ್ತಾತು. ಅವ್ವನ ತೆಕ್ಕಿ ಬಿದ್ದು ಹೇಳಿದೆ 'ಅವ್ವಾ ಅಳಬ್ಯಾಡಾ. ನಾ ದುಡ್ಯಾಕ ಹೋಕ್ಕೇನಿ ಇಟ್ಟಂಗಿ ಭಟ್ಟಿಗೆ. ದಿನಾ ಹತ್ತು ರೂಪಾಯಿ ಕೊಡ್ತಾರ ಅದರಾಗ ಮತ್ತ ಗುಳದಾಳಿ ಮಾಡ್ಸೂವಂತೆ. ಅಳಬ್ಯಾಡಾ' ಅಂತ.

ಇಟ್ಟಂಗಿ ಹೊರತಿದ್ದೆ, ಅರಲು ಕಲಿಸಿ ಕೊಡುತ್ತಿದ್ದೆ. ಅಂಗೈಯಾಗ ನೀರಗುಳ್ಳಿ ಎದ್ದು ಒಡದ್ವು. ರೊಟ್ಟೀ ಬಡಿಯೂ ಮುಂದ ಝಳಕ್ಕ ಭಗಾ ಭಗಾ ಉರೀತಿತ್ತು. ಕಣ್ಣಾಗ ನೀರ ಇಳೀತಿತ್ತು. ರೊಕ್ಕ ಕೂಡಾಕ ಹತ್ತಿತ್ತು. ಒಂದ ದಿನಾ ದೊಡ್ಡಾಕಿ ಆದೆ. ಕೆಲಸಾ ಮಾಡೂ ಮುಂದ ತಿಪ್ಪವ್ವ ಹೇಳಿದ್ಲು 'ನಾ ಎಲ್ಲಾ ಮೇಸ್ತ್ರಿಗ ಹೇಳ್ತೀನಿ. ನೀ ಮನೀಗೆ ಹೋಗ. ಯಾರ್‍ನೂ ಮುಟ್ಟಬ್ಯಾಡಾ' ಅಂತ. ಕುಂಕುಮ ಪ್ರಸೂದು, ಆರತಿ, ಉಡಿ ತುಂಬೂದು ಹಸೀ ಮೈ ಅಂತ ಹೇಳಿ ಅವ್ವ ಹೊರಗs ಬಿಡಲಿಲ್ಲಾ. ನಿಮ್ಮೂರಿಗೆ ಸುದ್ದೀ ಕಳಿಸಿದ್ಲು ಅವ್ವ. ಅತ್ತಿ ಸಿಟಗೊಂಡು ತಾನೂ ಬರಲಿಲ್ಲಾ, ನಿನ್ನೂ ಕಳಿಸಲಿಲ್ಲಾ, ನಿಮ್ಮ ಚಿಗವ್ವನ ಸೊಸಿ ಕೈಯಾಗ ಒಂದು ಸುಮಾರ ಪತ್ತಲಾ, ಕೊಬ್ರಿ ಕಾರಾ ಕಳಿಸಿದ್ಲು. ಅವ್ವ ಗಿಲೀಟಿನ ತಾಳಿ ನನ ಕೊಳ್ಳಾಗ ಹಾಕಿ ಆರತಿ ಮಾಡಿದ್ಲು, ಹುಳುಕು ಯಾರಿಗೂ ತಿಳೀಲಿಲ್ಲ ಅಂತ ನಮಗೂ ಸಮಾಧಾನ ಆಗಿತ್ತು. ಕೂಡಿದ ರೊಕ್ಕ ಎಲ್ಲಾ ಈ ಕಾರೇಕ ಖರ್ಚಾಗಿದ್ವು. ತಿಂಗಳ ಬಿಟ್ಟು, ನಾ ಮತ್ತ ಇಟ್ಟಂಗಿ ಕೆಲಸಕ್ಕೆ ಹೋಗಾಕ ಹತ್ತಿದೆ...

'ಮುಂದ ?' ಎನ್ನುವಂತೆ ಕಣ್ಣೆತ್ತಿ ಅವಳತ್ತ ನೋಡಿದ ಮಲ್ಲಣ್ಣ.

ಕೆಲಸಾ ಕೊಡೂ ಮೇಸ್ತ್ರಿ ಒಂದಿನಾ ಎಲ್ಲಾರೂ ಹ್ವಾದ ಮ್ಯಾಲೆ ನನ್ನ ಹಿಡಕೊಂಡಾ. ಯಾರಿಗರೆ ಹೇಳಿದರ ಕೆಲಸದಿಂದ ತಗೀತಿನಿ ಅಂತ ಹೆದರಿಸಿದಾ. ಆ ವಾರಾ ಕೂಲಿ ಜೋಡಿ ಹತ್ತು ರೂಪಾಯಿ ಹೆಚ್ಚ ಕೊಟ್ಟಾ. ಕರೆದಾಗೆಲ್ಲಾ ಬರಬೇಕು ಅಂತ ಕರಾರ ಹಾಕಿದಾ. ಅವ್ವ ಬಯ್ಯಾತಾಳ ಅಂತ ಆಕೀ ಮುಂದ ಸುಳ್ಳ ಹೇಳಿದೆ. ಒಂದಿನಾ ನಾ ವಾಂತಿ ಮಾಡಿಕೊಂಡಾಗ ಗುಟ್ಟು ಹೊರಬಿತ್ತು, ನನ್ನ ಬಯ್ಯಲಿಲ್ಲಾ, ಬಡೀಲಿಲ್ಲಾ ದರಾದರಾ ಎಳದು ಮನೀ ಬಿಟ್ಟು ಹೊರಗ ನುಗಿಸಿದ್ಲು. ಬಾಗಿಲಾ ಹಾಕಿಕೊಂಡ್ಲು. "ಹಾದರ ಗಿತ್ತಿ, ಮುಂದ್ಯಾಗ ನನ ಮೂಗ ಕೊಯ್ದಿ[illegible] ಎಲ್ಲರ [illegible] ಹೋಗ. ನನ್ನ

ಮುನ್ಯಾಗ ಕಾಲ ಹಾಕಬ್ಯಾಡಾ ಅಂತ ಚೀರಿಕೊಂಡ್ಲು. ಗುಳದಾಳಿ ಕೊಳ್ಳಬೇಕು. ಗಂಡನ ಮನೀಗೆ ಹೋಗಬೇಕು ಅನ್ನೂ ಆಸೇಕ ಬಿದ್ದು ಹಾಳಾದೆ ಅಂತ ಅತ್ತರೂ ಅವ್ವಗ ದಯಾ ಬರಲಿಲ್ಲ. ಎರಡ ದಿನಾ ಉಪಾಸ ಬಿದ್ದು ಎದ್ದು ಎತ್ಲಾಗೇ ಹೊಂಟಿದ್ದೆ. ಕಾಲು ಸೋಲೂತನಾ ನಡದೆ. ತಲೀ ತಿರಗತಿತ್ತು, ಕಣ್ಣಿಗೆ ಕತ್ತಲ ಬಂದ ಬಿದ್ದಬಿಟ್ಟೆ. ಎಚ್ಚರಾದಾಗ ಶಂಗಪ್ಪ ನೀರ ಬಡೀತಿದ್ದಾ. ಸೀರೆಲ್ಲ ರಗತ ಆಗಿತ್ತು, ಗುಲಾಬಿ ಹೂ ಬೆಳಸೋ ಚಿನಿ ... ರೋಜಿ ಆದೆ....

ಎಷ್ಟೋ ಹೊತ್ತು ಸುಮ್ಮನಿದ್ದ ಮಲ್ಲಣ್ಣ "ಗುಳದಾಳಿ ಕಳಕೊಂಡರ ಏನಾತು ಚಿನ್ನಿ.... ನನಗ ಒಂದ ಮಾತು ಹೇಳಿದ್ದರ...."

"ಹ್ಯಾಂಗ ಹೇಳ್ಲಿ, ನೀ ಇನ್ನೂ ಸಣ್ಣಾಂವ. ಅವ್ವನ ಮಾತ ಕೇಳಿ ನಮ್ಮೂರ ಕಡೆ ಹಾಯುಲಿಲ್ಲ. ನಿಮ್ಮವ್ವ ಇರೂತನಕಾ ಬರಿಗೈಲೆ ನಾ ಅತ್ತೀ ಮನೀಗೆ ಬರೂದರ ಹ್ಯಾಂಗ ?"

"ನಿನ್ನ ಹೇಣ್ತಿ ಹಾದರಾ ಮಾಡಿ ಯಾರಿಗೋ ಬಸರಾಗಿ ಊರ ಬಿಟ್ಟ. ಅವನ ಹಿಂದ ಓಡಿ ಹೋಗ್ಯಾಳ ಅಂತ ಅವ್ವ ಹೇಳಿದಾಗ ನನಗ ಖರೇನ ನಿನ್ನ ಕಡದು ತುಂಡು ಮಾಡ್ಬೇಕ ಅನ್ನೂವಷ್ಟ ಸಿಟ್ಟು ಬಂದಿತ್ತು. ನಾ ಎಷ್ಟ ಪಿರೀತಿ ಮಾಡ್ತಿದ್ದೆ ನಿನ್ನ. ಅದಕ ಸಿಟ್ಟಿನ್ಯಾಗ ಬ್ಯಾರೆ ಲಗ್ನಾದೆ."

"ನಾ ಇನ್ನೂ ನಿನ್ನನ ಪಿರೀತಿ ಮಾಡ್ತೀನಿ. ಅದಕ್ಕs ನಿನ್ನೆ ರೊಕ್ಕ ಹಿಡೀಲಿಲ್ಲ. ನಾ ನಿನ್ನ ಹೇಣ್ತಿ. ಮಾಡಿಕೊಂಡ ಹೇಣ್ತಿ ಕೂಡ ಮಕ್ಕೊಂಡರ ಗಂಡನ ರೊಕ್ಕಾ ಇಸಕೋಬೇಕೇನ? ನಿನಗ ಇದೆಲ್ಲಾ ಹೇಳಬಾರದಂತ ಮಾಡಿದ್ದೆ. ನಿನ್ನೆ ರಾತ್ರಿ ಕತ್ತಲಿತ್ತು ನಾ ಯಾರಂತ ಗೊತ್ತಾಗಲಿಲ್ಲ ನಿನಗ. ನಿನ್ನ ಹೇಣ್ತಿ ಸತ್ತಾಳ ಅಂದಿ. ನೀ ಬೇಕಾದಾಗ ನನ್ನಲ್ಲೆ ಬಂದ ಹೋಗು." ಸುಮ್ಮನೆ ಎದ್ದು ಹೋದ ಮಲ್ಲಣ್ಣನ ಹರವಾದ ಬೆನ್ನನ್ನೇ ದಿಟ್ಟಿಸುತ್ತಿದ್ದಳು ರೋಜಿ.... ಅಲ್ಲಲ್ಲ ಚಿನ್ನಿ.

ಒಂದು ವಾರದಲ್ಲಿಯೇ ಮತ್ತೆ ಬಂದ ಮಲ್ಲಣ್ಣ. ಚಿನ್ನಿ ಪಾರ್ಕಿನಲ್ಲಿಯ ಹೂವುಗಳ ಜೊತೆಗೇ ಹೂವಾಗಿದ್ದಳು.

"ನಿನ್ನ ನೋಡಿದಾಗಿನಿಂದ ನನ್ನ ಜೀವಕ ಸಮಾಧಾನ ಇಲ್ಲ ಚಿನ್ನಿ. ನಿಂದೇನೂ ತಪ್ಪಿಲ್ಲ. ಕಸ್ಟಾ ಉಂಡೀದಿ. ಅದಕs ನಾ ಎಲ್ಲಾ ವಿಚಾರ

ಮಾಡೀನಿ...." ಆವಳ ಹೃದಯದಲ್ಲಿ ಧಬಧಬೆ. ಸಪ್ಪಳ ಜೋರು ಜೋರಾಗಿ ಕಿವಿ ಗಡಚಿಕ್ಕಿದವು.

"ಯಾಕ ಚಿನ್ನಿ ಮಾತಾಡವೊಲ್ಲಿ? ನಾ ನಿನ್ನ ಕರಕೊಂಡ ಹೋಗಾಕ ಬಂದೀನಿ. ನನ್ನ ಹೇಣ್ತಿ ನೀನು. ನನ್ನ ಮನೀಗೆ ಬರ್ತೀ ಇಲ್ಲೋ?"

ಉಡಿಯಲ್ಲಿಯ ತಾಳಿ ತೆಗೆದ ಚಿನ್ನಿ ಮಲ್ಲಣ್ಣನ ಕೈಗೆ ಕೊಟ್ಟು ಕೊರಳು ಒಡ್ಡಿದಳು.

ದೇವಿ

"ಪಾರಕ್ಕ ಹಾಸಿಗಿ ಹಿಡಿದಾಳಂತೆ" "ಪಾರವ್ವನ ಕೈಕಾಲು ಬಾತಾವಂತೆ" "ಪಾರಿ ಇನ್ನೇನ ಉಳಿಯಾಂಗ ಕಾಣೂದಿಲ್ಲಂತ" ಸುದ್ದಿ ಚಿತ್ರ–ವಿಚಿತ್ರ ರೂಪ ತಳೆದು ಮಣ್ಣೂರಿನ ತುಂಬ ಸುಳಿದಾಡಿತು. ಕಣ್ಣಿಂದ ನೋಡಿದವರಿಗಿಂತ ಹೆಚ್ಚಾಗಿ ವರ್ಣರಂಜಿತವಾಗಿ ಬಣ್ಣಿಸಿ ಮಾತನಾಡಿದರು ಊರಿನ ಗಂಡು–ಹೆಣ್ಣು-ಮಕ್ಕಳೆಲ್ಲ. "ಮನಿಷ್ಯಾ ಅಂದಮ್ಯಾಲೆ ಜಡ್ಡು ಜಾಪತ್ರಿ ಬರೂವ. ಹುಟ್ಟಿದವರು ಸಾಯೂವವರ. ಆದರ ಪಾರವ್ವಗ ಜಡ್ಡಾತು ಅಂದರ ನಂಬಾಕ ಆಗಾಕಿಲ್ಲ" ಎಂದು ಒಳಗೇ ತಳಮಳಿಸಿದವರು ಕೆಲವರು. "ಈಟ ದಿನಾ ಮೆರದಾಡಿ ಕಡೀಕ ಬಕಬಾರ್ಲೆ ಬಿದ್ಲಲ್ಲ" ಎಂದು ಒಳಗೊಳಗೇ ಹಿಗ್ಗಿ ಹಿರೇಕಾಯಾಗಿ ಹಾಲು ಕುಡಿದವರೂ ಹಲವರಿದ್ದರು ಮಣ್ಣೂರಿನಲ್ಲಿ.

"ಬರೇ ಮಾತಾಡ್ತೀರಲ್ರೇ, ಪರದೇಶಿ ಮಗಳು, ಗಂಡನ್ನ ಕಳ ಕೊಂಡು, ಗೇಣು-ಚೋಟಿ ಮಕ್ಕಳ್ನ ಕಟಿಗೊಂಡು ಗಂಡಸಿನಾಂಗ ಹೊಲ ದಾಗ, ಮನ್ಯಾಗ ದುಡದು ಸತ್ಲು ಪಾರಿ. ಮಣ್ಣಿಗೆ ಹೋಗ್ರಿ, ನನ್ನೂ ಯಾರರೇ ಬಗಲಾಗ ಕೈ ಹಾಕಿ ಕರಕೊಂಡು ಹ್ಯಾದರ ಹಿಡಿ ಮಣ್ಣು ಹಾಕಿ ಬಂದೇನ" ಸಂಕಟದಿಂದ ಕಣ್ಣೀರು ಹಾಕಿತು ಮುದುಕಿ ಕಾಳವ್ವ, ಪಾರವ್ವನ ಗಂಡ ಮಲ್ಲಪ್ಪನ ಸೋದರತ್ತಿ.

ಕಾಳವ್ವ ಮೊಮ್ಮಗ ಕೆಂಚನನ್ನು ಹೊಲಕ್ಕೆ ಓಡಿಸಿದಳು. ಅವನು ತಂದ ಸುದ್ದಿ ಮಾತ್ರ ತೀರಾ ಬೇರೆಯೆ ಇತ್ತು. ಪಾರವ್ವ ಸತ್ತಿರಲಿಲ್ಲ, ಜ್ವರ ದಿಂದ ಹಾಸಿಗೆ ಹಿಡಿದದ್ದು ನಿಜ.

"ದೇವಿ ನಮ್ಮವ್ವಾ, ನೀ ಖರೇನ ಇದ್ದರ ಪಾರೀನ ಒಯ್ಯಬ್ಯಾಡವ್ವ. ಮಕ್ಕಳು ದಿಕ್ಕೇಡಿ ಆಕ್ಯಾವು. ಇನ್ನೊಂದ ನಾಕೊಪ್ಪತ್ತ ಆಯುಸ್ಯಾ ಹಾಕು ಆಕೀಗೆ" ಗಲ್ಲ ಗಲ್ಲ ಬಡಿದುಕೊಂಡು ಮೇಲೆ ಕೈ ಎತ್ತಿ ಮುಗಿದಳು ಕಾಳವ್ವ.

ಪಾರವ್ವನ ಮೈದುನ ಫಕ್ಕೀರ ಹಾರಾಡಿದ. "ದಿಕ್ಕೇಡಿ ಯಾಕ ಆಗ್ಯಾವಲ್ಲು, ಸಾಯಲಿ ಆ ರಂಡಿ. ಆಕಿ ಇದ್ದ ಹೊಲ ನಮಗs ಬರಬೇಕ, ರಟ್ಟೀ ಮುರದು ದುಡದೇನಿ ನಾ ಆ ಹೊಲದಾಗ."

"ಪಾರವ್ವ ನಿಮ್ಮಣ್ಣನ ಹೇಣ್ತಿ. ಅದರಾಗ ದ್ಯಾಮವ್ವನ ಪೂಜಾರಿ. ಆಕೀ ಮೈಯಾಗ ದೇವಿ ಬರತಾಳ. ನೀ ಹಾಂಗೆಲ್ಲಾ ಬೈದರ ನಿನ ಮನೀ ಉಜ್ಜಳ ಆಗಾಕಿಲ್ಲ. ತಪ್ಪಾತು ಅನ್ನು" ಎಂದ ನೆರೆಮನೆ ಮುದುಕಿ ಹಾಲವ್ವನ ಸೊಸೆಗೆ ಗಂಡುಮಗು ಹುಟ್ಟಿದ್ದು ಪಾರವ್ವನ ಆಶೀರ್ವಾದದಿಂದ. ಕೂಡಿದ ಜನರೂ ಛೀ ಹಾಕಿದ್ದರಿಂದ ಫಕ್ಕೀರ ಹಲ್ಲು ಕಡಿಯುತ್ತ ಸುಮ್ಮನಾದ. ಅವನಹೆಂಡತಿ ನೀಲವ್ವ ಕಂಬದ ಮರೆಯಲ್ಲಿ ಬೆರಳು ಲಟಿಗೆ ಮರಿದು ಶಾಪ ಹಾಕಿದಳು. "ಈಕಿ ಬಾಯಾಗ ಮಣ್ಣು ಬೀಳಲಿ."

ಪಾರವ್ವನೇನು ಸಾಹಿತಿ-ಕಲಾವಿದೆಯಲ್ಲ. ಮಂತ್ರಿ-ಶಾಸಕಳೂ ಅಲ್ಲ. ಮೂರು ಮಕ್ಕಳ ತಾಯಿ ವಿಧವೆ. ಪಾರವ್ವ. ಮಣ್ಣೂರಿನ ಜನ ಈ ತರದ ವಿವಿಧ ಪ್ರತಿಕ್ರಿಯೆಗಳಿಗೆ ಕಾರಣವಾದದ್ದು ಸೋಜಿಗವಾಗಿರಬೇಕಲ್ಲವೆ ? ವಾಚಕ ಮಹಾಶಯರೇ, ಹಾಗಾದರೆ ಅವಳ ಪೂರ್ವೇತಿಹಾಸ ಸ್ವಲ್ಪ ಕೇಳಿ:

ಮಣ್ಣೂರಿನ ಹತ್ತಿರದ ಹಳ್ಳಿ ಮಾಸೂರಿನಲ್ಲಿ ಬಡ ರೈತ ಕುಟುಂಬದಲ್ಲಿ ಪಾರವ್ವ ಹುಟ್ಟಿದಳು. ಯಾವ ಕೆಟ್ಟ ಗಳಿಗೆಯಲ್ಲಿ ಹುಟ್ಟಿದಳೋ ಅಲ್ಲಿಂದಲೇ ಅವಳ ಕಷ್ಟ ಶುರುವಾಯಿತು. ಹುಟ್ಟಿದ ತಿಂಗಳಲ್ಲಿ ಹೆತ್ತ ತಾಯಿ ಸತ್ತಳು. 'ಕರಿ ಹೆಗ್ಗಣದ ಮರಿ ಹಡದಾಳು' ಎನ್ನುವ ಹರಲಿ ಕೇಳಲಾರದೆ ಕಣ್ಣು ಮುಚ್ಚಿಕೊಂಡ ಪುಣ್ಯವಂತೆ ಅವಳು. ಮನೆಯಲ್ಲಿ ಒಲೆ ಹೊತ್ತಬೇಕಲ್ಲ! ಅಪ್ಪನಿಗೆ ಮತ್ತೊಬ್ಬ ಹೆಂಡತಿ ಬಂದಳು. ಕರಿ ಪಾರವ್ವನಿಗೆ ತಂಗಿ ತಮ್ಮಂದಿರು ಬಂದರು. ಆರು ವರುಷವಾದೊಡನೆ ಎಮ್ಮೆ ಕಾಯಲು, ಎಂಟು ವರುಷವಾದೊಡನೆ ರೊಟ್ಟೀ ಬಡಿಯಲು ಕಲಿತ ಪಾರವ್ವ ಕೆಲಸದಲ್ಲಿ ನುರಿತದ್ದಕ್ಕೆ ಮಲಅವ್ವನಿಗೆ ಋಣಿಯಾಗಿರಲೇಬೇಕು. ಹೊಟ್ಟೆ ತುಂಬ ರೊಟ್ಟಿ ಇಲ್ಲದೆ, ಹೊಲದಲ್ಲಿ, ಮನೆಯಲ್ಲಿ ಯಂತ್ರದಂತೆ ದುಡಿಯುವ ಕರೀ

ಕೊಡ್ತದಂಥ ಪಾರವ್ವನೂ ಒಂದು ದಿನ ಹೆಣ್ಣಾದಳು. 'ಅವ್ವ ಸತ್ತರೂ ಸೋದರಮಾವನಿರಬೇಕು' ನಿಜ. ಆದರೆ ಪಾರವ್ವನ ಪಾಲಿಗೆ ಅವನು ಇದ್ದೂ ಇಲ್ಲದಂತಿದ್ದ. ಹಚ್ಚಿಕೊಂಡರೆ ಎಲ್ಲಿ ಹೆಗಲ ಮೇಲೆ ಏರುವಳೋ ಎನ್ನುವ ಹೆದರಿಕೆಯಿಂದ ಇಪ್ಪತ್ತು ರೂಪಾಯಿ ಪತ್ತಲ, ಹತ್ತು ರೂಪಾಯಿ ಹಿಟ್ಟಕ್ಕಿಗೆ ಕೊಟ್ಟು ಕೈ ತೊಳೆದುಕೊಂಡ ಅತ್ತೆ–ಮಾವ ತಿರುಗಿ ಇತ್ತ ನೋಡ ಲಿಲ್ಲ. ಮಗಳ ಮದುವೆ ಮಾಡುವ ಚಿಂತೆಯಿಂದ ತಲೆಗೆ ಕೈಕೊಟ್ಟು ಕುಳಿತ ಗಂಡನಿಗೆ ಉಪಾಯ ತೋರಿದಳು ಪಾರವ್ವನ ಮಲ ಅವ್ವ.

"ಮಣ್ಣೂರಿಗೆ ಹೋಗಿ ಬರೂಣ, ಅಲ್ಲೆ ನಮ್ಮ ದೊಡ್ಡಪ್ಪನ ಮಕ್ಕಳು ಅದಾರ. ದೊಡ್ಡಾಂವನ ಹೇಣ್ತಿ ಸತ್ತು ನಾಕವರ್ಷ ಆದ್ವು. ಎಡ್ಡ ಹೆಣ್ಣುಮಕ್ಕಳು ಮದುವಿ ಆಗಿ ಹೋಗ್ಯಾರ. ಹೊಲ ಮನಿ ಐತಿ. ಮಲ್ಲಣ್ಣಗ ಪಾರೀನ ಕೊಡೂಣು. ನಾ ಅವಂಗೆಲ್ಲಾ ಹೇಳ್ತೀನಿ. ಇಲ್ಲ ಅನ್ನಾಂಗಿಲ್ಲ."

ದಿನಕ್ಕೆ ಇಪ್ಪತ್ತು ರೊಟ್ಟಿ ತಿನ್ನುವ ಭಾವನಿಗೆ ರೊಟ್ಟಿ ಬಡಿದು ಬಡಿದು ಬೇಸತ್ತ ತಮ್ಮಂದಿರ ಹೆಂಡಂದಿರು ಸುದ್ದಿ ಕೇಳಿ ಖುಷಿ ಪಟ್ಟರು. ಗಂಡು ಮಕ್ಕಳಿಲ್ಲದ ಅಣ್ಣನ ಪಾಲಿನ ಹೊಲ ನುಂಗಲು ಜೊಲ್ಲು ಸುರಿಸು ತ್ತಿದ್ದ ಫಕ್ಕೀರ ಮಾತ್ರ ಅಡ್ಡಗಾಲು ಹಾಕಿದ. ಮುದುಕಗೆ ಈಗೆಂತ ಮದುವೆ ಎಂದು ಮಂದೀ ಎದುರು ಕೂಗಾಡಿದ. ಚೆನ್ನಾಗಿ ಕಿವಿ ತುಂಬಿಸಿಕೊಂಡಿದ್ದ ಮಲ್ಲಣ್ಣನಿಗೆ ಬಾಸಿಂಗ ಬಲ ಕೂಡಿಬಂದಿತ್ತು. ಪಾರವ್ವ ಮದಲಗಿತ್ತಿಯಾಗಿ ಮಣ್ಣೂರಿಗ ಬಂದಾಗ ಹದಿನಾಲ್ಕು ವರ್ಷದ ಹುಡುಗಿ.

ಮಂಚ, ಹೂವಿನ ಸರ, ಹಾಲು–ಹಣ್ಣು ಇಲ್ಲದೆ ಪಾರವ್ವನ ಪ್ರಥಮ ರಾತ್ರಿ ಬೇರೊಂದು ವಿಶಿಷ್ಟ ರೀತಿಯಲ್ಲಿಯೇ ನಡೆಯಿತು. ತಡಿಕೆ ಮರೆ ಮಾಡಿದ ಪಡಸಾಲೆಯಲ್ಲಿ ನಿದ್ದೆ ಬಾರದೆ ಹೊರಳಾಡಿದ ಪಾರವ್ವನಿಗೆ ಯಾವಾಗ ಜಂಪು ಹತ್ತಿತ್ತೊ ತಿಳಿಯದು. ಸರಿ ರಾತ್ರಿಯ ಹೊತ್ತು ಬೆನ್ನ ಮೇಲೊಂದು ಒದೆ ಬಿತ್ತು. ಅಂಗತ್ತ ಬಿದ್ದಳು ಪಾರವ್ವ. ಚೀರಬೇಕೆಂದರೂ ಭಯತುಂಬಿದ ದನಿ ಏಳಲಿಲ್ಲ. ಕುಡಿದು ಬಂದ ಮಲ್ಲಪ್ಪ ಅವಳ ಮೇಲೆ ಬಿದ್ದ. ರಾಕ್ಷಸನಂತಹ ಆಳು. ಜೀವ ಬಾಯಿಗೆ ಬಂದಿತು. ಒದ್ದಾಡಿ ಕೊಸರಾಡಿ ಜೋಲಿ ತಪ್ಪುತ್ತಿದ್ದ ಗಂಡನನ್ನು ತಳ್ಳಿ ಹೊರಗೆ ಓಡಿದಳು, ಏನೂ ಅರಿಯದ ಪಾರವ್ವ. ಅಲ್ಲಿ ಕೆಮ್ಮುತ್ತ ಮಲಗಿದ್ದ ಕಾಳವ್ವತ್ತಿಯ

ಮಗ್ಗಲು ಸೇರಿದಳು. ಹೆದರಿ ನಡುಗುತ್ತಿದ್ದ ಬಾಲೆಯನ್ನು ಅವುಚಿ ಹಿಡಿದುಕೊಂಡಳು ಮುದುಕಿ. ತನ್ನ ಮದುವೆಯಾದದ್ದೇ ಮರೆತುಬಿಟ್ಟಂತೆ ಮಲ್ಲಪ್ಪ ಒಳಗೆ ನಿದ್ದೆ ಮಾಡಿದ್ದ. ಮರುದಿನ ಮನೆಮಂದಿಯೆಲ್ಲ ಛೀ ಹಾಕಿದರು, ಗಂಡನ ಮಗ್ಗಲು ಬಿಟ್ಟು ಓಡಿದ್ದಕ್ಕೆ. ಮಲ್ಲಪ್ಪನಂತೂ ಇವತ್ತು ರಾತ್ರಿ ಓಡಿದರೆ ಎಲುಬು ಮುರಿಯುತ್ತೇನೆ ಎಂದು ಗುದ್ದಿ ಹೇಳಿದ. ಹೀಗೆ ಶುರುವಾದ ಅವಳ ದಾಂಪತ್ಯ ಹುಲುಸಾದ ಫಲ ಕೊಟ್ಟಿತು. ನಾಲ್ಕು ವರ್ಷಗಳಲ್ಲಿ ಮೂರು ಮಕ್ಕಳ ತಾಯಾದಳು. ಕೊಡ್ಡದಂತೆ ಗಟ್ಟಿ ಮುಟ್ಟಾಗಿದ್ದ ಪಾರವ್ವ ಹಂಚೀಕಡ್ಡಿಯಾದಳು. ಹಗಲು ಮನೆ ಮಂದಿಯ ಕೈಯಲ್ಲಿ ರಾತ್ರಿ ಗಂಡನ ಕೈಯಲ್ಲಿ ಅವಳು ಅರೆಜೀವವಾದಳು. ಸತ್ತು ಹೋಗಬೇಕೆಂದು ಒಮ್ಮೊಮ್ಮೆ ಗೋಳಿಟ್ಟಾಗ ಮುತ್ತಿನಂತಹ ಮಕ್ಕಳನ್ನು ನೋಡಲು ಕೊಂದು ಆಮೇಲೆ ಸಾಯಿ ಎನ್ನುವಳು ಕಾಳವ್ವತ್ತಿ. ಹೆಂಡತಿಯನ್ನು ಹೊಲದಲ್ಲಿ ದುಡಿಸುತ್ತ, ಸಿಕ್ಕಷ್ಟು ವೇಳೆಯಲ್ಲೂ ಕುಡಿತವನ್ನೇ ಕಸಬು ಮಾಡಿಕೊಂಡ ಮಲ್ಲಪ್ಪ ಹೊಟ್ಟೆ ನೋವಿನಿಂದ ನರಳಿ ನರಳಿ ಒಂದು ದಿನ ಸತ್ತುಹೋದ. ರಾತ್ರಿಯ ನರಕದಿಂದ ಪಾರವ್ವ ಪಾರಾದಳು. ಆದರೆ ಮೈದುನ ಫಕ್ಕೀರನ ಹೊಟ್ಟೆಕಿಚ್ಚು ಅವಳನ್ನು ಇಡಿಯಾಗಿ ನುಂಗಲು ಹವಣಿಸುತ್ತಿತ್ತು.

ಮತ್ತೊಂದು ರಾತ್ರಿ ಪಾರವ್ವ ಒಳಗೆ ಮಲಗಿದ್ದ ಮಕ್ಕಳನ್ನೆಲ್ಲ ಬಿಟ್ಟು ಓಡಿಬಂದು ಕಾಳವ್ವತ್ತಿಯ ಮಗ್ಗಲು ಸೇರಿದಳು. ಫಕ್ಕೀರ ಕುಡಿದು ಬಂದು ಅವಳನ್ನು ಹಿಡಿದುಕೊಂಡಿದ್ದ. ಚೆಲುವೆ ಹೆಂಡತಿ ಮನೆಯಲ್ಲಿದ್ದರೂ ಮೈದುನ ತನ್ನ ಮೈಮೇಲೆ ಕೈ ಹಾಕಲು ಬಂದ ಕಾರಣ ಪಾರವ್ವನಿಗೆ ಸ್ಪಷ್ಟವಾಗಿ ಹೊಳೆದಿತ್ತು. "ಯತ್ತೀs, ನಾಳೆ ಹೊಂತೊಟ್ಲೆ ನಾ ಮಕ್ಕಳನ್ನ ಕಟಿಗೆಂಡು ಹೊಲಕ್ಕೆ ಹೋಕ್ಕಿನಿ. ಈ ಮನ್ಯಾಗ ಕಾಲು ಹಾಕಂಗಿಲ್ಲ. ಈ ಮನೀ ಋಣಾ ಮುಗೀತು." ಕಂಠ ತುಂಬಿದರೂ ಅಳಲಿಲ್ಲ ಪಾರವ್ವ.

ಊರ ಹಿರಿಯರ ಸಮಕ್ಷಮ ಪಾರವ್ವ ಮಕ್ಕಳ ಜೊತೆಗೆ ಹೊಲದ ಗುಡಿಸಲಲ್ಲಿ ಇರುವ ಏರ್ಪಾಡು ಮಾಡಿದಳು ಕಾಳವ್ವ. ಆ ಹೊಲ ಮಲ್ಲಪ್ಪನ ಪಾಲಿಗೇ ಬಂದದ್ದು. ಕಾಳವ್ವತ್ತಿ ಅವಳ ಜೊತೆಗಿದ್ದು ಧೈರ್ಯಕೊಟ್ಟಳು. ಚಿಳ್ಳೆ-ಪಿಳ್ಳೆ ಮಕ್ಕಳು-ಒಬ್ಬಂಟಿಯಾಗಿ ಹೊಲದಲ್ಲಿ ಏಗಲಾರದೆ ಹಳ್ಳಿಯಿಂದ

ಮಲತಮ್ಮನನ್ನು ತಂದಿಟ್ಟುಕೊಂಡಳು ಪಾರವ್ವ. ಅವಳ ಈ ಸ್ವಾತಂತ್ರ್ಯಕ್ಕೂ ಬೆಲೆ ತೆರಬೇಕಾಗಿತ್ತು. ಮನೆಯಲ್ಲಿ ಮೈದುನನೊಬ್ಬನದೇ ಕಾಟವಾದರೆ ಹೊಲದಲ್ಲಿ ಹರೆಯದ ಗಂಡಸರೆಲ್ಲ ಹಣಿಕಿ ಹಾಕುವವರೇ. ಒಂಟಿ ಗುಡಿಸಲು- ಹಗಲೆಲ್ಲ ದುಡಿದು ಹೆಣವಾದರೂ ರಾತ್ರಿ ಕಣ್ಣು ಮುಚ್ಚಲೂ ಹೆದರಿಕೆ. ಕೆಲವೊಂದು ಪ್ರಸಂಗದಲ್ಲಿ ಹತ್ತಿರ ಬಂದವರನ್ನು ಕುಡಗೋಲು ತೋರಿಸಿ ಓಡಿಸಿದ್ದಳು.

ಇಷ್ಟು ವರ್ಷಗಳ ತನ್ನ ಬದುಕಿನಲ್ಲಿ ದೇವರು-ದಿಂಡಿರ ಉಸಾಬರಿಗೆ ಹೋದವಳಲ್ಲ ಪಾರವ್ವ. ಅದಕ್ಕೆಲ್ಲ ಅವಳಿಗೆ ವೇಳೆಯಾದರೂ ಎಲ್ಲಿತ್ತು ? ನಾಲ್ಕಾರು ತುತ್ತಿನ ಚೀಲಗಳನ್ನು ತುಂಬುವದರಲ್ಲಿಯೇ ಸೂರ್ಯ ಮೂಡಿ ಮುಳುಗುತ್ತಿದ್ದ. ಆ ವರುಷ ಮಳೆ ಸರಿಯಾಗಿ ಆಗದೆ ವರುಷ ಪೂರ್ತಿ ಹೊಟ್ಟೆ ತುಂಬುವಷ್ಟು ಬೆಳೆಯೂ ಕೈಗೆ ಹತ್ತಿರಲಿಲ್ಲ. ಗುಡಿ ಕಂಡಲ್ಲಿ ತಲೆ ಬಾಗಿ ಕೈಮುಗಿದು ತನ್ನ ಕೆಲಸಕ್ಕೆ ಸಾಗುವ ಪಾರವ್ವನನ್ನು ಕಂಡು ದೇವರಿಗೆ ಕರುಣೆ ಬಂದಿತು. ಜಾನಪದ ಕಥೆಗಳಲ್ಲಿ ನೀವು ಕೇಳಿದ್ದೀರಲ್ಲ! ಪಾರ್ವತಿ ಪರಮೇಶ್ವರರು ಲೋಕ ಸಂಚಾರಕ್ಕಾಗಿ ಹೊರಟಿರುತ್ತಾರೆ. ಅಲ್ಲಿ ಬಡವರನ್ನು ದುಃಖಿಗಳನ್ನು ಕಾಣುತ್ತಾರೆ. ಪಾರ್ವತಿ ದೇವಿಯು ಹೆಂಗರುಳು. "ಸ್ವಾಮೀ ಅವರಿಗೆ ಏನಾದರೂ ಸಹಾಯ ಮಾಡಿ" ಎನ್ನುತ್ತಾಳೆ. ಧನ-ಕನಕ-ವಸ್ತುಗಳು ಅವರ ಮನೆ ತುಂಬುತ್ತವೆ. ಸರಿ, ಬಡವರ ದುಃಖಗಳೆಲ್ಲ ದೂರಾಗುತ್ತವೆ. ಪಾರ್ವತಿ – ಪರಮೇಶ್ವರರು ಸಂತುಷ್ಟರಾಗಿ ಮುಂದಕ್ಕೆ ಹೋಗುತ್ತಾರೆ. ಆದರೆ ಇಲ್ಲಿ ಸ್ವಲ್ಪ ವ್ಯತ್ಯಾಸವಾಯಿತು. ದೇವಿ ಮುಂದೆ ಹೋಗಲಿಲ್ಲ. ಪಾರವ್ವನ ಮನೆಯಲ್ಲಿಯೇ ಕುಳಿತುಬಿಟ್ಟಳು.

ಅದು ಹೇಗೆ ಸಾಧ್ಯ ಎಂದು ಅಚ್ಚರಿಯಾಯಿತೇ? ಹಾಗಾದರೆ ಆ ಪ್ರಸಂಗವನ್ನೂ ಕೇಳಿ. ಒಂದು ಮಂಗಳವಾರ ಸಂತೆಯ ದಿನ. ಉಪ್ಪು, ಬೆಲ್ಲ, ಚಾ ಪುಡಿ, ಎಣ್ಣೆಗಾಗಿ ಪಾರವ್ವ ನಗರಕ್ಕೆ ಹೋಗಿದ್ದಳು. ಮನೆಯಲ್ಲಿ ಅವಳ ಚಿಕ್ಕಮಗ ಒಳ್ಳೆಣ್ಣೆ ಬಾಟ್ಲಿ ಒಡೆದಿದ್ದ. ಅವನನ್ನು ಹುಣಸೇ ಬರಲಿನಿಂದ ಚೆನ್ನಾಗಿ ತದುಕಿ ಪೇಟೆಗೆ ಬಂದಿದ್ದಳು. ಅಲ್ಲಲ್ಲಿ ಸುತ್ತಾಡಿ, ಚೌಕಾಶಿ ಮಾಡಿ ಮೋಡಕಾ ಬಜಾರಿನಲ್ಲಿ ಎಂಟಾಣೆಗೆ ಒಂದು ಎಣ್ಣೆಯ ಬಾಟ್ಲಿ ಕೊಂಡಳು. ಎಲ್ಲಿಯಾದರೂ ಸೀಳು ಇದೆಯೋನೋ ಪರೀಕ್ಷಿಸಲು

ಆಕಾಶಕ್ಕೆ ಎತ್ತಿ ಹಿಡಿದಳು. ಅಲ್ಲಿ ಒಂದು ಮುಖ! ಅಂದರೆ ಪೂರ್ತಿ ಮುಖ ವಲ್ಲ–ಕಣ್ಣು, ಮೂಗು ಕಂಡವು. ಮತ್ತೆ ಮತ್ತೆ ದಿಟ್ಟಿಸಿದಳು. ಬಾಟಲಿ ಸರಿಸಿ ಆಕಾಶ ನೋಡಿದಳು. ಏನೂ ಇಲ್ಲ. ಸೋಜಿಗವಾಯಿತು. ಓಡುತ್ತ ಹೊಲಕ್ಕೆ ಬಂದಳು, ಕಾಳವ್ವ. ಹಣಮಂತರಿಗೂ ಬಾಟಲಿಯಲ್ಲಿ ಮುಖ ಕಂಡಿತು. ಏನಿದು? ಯಾಕೆ ಹೀಗೆ?ಒಂದೂ ತಿಳಿಯದೆ ಪೇಚಾಡಿದರು. ಕಾಳವ್ವತ್ತಿ ಅನುಭವಸ್ಥೆ.

"ಪಾರೀs ಈ ಮೂರಿ ಎಲ್ಲೋ ನೋಡಿದಂಗ ಐತೆಲ್ಲಾ."

"ಹೌದs ಯತ್ತೀs, ನನಗೂ ಹಾಂಗ ಅನಸ್ತೈತಿ."

ಇದೇನು ಕೇಡುಗಾಲಕ್ಕೆ ಬಂತೋ ಹೇಗೆ ತಿಳಿಯುವದು ? ಆ ರಾತ್ರಿ ಇಬ್ಬರೂ ನಿದ್ದೆ ಮಾಡಲಿಲ್ಲ. ಬೆಳಿಗ್ಗೆ ತಂಗಳುಣ್ಣವಾಗ ಕಾಳವ್ವ ಮೆಟ್ಟಿ ಬಿದ್ದಳು. ರೊಟ್ಟೀ ಕೆಳಗೆ ಇಟ್ಟವಳೇ ಓಡಿ ಹೋಗಿ ಕೈ ತೊಳೆದು ಮತ್ತೆ ಬಾಟಲಿ ದಿಟ್ಟಿಸಿದಳು. ಹಾಗೆಯೇ ಅವಳ ಕಣ್ಣಲ್ಲಿ ನೀರು ಹರಿಯಿತು. ಬಾಟಲಿ ಕಣ್ಣಿಗೊತ್ತಿಕೊಂಡಳು.

"ತಾಯಿ ನಮ್ಮವ್ವಾ, ನಿನ ಮಕ್ಕಳ್ನ ಸಲಹವ್ವಾ" ಬಾಯಿ ತೆರೆದು ನೋಡುತ್ತಿದ್ದ ಪಾರವ್ವನಿಗೆ, "ಪ್ಯಾರೀs ನಿನ ದೈವ ತೆರೀತು. ಕಷ್ಟ ಹರೀತು. ನನ ಮಗಳ, ದ್ಯಾಮವ್ವ ದೇವಿ ನಿನ ಮನೀ ಬಾಗಲಕ ಬಂದಾಳ. ತೊಳದು ಇಬೂತಿ, ಕುಂಕುಮ ಹಚ್ಚಿ ಪೂಜಿ ಮಾಡು. ನಿನಗ ಎಲ್ಲಾ ಛೊಲೋ ಆಗತೈತಿ" ಎಂದಳು.

ಮೊದಲು ಕಾಳವ್ವತ್ತಿಯು ತೆಕ್ಕೆಗೆ ಬಿದ್ದು ಭೋರೆಂದು ಅತ್ತಳು ಪಾರವ್ವ. ಆಮೇಲೆ ಬಾಟಲಿಗೆ ಅಡ್ಡ ಬಿದ್ದಳು.

"ನಾ ನಿನ್ನ ಕೂಸು ನಮ್ಮವ್ವಾ, ಅರೀದ ಮಳ್ಳಿ. ಏನಾದ್ರೂ ತಪ್ಪಾದ್ರ ಹೊಟ್ಯಾಗ ಹಾಕ್ಕೋ. ದಿನಾ ನಿನ ಪೂಜಿ ಮಾಡ್ತೀನಿ." ಮಕ್ಕಳನ್ನೂ ಅಡ್ಡ ಬೀಳಿಸಿ ಬಾಟಲಿಯನ್ನು ಒಂದು ಚಿಕ್ಕ ಮಣೆಯ ಮೇಲೆ ಇಟ್ಟು ಪೂಜೆ ಮಾಡಿದಳು.

ಕಾಳವ್ವನಿಂದ ಸಮಾಚಾರ ತಿಳಿದ ಊರ ಜನ ಹಿಂಡು ಹಿಂಡಾಗಿ ಸೋಜಿಗೆ ನೋಡಲು ಬಂದರು. ಬಂದವರಿಗೆಲ್ಲ ಕಾಳವ್ವ ಹೇಳಿದ್ದೊಂದೇ ಮಾತು.

"ಪಾರವ್ವ ಯಾರಿಗೂ ಕೇಡು ಬಗದಾಕಿ ಅಲ್ಲಾ. ಭಾಳ ಕಷ್ಟ ಉಂಡಾಳ. ದೇವರಿಗೆ ಸರ್ತಿ ಆಗಿ ನಡಕೊಂಡಾಳ. ಅವಳ ನಡತೀಗೆ ಮೆಚ್ಚಿ ದೇವೀ ಆಕಿ ಮನೀಗೆ ಬಂದಾಳ. ಸತ್ತ್ಯೈಳ್ಳವರಿಗೆ ಕಾಣತಾಳ."

ಕಾಳಪ್ಪನ ಕೊನೆಯ ಮಾತಂ ಬಂದ ಜನರಿಗೆಲ್ಲ ಸವಾಲಾಯಿತು. ಎಲ್ಲರಿಗೂ ಬಾಟಲಿಯಲ್ಲಿ ದೇವಿಯೇ ಕಂಡಳು. ದರ್ಶನ ಮಾಡಿ ಸಾಷ್ಟಾಂಗ ಬಿದ್ದರು. ಹರಕೆ ಹೊತ್ತರು. ಕಾಣಿಕೆ ಇತ್ತರು. ಮಣ್ಣೂರು, ಮಸ್ಯಾಳ, ನಿಚ್ಚಣಿಕಿ, ಬಾರಿಕೊಪ್ಪ, ಮದಗ ಎಲ್ಲ ಹಳ್ಳಿಯ ಭಕ್ತರೂ ದೇವಿಗೆ ನಡೆದು ಕೊಳ್ಳುತ್ತ, ಪಾರವ್ವನ ಬದುಕಿಗೆ ಸಂಪತ್ತು, ಸಮೃದ್ಧಿ ತುಂಬಿಕೊಟ್ಟರು. ದೇವಿಯ ಹೆಸರಿನಲ್ಲಿ ಇಷ್ಟೊಂದು ಸುಖ ಸಿಗುತ್ತಿರುವಾಗ ಪಾರವ್ವ ನೇಮ-ನಿಷ್ಠೆಯಿಂದ ಪೂಜೆ ಮಾಡಿದಳು. ಉಪವಾಸ-ವ್ರತ ಮಾಡಿದಳು. ಪ್ರತಿ ಮಂಗಳವಾರ, ಹುಣ್ಣಿಮೆ, ಅಮಾವಾಸ್ಯೆಗೆ ತಲೆಸ್ನಾನ ಮಾಡಿ ವಿಭೂತಿ, ಅಂಗಾರ ಧರಿಸಿ ಕಣ್ಣು ಮುಚ್ಚಿ ಕೈ ಮುಗಿದು ಕುಳಿತರೆ ಪ್ರತ್ಯಕ್ಷ ದ್ಯಾಮವ್ವ ಅವಳಲ್ಲಿ ಇಳಿದು ಬರುವಳು. ಭಕ್ತರು ಭಯದಿಂದ ನಡುಗಿ ಅಡ್ಡಬೀಳುವರು. ಕಷ್ಟ ಸುಖ ಹೇಳಿಕೊಳ್ಳುವರು.

"ಯವ್ವಾ ಮೂರದಿನಾ ಆತು. ಎಮ್ಮಿ ಮನೀಗಿ ಬಂದಿಲ್ಲ."

"ಬರ್ತ ಮಂಗಳವಾರ ಬರತೈತಿ. ಚಿಂತೀ ಮಾಡಬ್ಯಾಡ" ಪಾರವ್ವ ದೇವಿಯ ಮೇಲಿನ ಅಂಗಾರ ಕೊಡುವಳು.

"ಯವ್ವಾ, ನನ್ನ ಮಗ್ಗ ಜರ ಬರತಾವು." ಕಣ್ಣು ಮುಚ್ಚಿಕೊಂಡೇ ಪಾರವ್ವ ಕೊಡುವ ತೀರ್ಥಕ್ಕೆ ತಾಯಿ ಕೈ ಒಡ್ಡುವಳು.

"ಯವ್ವಾ. ಮದುವ್ಯಾಗಿ ಐದು ವರ್ಸಾದ್ವು. ನನ ಸೊಸಿ ಹೊಟ್ಟೀಲೆ ಆಗವಾಲ್ಲಳು. ಇನ್ನೊಂದು ಮದಿವಿ ಮಾಡಲ್ಯಾ."

"ಬ್ಯಾಡಾ, ಮನೀ ಲಕ್ಷ್ಮಿ ಆಕಿ. ಆಕಿನ್ನ ಉಣಸಬಾರದು. ಹನ್ನೊಂದು ಹುಣ್ಣಿವಿ ದೇವಿಗೆ ನಡಕೋ ಅನ್ನು. ಫಲಾ ಸಿಗತೈತಿ."

"ಯವ್ವಾs, ಈ ಗೌಡನ ಕಾಟಾ ತಾಳಲಾರೆ, ಜೀಂವಾ ಕಳಕೊಳ್ಳಲ್ಯಾ ಅನಸ್ತತಿ" ಹರೆಯದ ವಿಧವೆಯೊಬ್ಬಳು ಹಲಬಿದಳು.

"ಮಗಳ, ಹೆಣ್ಣಂದ್ರು ಭೂಮಿತಾಯಿ ಇದ್ದಾಂಗ. ಆ ತಾಯಿ ಹಾಂಗ ತ್ರಾಳಿಕೋ. ಮಿಕ್ಕಿದಾಗ ಆಕೀನೂ ಬೆಂಕಿ ಕಾರತಾಳ ನೆಪ್ಪಿಡು."

ತನಗ ಒಳ್ಳೆಯದು ಮಾಡಿದ ದೇವಿ ಅವರನ್ನೂ ಕಾಪಾಡಲಿ ಎಂದು ಭಕ್ತಿಯಿಂದ ಬೇಡಿಕೊಳ್ಳುವಳು ಪಾರವ್ವ. ಜಾಯಲ್ಲಿ ಹನಿ ನೀರು ಹಾಕದೆ ಸಂಜೆಯವರೆಗೂ ಬಂದ ಭಕ್ತರಿಗೆ ಅಂಗಾರ, ಹೂವು, ಕಲ್ಲುಸಕ್ಕರೆ ಕೊಟ್ಟು ಕಳಿಸಿದ ಪಾರವ್ವ ರಾತ್ರಿ ಮತ್ತೊಮ್ಮೆ ಸ್ನಾನ ಮಾಡಿ ದೇವರ ಕೋಣೆ ಒಳ ಹೊಕ್ಕು ಬಾಗಿಲು ಹಾಕಿ ಬಂದ ದಕ್ಷಿಣೆಯನ್ನೆಲ್ಲ ಎಣಿಸಿ ಸರಿ ಎರಡು ಪಾಲು ಮಾಡಿ ಒಂದು ಪಾಲು ತನ್ನ ಹಳೆಯ ಸಂದೂಕದಲ್ಲಿಟ್ಟು, ಇನ್ನೊಂದನ್ನು ಜಗಲಿಯ ಮೇಲಿನ ಹುಂಡಿಗೆ ಹಾಕುವಳು. "ತಾಯೀ ನಮ್ಮವ್ವಾ ಹಿಂಗs ನಡಸವ್ವಾ" ಎಂದು ಅಡ್ಡ ಬಿದ್ದು ಹೊರಗೆ ಬರುವಳು.

ಪಾರವ್ವನ ಗುಡಿಸಲು ಹಂಚಿನ ಮನೆಯಾಯಿತು. ದೇವಿಗೆ ಪ್ರತ್ಯೇಕ ಕೋಣೆಯಾಯಿತು. ಬಾಟಲಿಗೆ ಬೆಳ್ಳಿಯ ದೇವಿ ಮುಖವಾಡ ಬಂದಿತು. ಮಕ್ಕಳು ಕೈಗೆ ಬಂದರು. ಹೊಲಗೆಲಸಕ್ಕೆ ಎತ್ತು, ಹೈನಿಗೆ ಆಕಳುಗಳು ಬಂದವು. ಕಾಳವ್ವತ್ತಿ ತನ್ನ ಮಕ್ಕಳ ಜೊತೆ ಇರಲು ಮಣ್ಣೂರಿಗೆ ಹೋದಳು. ಅಪ್ಪ ಸತ್ತ ಮೇಲೆ ಹಣಮಂತ ಮಾಸೂರಿಗೆ ತಿರುಗಿ ಹೋದ. ದೇವಿ ಪೂಜೆಯ ದಿನ ಬಿಟ್ಟು ಉಳಿದ ದಿನ ಪಾರವ್ವ ಮಕ್ಕಳೊಡನೆ ಹೊಲದಲ್ಲಿ ದುಡಿಯುವಳು. ದೇವಿ ನೈವೇದ್ಯವಾಗಿ ಹೆಚ್ಚಾದ ಹಾಲು ಮಾರಲು ಪೇಟೆಗೆ ಹೋಗುವಳು. ತಾನು ಹಾಲು ಕೊಡುವ ಸಾಹೇಬರ ಗುರುತಿನಿಂದ ಹುಂಡಿ ಮತ್ತು ಸಂದೂಕದಲ್ಲಿದ್ದ ಹಣವವನ್ನೆಲ್ಲ ಬ್ಯಾಂಕಿಗೆ ಜಮಾ ಮಾಡಿದಳು. ಚಿಕ್ಕ ಮಗನನ್ನು ಶಾಲೆಗೆ ಹಾಕಿದಳು.

ದೇವಿಯ ಎದುರು ಕಣ್ಣು ಮುಚ್ಚಿ ಕುಳಿತಾಗ ಅವಳ ಮನಸ್ಸಿನ ಆಳದಲ್ಲಿ ಆಗಾಗ ಒಂದು ಪ್ರಶ್ನೆ ಎದ್ದು ಕುಣಿಯುವದು.

ಈ ಬಾಟಲಿಯಲ್ಲಿ ನಿಜವಾಗಿಯೂ ದ್ಯಾಮವ್ವ ಇರುವಳೇ ? ತನ್ನ ಬುದ್ಧಿಗೆ ತೋಚಿದಂತೆ ಭಕ್ತರಿಗೆ ಉತ್ತರ ಹೇಳುವವಳು ತಾನೇ ಅಲ್ಲವೇ ? ದೇವಿ ತನಗೆ ಒಂದು ದಿನವೂ ಕಾಡಿಲ್ಲ. ಮಾತಾಡಿಲ್ಲ, ಅವಳು ಇದ್ದಾಳೆಯೆ ? ಇದ್ದರೆ ಎಲ್ಲಿದ್ದಾಳೆ ? ಹೇಗಿದ್ದಾಳೆ ? ಜನರ ಕೌರ್ಯ, ಮೋಸ, ದುಷ್ಟ ತನಗಳೆಲ್ಲ ತನಗೆ ಅರಿಯದ್ದಲ್ಲ. ದೇವಿ ಇದ್ದರೆ ದುಃಖಿಗಳಿಗೆ ಯಾಕೆ ಮತ್ತಷ್ಟು ಕಷ್ಟ ಕೊಡುತ್ತಾಳೆ ? ಒಳ್ಳೆಯವರಿಗೆ ಒಳ್ಳೆಯದು ಯಾಕೆ ಮಾಡುವದಿಲ್ಲ ? ಈ ಎಲ್ಲ ಸಂಶಯಗಳು ಅವಳನ್ನು ಕಾಡಿದವು. ಇದೇ

ಚಿಂತೆಯಲ್ಲಿ ಅಂತರ್ಮುಖಿಯಾಗುವಳು. ದ್ಯಾಮವ್ವ ಇಲ್ಲವೇ ಇಲ್ಲ, ಎನ್ನುವ ಮಾತು ಮನಸ್ಸಿಗೆ ತಟ್ಟಿ ತಟ್ಟಿ ಹೋಗುತ್ತಿತ್ತು.

ಅಂದು ಸಾಹೇಬರ ಹೆಂಡತಿ ಹೇಳುತ್ತಿದ್ದರಲ್ಲ, "ಈ ಜಗತ್ತನ್ನು ಹುಟ್ಟಿಸಿದ್ದು ಒಂದು ಶಕ್ತಿ. ಆ ಶಕ್ತಿ ಮಾಡಿದ ನಿಯಮದಂತೆ ಸೂರ್ಯ, ಚಂದ್ರ, ಜಗತ್ತು ಎಲ್ಲಾ ನಡೆಯುತ್ತದೆ. ಅದನ್ನೇ ದೇವರು ಎಂದು ಬೇರೆ ಬೇರೆ ಹೆಸರಿಟ್ಟು ಎಲ್ಲರೂ ಪೂಜೆ ಮಾಡ್ತಾರೆ. ಬರಿ ಪೂಜೆ ಮಾಡುವವರಿಂದ ಏನು ಆಗೋದಿಲ್ಲ. ನೀನು, ಮಕ್ಕಳು ಹೊಲದಲ್ಲಿ ದುಡಿತೀರಿ, ಹೊಟ್ಟೆ ತುಂಬ್ತದೆ. ಸಾಹೇಬರು ಆಫೀಸ ಕೆಲಸ ಮಾಡ್ತಾರ. ನಾನು ಮನೆ-ಮಕ್ಕಳು ನೋಡಿಕೋತೀನಿ. ಹೀಗೆ ಎಲ್ಲರೂ ತಮ್ಮ ತಮ್ಮ ಕೆಲಸ ಮಾಡ್ತಾ ಹೋದರೆ ಜೀವನ ಸರಿಯಾಗಿ ನಡೀತದೆ. ನಿಮ್ಮ ಪಾಲಿಗೆ ಬಂದ ಕೆಲಸಾನ ಪೂಜೆ ಅನ್ನೋ ಹಾಗೆ ನಿಷ್ಠೆಯಿಂದ, ಪ್ರೀತಿಯಿಂದ ಮಾಡಬೇಕು" ಎಂದು. ಅವರ ಮಾತು ಕೇಳಿದಾಗಿನಿಂದ ತಾನು ತಪ್ಪು ಮಾಡುತ್ತಿದ್ದೀನೇ ಎಂದು ಅನ್ನಿಸ್ತದೆ. ತನಗೆ ಭಕ್ತಿ ಇದ್ದರೆ, ನಂಬಿಕೆ ಇದ್ದರೆ ತಾನೊಬ್ಬಳು ಪೂಜೆ ಮಾಡಿದರೆ ಸಾಕು. ಉಳಿದವರನ್ನು ನಂಬಿಸೋದು ಮೋಸ. ಪ್ರಪಂಚದಲ್ಲಿಯ ಮೋಸದಲ್ಲಿ ತನ್ನ ಪಾಲೂ ಇದೆಯಲ್ಲಾ ! ಈ ತರದ ವಿಚಾರಗಳ ತಾಕಲಾಟ. ಪಾರವ್ವ ದಿನ ದಿನಕ್ಕೆ ಸೋಲುತ್ತಿದ್ದರೂ ತನ್ನ ಕಾಯಕ ಬಿಟ್ಟಿರಲಿಲ್ಲ.

ಇಂಥ ದಿನಗಳಲ್ಲಿ ಪಾರವ್ವ ಜಡ್ಡಿಗೆ ಬಿದ್ದಳು. ಬಿಟ್ಟೂ ಬಿಡದೆ ಜ್ವರ ಕಾಡಿದವು. ಭಕ್ತಿಯಿಂದ ದೇವಿಯ ಮೇಲಿನ ಹೂವು, ತೊಳೆದ ತೀರ್ಥವನ್ನು ಕುಡಿದು ದಿನ ಕಳೆದಳು. ಜ್ವರ ನಿಲ್ಲಲಿಲ್ಲ. ಇಂಥ ಖಾಯಿಲೆ ಆವಳಿಗೆ ಎಂದೂ ಬಂದಿರಲಿಲ್ಲ. ಅವ್ವನ ಅವಸ್ಥೆ ಕಂಡು ಗಾಬರಿಯಾದ ಸಂಗಣ್ಣ ಡಾಕ್ಟರ ಹತ್ತಿರ ಹೋಗೋಣವೆಂದು ದುಂಬಾಲು ಬಿದ್ದ. ಪಾರವ್ವ ಒಪ್ಪಲಿಲ್ಲ. ಇನ್ನೊಂದು ವಾರ ಕಳೆಯಿತು. ಇನ್ನೂ ಹಾಸಿಗೆ ಬಿಟ್ಟೇಳಲಿಲ್ಲ. ಇದೇ ಸುದ್ದಿ ಮಣ್ಣೂರಿನ ಜನರ ಬಾಯಿಗೆ ಆಹಾರವಾಯಿತು. ಹುಣ್ಣಿವೆ ಬಂದಿತು. ಮಕ್ಕಳು ಎಷ್ಟು ಹೇಳಿದರೂ ಕೇಳದೆ ನಸುಕಿನಲ್ಲಿ ಮೈ ತೊಳೆದು ದೇವಿಯ ಮುಂದೆ ಕುಳಿತಳು ಪಾರವ್ವ. ಜನ ಕೂಡಿದರು. ಅಡ್ಡ ಬಿದ್ದರು. ಪಾರವ್ವ ಕಣ್ಣು ತೆರೆದು ಯಾರನ್ನೂ ನೋಡಲಿಲ್ಲ. ತನ್ನಷ್ಟಕ್ಕೆ, "ನಾ ಹೋಕ್ಕೀನಿ, ನಾ ಒಲ್ಲೆ. ನಾ ಇಲ್ಲೆ ಇರಾಕ ಒಲ್ಲೆ. ಭೂಮಿಗೆ ಭಾರ ಆತು. ಪಾಪ

ಹೆಚ್ಚಾತು. ಕೊಡಾ ತುಂಬಿತು. ಪಾಪದ ಕೊಡಾ ತುಂಬಿತು. ನನಗ ಹೊರಾಕ ಆಗೊದಿಲ್ಲಾ. ನಾ ಹೋಕ್ಕೀನಿ." ಹೀಗೇ ಮಧ್ಯರಾತ್ರಿಯವರೆಗೂ ಬಡಬಡಿಸಿದಳು. ಬಂದ ಜನ ನಡುಗಿ ಹೋದರು.

ಬೆಳಕು ಹರಿಯುತ್ತಿರುವಾಗ ಸಂಗಣ್ಣನನ್ನು ಎಬ್ಬಿಸಿ ಅವನ ಕೈಯಲ್ಲೊಂದು ಕೆಂಪು ವಸ್ತ್ರದ ಗಂಟು ಕೊಟ್ಟಳು. ಏನೂ ತಿಳಿಯದೇ ಮಿಕಿ ಮಿಕಿ ನೋಡಿದ.

“ಇದನ್ನು ನಮ್ಮ ಹೊಲದ ಬಾವ್ಯಾಗ ಹಾಕಿ ಬಾ. ತಿರಿಗಿ ನೋಡ ಬ್ಯಾಡಾ. ನನ್ನ ಕನಸಿನ್ಯಾಗ ದೇವೀ ಬಂದು ನಾ ಹೋಕ್ಕೀನಿ ಅಂದಾಳ. ಹೋಗಲಿ ಬಿಡು." ಖಾಲಿ ಆದ ಜಗಲಿಗೆ ಸನ ಮಾಡಿ ಸಂಗಣ್ಣ ಬಾಪಿಯುತ್ತ ಹೊರಟ.

ತಿರುಗಿ ಬಂದ ಮಗನಿಗೆ ಪಾರವ್ವ, “ಚಕಡೀ ಕೊಳ್ಳ ಕಟ್ಟು ಸಂಗಣ್ಣಾ, ಡಾಕ್ಟರ ಹತ್ತ್ಯಾಕ ಹೋಗೂಣಿ” ಎಂದಳು.

ಹರಿದ ಚೂರು ಹೊಂದಿಸಿ...

ವಿದ್ಯಾರ್ಥಿಗಳೊಡನೆ ಹದಿನೈದು ದಿನ ಉತ್ತರ ಭಾರತ ಟೂರಿನಲ್ಲಿದ್ದೆ. ಪ್ರವಾಸದಲ್ಲಿಯ ಅಡಚಣೆಗಳಿಂದ, ಬೇಜವಾಬ್ದಾರಿ ವಿದ್ಯಾರ್ಥಿಗಳ ಜವಾಬ್ದಾರಿಯಿಂದ, ಅಪಥ್ಯವಾಗುವ ಆಹಾರದಿಂದ ಬೇಸರ, ಸುಸ್ತು ಮುತ್ತಿಕೊಂಡಿತ್ತು. ಪುಟಿದೇಳುವ ಉತ್ಸಾಹದ ಚಿಲುಮೆಯಂಥ ಹುಡುಗ-ಹುಡುಗಿಯರಿಂದ, ಹಿತ-ಮಿತವಾದ ಕುಡಿತದಿಂದ, ಊರೂರು ತಿರುಗಿದ ಅನುಭವಗಳಿಂದ ಎಲ್ಲಕ್ಕೂ ಹೆಚ್ಚಾಗಿ ಸುಮಾ ಹೇಳಿದ–

"ಸರ್ ನಿಮ್ಮ ಪ್ರೀತಿ, ಉತ್ಸಾಹ ನಮ್ಮೊಡನೆ ಬೆರೆಯುವ ರೀತಿ ನೋಡಿದರೆ ನೀವು ಐವತ್ತರ ಸಮೀಪದವರು ಅನಿಸೋದೇ ಇಲ್ಲ" ಎಂದ ಮಾತಿನಿಂದ.

"ನಿಮ್ಮ ಯೌವನದ ಗುಟ್ಟೇನು ಸರ್. ನಿಮ್ಮನ್ನು ಕಂಡರೆ ಹೊಟ್ಟೆ ಕಿಚ್ಚಾಗುತ್ತೆ ಸರ್" ಎನ್ನುತ್ತಿದ್ದ ತುಂಟ ಶ್ರೀನಿವಾಸ. ಪ್ರದೀಪರ ಜೋಕ್ಸ್‌ಗಳಿಂದ ಹೊಸ ಮನುಷ್ಯನಾಗಿದ್ದೆ, ಕವಿತೆ ಬರೆಯುವ ಪ್ರೀತಿ ಉಕ್ಕಿತ್ತು. ನನ್ನ ಕವಿತೆ ಹುಟ್ಟುವುದೇ ಹಾಗೆ, ಕಾಲೇಜಿನ ಪಾಠ ಪ್ರವಚನಗಳಲ್ಲಿ–ಕ್ಷಮಿಸಿ, ಬಹಳಷ್ಟು ಸಾಹಿತಿಗಳು ಅಧ್ಯಾಪಕರೇ ಆಗಿರುವುದರಿಂದ ಹೀಗೆ ಹೇಳಿದ್ದೇನೆ. ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವವ. ಸಾಹಿತಿ ಎಂದು ಹೆಸರು ಪಡೆದ ಮೇಲೆ ಅವನ ಸಾಹಿತ್ಯ ರಚನೆಯಲ್ಲಿ ಒಂದು ಕ್ರಮ, ಶಿಸ್ತು ಇರುತ್ತದೆ. ಆದರೆ ನನ್ನದೇ ಬೇರೆ ರೀತಿ, ತಿಂಗಳು ಗಟ್ಟಲೆ ಗುಪ್ತವಾಗಿದ್ದದ್ದು ಒಮ್ಮೆಲೆ ಕಾರಂಜಿಯಾಗಿ ಪುಟಿಯುತ್ತದೆ.

ಅಂದು ಕವಿತೆ ಬರೆದೇ ತೀರಬೇಕೆಂಬ ಹಟದಿಂದ ಬೆಳಿಗ್ಗೆ ವಾಕಿಂಗ್ ಹೋಗಿ ಗಂಗಾ ನದಿ ತೀರದಲ್ಲಿ ಜನಸಂದಣಿ ಬಿಟ್ಟು ದೂರ ಕೂತಿದ್ದೆ. ಮನಸ್ಸು ಹೊರಗೆ ಹರಿಯುತ್ತಿದ್ದರೂ ಚಿತ್ತ ಒಳಮುಖವಾಗುತ್ತಿರುವಾಗ ತಟ್ಟನೆ ಕವಿತೆಯ ಸಂಪರ್ಕ ಕಡಿದುಹೋಗಿತ್ತು. ದಿನೇಶ ನಾನು ಕುಳಿತಲ್ಲಿಯೇ ಬಂದಿದ್ದ. ನನ್ನ ಅಸಮಾಧಾನವನ್ನು ಕಂಡೂ ದಿನೇಶ ಅಲ್ಲಿಂದ ಕದಲಲಿಲ್ಲ. ಹತ್ತಿರವೇ ತಾನೂ ಕುಳಿತು ನದಿಯನ್ನು ದಿಟ್ಟಿಸುತ್ತಿದ್ದ. ಇಲ್ಲಿಯವರೆಗೆ ಬಂದವ ಮಾತನಾಡಲು ಹಿಂಜರಿಯುತ್ತಿದ್ದ. ಬೇರೆಯವರ ಮುಖ ನೋಡಿ ಮನಸ್ಸು ತಿಳಿಯುವ ಶಕ್ತಿ ತನಗಿದೆ ಎಂದು ಆಗಾಗ ಕೊಚ್ಚಿಕೊಂಡು ಹೆಮ್ಮೆ ಪಡುತ್ತಿದ್ದೆ. ಆದರೂ ಆಗ ತನಗಾದ ಬೇಸರ ಅವನಿಗೆ ತಿಳಿಯಲಿ ಎಂದು ನಾನೂ ಮೌನವಾಗಿದ್ದೆ. ಹಳೆನೀರು ಹರಿದು ಹೋಗಿ ಹೊಸ ನೀರು ಬರುವುದನ್ನು ನೋಡುತ್ತಾ ಕಾದು ಕುಳಿತಿದ್ದೆವು ಇಬ್ಬರೂ. ತುಟಿ ಕಚ್ಚುತ್ತ ಮಾತು ನುಂಗುತ್ತ ಕಡ್ಡಿಯಿಂದ ನೆಲ ಕೆರೆಯುತ್ತಿದ್ದ ದಿನೇಶ ನನ್ನಲ್ಲಿ ಕನಿಕರ ಹುಟ್ಟಿಸಿದ. ವಿದ್ಯಾರ್ಥಿಗಳ ಸಮಸ್ಯೆಗಳು, ಕೌಟುಂಬಿಕ ಅಡಚಣೆಗಳು, ಪ್ರೇಮ ಪ್ರಕರಣಗಳು, ಕುಡಿತ ಬಡಿದಾಟಗಳು ಎಲ್ಲವನ್ನೂ ಕೇಳಿ ತಿಳಿದು, ಸಹಾಯ ನೀಡುತ್ತಿದ್ದ ನನ್ನಲ್ಲಿಯ ಜನಪ್ರಿಯ ಅಧ್ಯಾಪಕ ಎಚ್ಚೆತ್ತ.

"ಹಲೋ, ದಿನೇಶ ಏನಾಯ್ತು, ಏನು ವಿಷಯ ಹೇಳಿ" ಹೇಳಿಕೊಂಡು ಹಗುರ ಮಾಡಿಕೊಳ್ಳಲಿ ಎನ್ನುವ ಔದಾರ್ಯದಿಂದ ಕೇಳಿದೆ. ತುಟಿಗಳಿಂದ ಸದ್ದು ಹೊರಬರಲಿಲ್ಲ.

"ಪ್ರೇಮ ಪ್ರಕರಣದಲ್ಲಿ ಸಿಕ್ಕಿದ್ದೀರಾ? ಪ್ರೇಮಿಗಳಿಗೆ ನನ್ನ ಹೃದಯದ ಮೂಲೆಯಲ್ಲಿ ಒಂದು ಮೆತ್ತನ್ನ ಹಾಸಿಗೆಯಿದೆ. ಇಲ್ಲವೆನ್ನುವಂತೆ ತಲೆ ಅಡಿಸಿದ, ಅವನು ಸುಮಾಳನ್ನು ಪ್ರೀತಿಸುತ್ತಿದ್ದಾನೆನ್ನುವ ಸಂಶಯ ನನ್ನನ್ನು ಬಾಧಿಸುತ್ತಿತ್ತು. ಈ ಬಾಧೆಗೆ ಕಾರಣ, ಸುಮಳ ಅಗಲ ಕಣ್ಣುಗಳಲ್ಲಿಯ ಪ್ರೀತಿ ನನ್ನನ್ನೂ ಆಕರ್ಷಿಸಿದ್ದೇ. ಹಗುರವಾಗಿ ಮತ್ತೆ ಕೇಳಿದೆ.

"ನಾನೊಂದು ತಪ್ಪು ಮಾಡಿದ್ದೀನಿ ಸರ್."

"ಮನುಷ್ಯನಾಗಿ ಹುಟ್ಟಿ ತಪ್ಪು ಮಾಡೋದು ಸಹಜ. ಆದರೆ ಅದನ್ನು ತಿಳಿದು ತಿದ್ದಿಕೊಳ್ಳೋದು ಬಹಳ ಮುಖ್ಯ, ದಿನೇಶ."

"ತಿದ್ದಿಕೋಬೇಕು ಅಂತಲೇ ಇಲ್ಲಿಗೆ ಬಂದೆ. ವರ್ಷ ಕಳೆದರೂ ಹೇಳಲಾಗದ್ದನ್ನು ಈಗ ನಾನು ಹೇಳಲೇಬೇಕು." ಮತ್ತೆ ಸುಮ್ಮನಾದ. ಚಿಂತೆ ತುಂಬಿದ ಅವನ ಮುಖ, ನದಿಯತ್ತ ದಿಟ್ಟಿಸುತ್ತಿದ್ದ ರೀತಿ ನೋಡಿದಾಗ ನನ್ನ ಕಣ್ಣೆದುರೇ ನದಿಗೆ ಧುಮುಕುತ್ತಾನೇನೋ ಎಂದು ಭಯವಾಯಿತು. ಅವನ ಭುಜ ಸವರಿ ಪ್ರೀತಿಯಿಂದ ಮತ್ತೆ ಕೇಳಿದೆ.

"ನೀವು ನನ್ನನ್ನು ಕ್ಷಮಿಸುತ್ತೀರಾ", ಗೋಗರೆದ.

"ನೀನು ಮಾಡಿದ ತಪ್ಪೇನು ಹೇಳಪ್ಪ ಆಮೇಲೆ ಮುಂದಿನ ಮಾತು. ಅಷ್ಟಾಗಿ ಕ್ಷಮಿಸೋದಕ್ಕೆ ನಾನ್ಯಾರು, ನನಗೆ ಸಂಬಂಧವೇನು ತಿಳೀಬೇಕಲ್ಲ. ಹೆದರಬೇಡ ಹೇಳು."

"ನಾನು.... ನಾನು ಕಾಶಿನಾಥರ ಭಾವಮೈದುನ, ಅಂದರೆ ಅಷ್ಟು ಹತ್ತಿರದ ಸಂಬಂಧವಲ್ಲ. ಅವರ ಹೆಂಡತಿಯ ಚಿಕ್ಕಮ್ಮನ ಮಗ. ನೀವು ಅವರು ಚಡ್ಡಿದೋಸ್ತರು, ಗಳಸ್ಯ ಕಂಠಸ್ಯ..."

"ಅದೆಲ್ಲಾ ಹಳೇ ವಿಷಯ. ಈಗ ಅಂಥ ಸಂಬಂಧವೇನೂ ಉಳಿದಿಲ್ಲ" ನನ್ನ ಮುಖ ಕೆಂಪಾಗಿತ್ತು. ಒರಟಾಗಿಯೇ ಹೇಳಿನೆ.

"ಅದು ನನಗೆ ಗೊತ್ತಿದೆ ಸರ್, ನಿಮ್ಮ ಗೆಳೆತನ ಮುರಿಯೋಕೆ ನಾನೇ ಕಾರಣ. ನೀವೊಮ್ಮೆ ಅವರಿಗೆ ಕೈಸಾಲ ಎಂದು ಸಾವಿರ ರೂಪಾಯಿ ಕೊಟ್ಟಿದ್ದಿರಿ. ಆದಷ್ಟು ಬೇಗ ಮುಟ್ಟಿಸ್ತೀನಿ ಅಂತ ಅವರೂ ಹೇಳಿದ್ದರು."

"ಸಾವಿರ ರೂಪಾಯಿಗಾಗಿ ನಾನು ಗೆಳೆತನ ಬಿಟ್ಟಿಲ್ಲ. ಸ್ನೇಹಕ್ಕಾಗಿ ಜೀವ ಕೊಡೋದಕ್ಕೂ ನಾನು ಸಿದ್ಧ, ಆಗ ನಾನೂ ತುಂಬಾ ಕಷ್ಟದಲ್ಲಿದ್ದೆ. ಅಪ್ಪ ಆಸ್ಪತ್ರೆಯಲ್ಲಿದ್ದರು. ಮಗನ ಕಾಲೇಜು ಫೀಜು ತುಂಬಬೇಕಿತ್ತು. ಇದುವರೆಗೂ ಹಣ ನನಗೆ ತಿರುಗಿ ಬರಲಿಲ್ಲ. ಕೊಟ್ಟ ಮಾತಿಗೆ ತಪ್ಪಿದವ ನನ್ನ ಗೆಳೆಯನೇ ಅಲ್ಲ, ವಂಚಕ. ಅವನು ನನ್ನ ಹತ್ತಿರವೂ ಸುಳೀಬಾರದು. ಆ ಮಾತೆಲ್ಲ ಯಾಕೀಗ" ಎದ್ದು ಹೊರಡಲು ತಯಾರಾದೆ. ನನ್ನ ಒಂದು ಸುಂದರ ಬೆಳಗಿನ ಅನುಭವ ಹಾಳಾಗಿತ್ತು. ಕವಿತೆ ಕಮರಿ ಹೋಗಿತ್ತು.

"ಸ್ವಲ್ಪ ನಿಲ್ಲಿ ಸರ್, ಅದನ್ನೇ ನಾನೀಗ ಹೇಳ್ತಿರೋದು. ಅವರು ನನ್ನ ಕೈಯಲ್ಲಿ ಹಣ ಕೊಟ್ಟು ನಿಮಗೆ ಮುಟ್ಟಿಸಲು ಹೇಳಿದರು. ನಾನು ಅದೇ ನಿಮ್ಮ ಕಾಲೇಜಿಗೆ ಬಂದಿದ್ದೆ. ಮೋಜಿಗೆ ಆ ಹಣ ಹಾರಿಸಿಬಿಟ್ಟೆ. ಅಷ್ಟೇ

ಅಲ್ಲ. ಸಾಲ ಮುಟ್ಟಿದ ಮೇಲೆ ನೀವೂ ಕೈಸಾಲ ಕೇಳಿದ್ದೀರಿ ಎಂದು ಹೇಳಿ ಅವರು ಕೊಟ್ಟ ಆ ಸಾವಿರ ರೂಪಾಯಿಯನ್ನೂ ಗುಳುಂ ಮಾಡಿಬಿಟ್ಟೆ."

ಸಿಟ್ಟು ಬಂದರೆ ನಾನು ಮನುಷ್ಯನೇ ಅಲ್ಲ. ಮೈ ಉರಿಯುತ್ತಿತ್ತು. ಅವನನ್ನು ಎತ್ತಿ ನದಿಯಲ್ಲಿ ಒಗೆಯಲು ಭುಜ ಕುಣಿಯುತ್ತಿದ್ದವು.

"ನಡಿ ಇಲ್ಲಿಂದ. ಓಡು, ದೂರ ಹೋಗು ನನ್ನಿಂದ" ಕಿರುಚಿದೆ. ಬಿಳಿಚಿಕೊಂಡ ದಿನೇಶ. "ನೀವು ಏನು ಬೇಕಾದರೂ ಶಿಕ್ಷೆ ಕೊಡಿ ಸರ್. ಪೂರ್ತಿ ಹೇಳೇಬಿಡ್ತೀನಿ. ಅವರ ಆರೋಗ್ಯ ಚೆನ್ನಾಗಿರಲಿಲ್ಲ. ಹಣದ ಅವಶ್ಯಕತೆ ತುಂಬಾ ಇತ್ತು. ಆಗಾಗ ಅಕ್ಕನ ಹತ್ತಿರ ಹೇಳ್ತಿದ್ದರು "ಚಂದ್ರುಗೆ ಏನು ತೊಂದರೆಯೋ ಏನೋ. ಹಣ ಬೇಗ ತಿರುಗಿ ಕೊಡ್ತೀನಿ ಅಂತ ಹೇಳಿದವ ಇನ್ನೂ ಕೊಟ್ಟಿಲ್ಲ. ಅವನನ್ನು ಹೇಗೆ ಕೇಳೋದು ಅಂತ. ಆಗಲೂ ನಾನು ನಿರ್ಲಜ್ಜನಾಗಿ ಸುಮ್ಮನಿದ್ದೆ."

ಅಷ್ಟು ಹಣವನ್ನು ನಾನು ಗೆಳೆಯರೊಡನೆ ಗುಂಡು ಪಾರ್ಟಿಯಲ್ಲಿ ಕಳೆಯುತ್ತಿದ್ದೆ. ಆದರೂ ಗೆಳೆಯ ಕೊಟ್ಟ ಮಾತಿಗೆ ತಪ್ಪಿದನಲ್ಲ ಎಂದು ಅವನ ಸಂಪರ್ಕವನ್ನೇ ಬಿಟ್ಟುಬಿಟ್ಟಿದ್ದೆ. ತಪ್ಪು ನನ್ನದೇ. ನಾವಿಬ್ಬರೂ ಭೆಟ್ಟಿಯಾಗಿದ್ದರೇ....

"ಊರಿಗೆ ಹೋದ ತಕ್ಷಣ ಆವನನ್ನು ಭೆಟ್ಟಿಯಾಗ್ತೀನಿ".

"ಅದು ಸಾಧ್ಯವಿಲ್ಲ ಸರ್. ಎರಡು ತಿಂಗಳ ಹಿಂದೆ ಅವರು ತೀರಿಕೊಂಡ್ರು, ಕೊನೆಗಾಲಕ್ಕೆ ಅಕ್ಕ ಅವರನ್ನ ತವರು ಮನೆಗೆ ಕರೆದುಕೊಂಡು ಹೋಗಿದ್ರು. ಮಕ್ಕಳ ಜೊತೆಗೆ ಇನ್ನೂ ಅಲ್ಲಿಯೇ ಇದ್ದಾರೆ."

ನನ್ನ ಸಿಟ್ಟು ಆವೇಶ ಎಲ್ಲ ಇಳಿದುಹೋಯಿತು. ಮುಂಗೋಪಿಯಾಗಿ ತಪ್ಪಿದೆ. ಒಂದು ಸಲ ಆವನಲ್ಲಿ ಹೋಗಿ ಒಂದು ಮಾತು ಕೇಳಬೇಕಿತ್ತು. ನನ್ನ ಅಹಂ ಅಡ್ಡಿ ಬಂದಿತು. ಅಲ್ಲಲ್ಲಿ ಭೆಟ್ಟಿ ಆದಾಗಲೂ ನಿರ್ಲಕ್ಷಿಸಿದೆ. ಈ ದಿನೇಶನಷ್ಟೇ ನನ್ನದೂ ತಪ್ಪು. ನಿತ್ರಾಣನಾಗಿ ನಡೆಯಲೂ ಶಕ್ತಿ ಇಲ್ಲದೆ ಲಾಡ್ಜ್ ಕಡೆಗೆ ಹೊರಟೆ.

* * *

ಎರಡು ಪೆಗ್ ವಿಸ್ಕಿ ಮುಗಿಸಿ ಮೂರನೆಯದನ್ನು ಹಾಕಿಕೊಳ್ಳುವ ಮೊದಲೇ ಸುಮಾ ಒಳಗೆ ಬಂದಿದ್ದಳು.

"ಕುಡಿಯೋದು ಸಾಕು ಸರ್. ದಿನೇಶ ಎಲ್ಲ ಹೇಳಿದ. ಆದದ್ದನ್ನೆಲ್ಲ ಮರೆತು ಬಿಡಿ" ಭುಜವನ್ನು ಮೃದುವಾಗಿ ಒತ್ತಿದಳು.

"ಇಲ್ಲಿ ಬಾ ಸುಮಾ. ನನ್ನ ಹತ್ತಿರ ಕೂತ್ಕೋ. ನಾನು ಸಾಯೋ ವರೆಗೂ ಕಾಶೀನಾಥನನ್ನ ಮರೆಯೋದಕ್ಕೆ ಸಾಧ್ಯವಿಲ್ಲ. ಇಪ್ಪತ್ತು ಸಾವಿರ ರೂಪಾಯಿಗಾಗಿ ಚಿನ್ನದಂಥ ಗೆಳೆಯನನ್ನ ಕಳೆದುಕೊಂಡೆನಲ್ಲ. ಅವನು ಮತ್ತೆ ಸಿಗ್ತಾನ್ಯೇ. ವಂಚಕ ಅಂತ ಎಲ್ಲರ ಹತ್ತಿರ ಹೀನಾಯ ಮಾಡಿದೆ. ನಾನು, ನಾನೇ ವಂಚಕ, ಲೋಭಿ, ದುಷ್ಟ. ಅವನು ಸಾಯುವಾಗ ನನ್ನ ಬಗ್ಗೆ ಎಂಥ ಕೆಟ್ಟ ಭಾವನೆ ಇಟ್ಟುಕೊಂಡಿರಬಹುದು. ಅದನ್ನ ತಿದ್ದೋಕೆ ಸಾಧ್ಯವೇ ?" ತಲೆಯ ಮೇಲೆಕ್ಕೆ ಹೊತ್ತೆ ಮತ್ತು ನಿಧಾನವಾಗಿ ಏರುತ್ತಿತ್ತು.

"ಅಷ್ಟೊಂದು ಸೆಂಟಿಮೆಂಟಲ್ ಆಗಬೇಡಿ ಸರ್. ಸಮಾಧಾನ ಮಾಡ್ಕೊಳ್ಳಿ" ಮತ್ತಿನಿಂದಾಗಿ ಅವಳ ದನಿ ಪಿಸುದನಿಯಾಗಿ, ಮಾದಕವಾಗಿ ಕೇಳಿಸಿತು. ಅವಳ ಸೊಂಟಕ್ಕೆ ಕೈ ಹಾಕಿ ಹತ್ತಿರ ಎಳೆದುಕೊಂಡೆ "ಸುಮಾ, ನೀನು ಬಹಳ ಜಾಣೆ, ಒಳ್ಳೇ ಹುಡುಗಿ. ನಿನ್ನನ್ನ ನಾನು ಮೆಚ್ಚಿದ್ದೀನಿ." ಕೊಸರಿಕೊಳ್ಳುತ್ತಿದ್ದ ಅವಳನ್ನು ಬಿಗಿಯಾಗಿ ಹಿಡಿದಿದ್ದೆ. ಅವಳು ನನಗಿಂತಲೂ ಚುರುಕು. ಕಣ್ಣೆ ಕಿತ್ತ ಕರುವಿನಂತೆ ಜಿಗಿದೆದ್ದ ಸುಮಾ.

"ಪ್ಲೀಸ್ ಸರ್, ನಿಮ್ಮನ್ನ ಕಂಡರೆ ನನಗೆ ತುಂಬಾ ಗೌರವವಿದೆ, ಪ್ರೀತಿಯಿದೆ, ಹುಚ್ಚರ ಹಾಗಾಡಬೇಡಿ. ನಾನು ದಿನೇಶನವಳು. ಪರೀಕ್ಷೆ ಮುಗಿದೊಡನೆ ನಾವು ಮದುವೆ ಆಗ್ತೀವಿ."

ನನ್ನ ರಕ್ತ ಕುದಿಯಿತು. "ದಿನೇಶ ಒಳ್ಳೇ ಹುಡುಗನಲ್ಲ. ಸುಳ್ಳ, ಕಳ್ಳ, ಅವನೇ ಇದಕ್ಕೆಲ್ಲ ಕಾರಣ" ಚೀರಿದೆ.

ಅವಳು ಶಾಂತವಾಗಿ, ದೃಢವಾಗಿ ಹೇಳಿದಳು "ನನಗೆ ಎಲ್ಲಾ ಗೊತ್ತು. ನಿಮ್ಮ ಕ್ಷಮೆ ಕೇಳಿಕೊಳ್ಳೋದಕ್ಕೆ ನಾನೇ ಅವನಿಗೆ ಹೇಳಿದವಳು. ಮನುಷ್ಯ ತಪ್ಪು ಮಾಡೋದು ಸಹಜ. ಅದನ್ನ ತಿದ್ದಿಕೊಳ್ಳೋದು ಮುಖ್ಯ ಅಂತ ನೀವೇ ಹೇಳಿದ್ದಿರಿ. ಅವನೀಗ ನಿಜವಾದ ಮನುಷ್ಯ, ನೀವು ಮಾತ್ರ ರಾಕ್ಷಸ ರಾಗಬೇಡಿ ಪ್ಲೀಸ್."

ಸುಮಾ ಹೊರಟು ಹೋದಳು. ನಾನು ಹಾಸಿಗೆಯಲ್ಲೇ ಕುಸಿದು ಬಿದ್ದೆ. ಸುಮಾ ಎಲ್ಲ ಹುಡುಗಿಯರ ಹಾಗಲ್ಲ. ಕೈ ಚಾಚಿದರೆ ತೆಕ್ಕೆಗೆ ಬೀಳುವ ಹುಡು

ಗಿಯುರನ್ನು ನೋಡಿದ್ದೆ. ಅವಳ ಪ್ರತ್ಯೇಕತೆಯೆ ನನ್ನನ್ನು ಆಕರ್ಷಿಸ್ತಾ ಇತ್ತು. ನನ್ನ ಸಂಶಯ ನಿಜವಾಗಿತ್ತು. ದಿನೇಶ–ಸುಮಾ ಪ್ರೇಮಿಗಳು. ಸುಮಾಳಲ್ಲಿಯ ನನ್ನ ಪ್ರೀತಿ ಹೆಚ್ಚಾಯಿತೇ ಹೊರತು ತನ್ನನ್ನು ಅವಮಾನಿಸಿದಳೆಂದು ಕಡಿಮೆ ಯಾಗಲಿಲ್ಲ. ಇದಕ್ಕೆ ಕಾರಣ ಅವಳು ನನಗೆ ಲಕ್ಷ್ಮಿಯನ್ನು ನೆನಪಿಗೆ ತರುತ್ತಾಳೆ. ಲಕ್ಷ್ಮಿ ಯಾರೆಂದು ನಿಮಗೆ ಗೊತ್ತಿಲ್ಲ. ನಿಮ್ಮನ್ನು ಹೆಚ್ಚು ಊಹೆಯಲ್ಲಿಡುವದಿಲ್ಲ...

ಸಾಮಾನ್ಯವಾಗಿ ಸಂಜೆ ಹೊತ್ತು ಸಿಟಿಮಾರ್ಕೆಟ್ಟಿನಲ್ಲಿ ತುಂಬಾ ರಷ್.

"ಚಂದ್ರು ಗಾಡಿ ನಿಲ್ಸಿ ನಾನು ಬೇಕರಿಯಲ್ಲಿ ಮಕ್ಕಳಿಗೆ ತಿಂಡಿ ತೊಗೋ ತೀನಿ" ಸ್ಕೂಟರ ಇಳಿದು ಹೋದಳು ಇಂದಿರಾ. ಹೆಸರು ಮಕ್ಕಳದು, ಆದರೆ ಕುರುಕಲು ತಿಂಡಿ, ಕುಡಿಯುವಾಗ ತನಗೇ ಬೇಕು. ಅಲ್ಲೇ ನಿಂತು ಸಿಗರೇಟು ಹೊತ್ತಿಸಿದೆ.

"ಎಕ್ಸ್‌ಕ್ಯೂಸ್ ಮಿ" ಬದಿಗೆ ಸರಿದು ನಿಂತೆ. "ಓ, ಲಕ್ಷ್ಮೀ" ಆಶ್ಚರ್ಯ ದಿಂದ ತೆರೆದ ಬಾಯಿಂದ ಬೀಳುತ್ತಿದ್ದ ಸಿಗರೇಟು ಹಿಡಿದುಕೊಂಡೆ.

"ಹಲೋ ಚಂದ್ರು, ಎಷ್ಟೋ ವರ್ಷಗಳಾದ್ವಲ್ಲ ಭೆಟ್ಟಿ ಆಗಿ." ಲಕ್ಷ್ಮಿಗೂ ಅಷ್ಟೇ ಆಶ್ಚರ್ಯವಾಗಿತ್ತು. ಇಂದಿರಾ ಬಂದೆ ಬಿಟ್ಟಳು.

"ಇಂದು, ಇವರು ಲಕ್ಷ್ಮೀ, ನಮ್ಮೂರವರೇ. ಚಿಕ್ಕಂದಿನಲ್ಲಿ ನನ್ಜೊತೆ ಕೂಡಿ ಆಡಿದವರು. ನನ್ನ ಹೆಂಡತಿ ಇಂದಿರಾ" ಅಷ್ಟರಲ್ಲಿ ಸಿಗರೇಟು ಹೊಸಕಿದ್ದೆ.

"ಬಾಲ್ಯಕಾಲ ಸಖಿ ಅಂತ ಚೇಷ್ಟೆ ಮಾಡ್ತಿದ್ದೆಯಲ್ಲ ಚಂದ್ರು ಮತ್ತೆ ಈ ಬಹುವಚನ ಯಾಕೆ ? ಇವನು ತುಂಬಾ ತುಂಟ. ಇಂದಿರಾ ಆಗಲೇ ನಿಮಗೂ ಗೊತ್ತಾಗಿರಬೇಕು" ಮೆಚ್ಚುಗೆಯಿಂದ ಇಂದಿರಾಳನ್ನು ನೋಡಿ ಕಣ್ಣು ಮಿಟುಕಿ ಸಿದಳು. ಇವಳೇನೂ ಬದಲಾಗಿಲ್ಲ, ಹಿಂದಿನ ಅದೇ ಲಕ್ಷ್ಮಿ ಎಂದೆನಿಸಿ ಖುಷಿ ಯಾಯಿತು,

"ಇಂದಿರಾ ಏನೂ ಕಡಿಮೆಯವಳಲ್ಲ ಲಕ್ಷ್ಮಿ, ನನ್ನ ವಿದ್ಯಾರ್ಥಿನಿಯಾಗಿ ದ್ದಾಗಲೆ ಗಾಳ ಬೀಸಿ ನನ್ನ ಗಂಟು ಹಾಕ್ಕೊಂಡು ಬಿಟ್ಲು" ಎಂದೆ.

"ಓಃ ನಿಮ್ಮದು ಲವ್ ಮ್ಯಾರೇಜು. ಅಭಿನಂದನೆಗಳು. ಮಕ್ಕಳು?"

"ಇಬ್ಬರು ಗಂಡು ಮಕ್ಕಳು. ಈಗ ಉಳಿದಿರೋದು ಬರಿ ಮ್ಯಾರೀಡ್ ಲೈಫು, ಲವ್ ಗಿವ್ ಏನೂ ಇಲ್ಲ" ಇಂದಿರಾ ಮೂಗು ಎಳೆದಳು.

"ಹಂ, ಕೃಷ್ಣ ಅಂತ ಅವನಿಗೆ ಇನ್ನೊಂದು ಹೆಸರು. ಎಲ್ಲರೂ ಅವನಿಗೆ ಸೋತಿರೋರೆ. ನನ್ನೊಬ್ಬಳನ್ನು ಬಿಟ್ಟು" ತಮಾಷೆಯಾಗಿ ಮಾತಾಡುತ್ತಿದ್ದ ಇಬ್ಬರನ್ನೂ ಕಣ್ಣಲ್ಲೇ ಅಳೆಯುತ್ತಾ ಹೋಲಿಸುತ್ತಾ ನಗುತ್ತಿದ್ದೆ.

"ಏನದು ? ಸೋಲು, ಗೆಲುವಿನ ಮಾತು, ಇಂಥ ಮಾರ್ಕೆಟ್ಟಿನಲ್ಲಿ ನಿಂತುಕೊಂಡು" ಜುಬ್ಬ ಪಾಯಿಜಾಮದ ಕನ್ನಡಕಧಾರಿ ಹತ್ತಿರ ಬಂದರು.

"ಶ್ರೀ ಮತ್ತು ಶ್ರೀಮತಿ ಚಂದ್ರಶೇಖರ. ನನ್ನ ಸ್ಕೂಲಿನ ಸಹಪಾಠಿ ಚಂದ್ರು ಮಿ. ಮಂಜುನಾಥ, ನಾನು ಸೋತಿದ್ದು ಇವರಿಗೆ ಮಾತ್ರ. ವೃತ್ತಿಯಿಂದ ಇಂಜಿನಿಯರ್, ಸ್ವಂತ ಕಾಂಟ್ರ್ಯಾಕ್ಟ್ ಮಾಡ್ತಾರೆ."

"ನೀವೂ ಜಾಬ್ ಮಾಡ್ತೀರಾ ಲಕ್ಷ್ಮೀ" ಇಂದಿರಾ ಕುತೂಹಲ ತಡೆಯಲಿಲ್ಲ.

"ನಾನೀಗ ಡಾ. ಉಷಾದೇವಿ ಎಂ.ಡಿ. ಗೈನಿಕ್. ಸ್ವಂತ ಪ್ರಾಕ್ಟೀಸ್ ಮಾಡ್ತಿದ್ದೀನಿ. ಶಿವಾಜಿನಗರದಲ್ಲೇ ಮನೆ. ನರ್ಸಿಂಗ್ ಹೋಂ ಇದೆ. ಇಬ್ಬರೂ ಮಕ್ಕಳ ಜೊತೆ ಬನ್ನಿ" ಲಕ್ಷ್ಮಿ ವಿಳಾಸ ಕೊಟ್ಟಳು. "ಖಂಡಿತ ಬರ್ಬೇಕು" ವಿಶ್ ಮಾಡಿ ಇಬ್ಬರೂ ಕಾರಿನತ್ತ ಹೊರಟರು. ಮನೆ ಮುಟ್ಟುವಷ್ಟರಲ್ಲಿ ಇಂದಿರಾ ನೂರೆಂಟು ಪ್ರಶ್ನೆ ಕೇಳಿದ್ದಳು. ಎಲ್ಲಕ್ಕೂ ಸಮಾಧಾನವಾಗಿಯೇ ಉತ್ತರಿಸಿದ್ದೆ.

ತಾಯಿ ತೀರಿಕೊಂಡಾಗ ಲಕ್ಷ್ಮಿ ಶವದ ಮೇಲೆ ಬಿದ್ದು ಹೊರಳಾಡಿ ಅತ್ತದ್ದು, ತನ್ನ ತಾಯಿ ಅವಳನ್ನು ಎತ್ತಿಕೊಂಡು ಮನೆಗೆ ಬಂದು ತನ್ನ ಹತ್ತಿರ ಕೊಟ್ಟು, ಸಾವಿತ್ರಮ್ಮನ ಶವಸಂಸ್ಕಾರಕ್ಕೆ ಹೋದದ್ದು ಇನ್ನೂ ಕಣ್ಣ ಮುಂದೆ ಕಟ್ಟಿದ ಹಾಗಿದೆ. ಅವಳಿಗೆ ಎರಡನೆ ತಾಯಿ ಬಂದ ಮೇಲೆ ತಮ್ಮ ಮನೆಯಲ್ಲೇ ಹೆಚ್ಚು ಹೊತ್ತು ಕಳೀತಾ ಇದ್ಲು. ಮನೆಯಲ್ಲಿ ಮತ್ತೆ ಚಿಕ್ಕ ಮಕ್ಕಳಿಲ್ಲದ್ದರಿಂದ ತಾನೇ ಅವಳ ಸಂಗಾತಿ. ಆಟ, ಪಾಠ, ಜಗಳ ಎಲ್ಲದರಲ್ಲೂ ತುಂಬಾ ದಿಟ್ಟ ಹುಡುಗಿ ಲಕ್ಷ್ಮಿ ಓದಿನಲ್ಲಿ ಮುಂದು. ಸ್ಕೂಲಿನಲ್ಲಿ ಹುಡುಗರು ಛೇಡಿಸೋದಕ್ಕೆ ಹೆದರ್ತಿದ್ದರು. ಇಂಥ ಪುಟ್ಟ ಸಖಿ ತನ್ನ ಕಣ್ಣ ಮುಂದೆ ಬೆಳೆಯು ತ್ತಿದ್ದಂತೆ ಏನೇನೋ ಮಾತಿಗೆ ನಿಲುಕದ ಭಾವನೆಗಳು ತನ್ನಲ್ಲಿ ಹುಟ್ಟುತ್ತಿದ್ದವು.

ಆ ವಯಸ್ಸಿಗೆ ತಕ್ಕಂತೆ ಚಂದ ಕಾಣುವ ಹುಡುಗಿಯರನ್ನೆಲ್ಲ ಪ್ರೀತಿಸುತ್ತ ತನ್ನ ಭಾವನೆಗಳನ್ನು ಅಕ್ಷರ ರೂಪದಲ್ಲಿ ಇಳಿಸಿ ಒಂದು ಕಾಗದ ಬರೆದು ಲಕ್ಷ್ಮಿಗೆ ಕೊಟ್ಟಿದ್ದೆ. ಅವನ್ನು ತಂದು "ನಾನು ನಿನ್ನೊಡನೆ ಹುಡುಗನಂತೆಯೇ ಬೆಳೆದಿದ್ದೇನೆ ಚಂದ್ರು. ನಾನು ನಿನ್ನ ಸಖಿ ಅಲ್ಲ ಸಖ, ತಿಳಿದುಕೋ" ಎಂದು ಬೆದರಿಸಿ ಚರ ಚರ ಹರಿದು ಹಾಕಿದಾಗ ನಾನು ಬೆಪ್ಪಾಗಿ ನಿಂತಿದ್ದೆ. ಅಲ್ಲಿನ ವಿದ್ಯಾಭ್ಯಾಸ ಮುಗಿದೊಡನೆ ಅವಳ ಅಜ್ಜನ ಊರಿಗೆ ಹೋಗಿ ಮೆಡಿಕಲ್ ಕಾಲೇಜು ಸೇರಿದ್ದಳು. ಆ ನಂತರ ಇಂದೇ ಅವಳ ಭೇಟಿ.

ಎಲ್ಲ ಕೇಳಿದ ಇಂದಿರಾ "ಅದಕ್ಕೇ ಅವಳು ನಿಮಗೆ ಕೃಷ್ಣ ಎಂದು ಹೆಸರಿಟ್ಟದ್ದು" ಎಂದು ಮೂತಿ ತಿರುವಿ ಮಲಗಿದಳು. ನಿಜವಾಗಿಯೂ ತನ್ನ ಜೀವನದಲ್ಲಿ ಎಷ್ಟೋ ಹುಡುಗಿಯರನ್ನ ಕಂಡಿದ್ದೇನೆ. ಆದರೆ ಈ ಲಕ್ಷ್ಮಿಯೊಬ್ಬಳು ತನಗೆ ಸೋಲದವಳು. ಬಹಳ ವರ್ಷಗಳ ಮೇಲೆ ಕಂಡ ಲಕ್ಷ್ಮಿ ನನ್ನ ಮನಸ್ಸನ್ನು ಕಲಕಿದ್ದಳು.

ಇಂದಿರಾಳಿಗೆ ಒಳ್ಳೆಯ ಕೆಲಸ ಸಿಕ್ಕು ಮನೆ ಬದಲಾಯಿಸಿದಾಗ ಲಕ್ಷ್ಮಿಯ ಮನೆ ಹತ್ತಿರದಲ್ಲೇ ಇತ್ತು. 'ಮಂಜುನಾಥ ಸಾಹಿತ್ಯಾಭ್ಯಾಸಿ, ಕವಿ. ಅಷ್ಟು ಬಿಜಿನೆಸ್ ಮಧ್ಯೆಯೂ ಓದೋಕೆ ಬಿಡುವು ಇಟ್ಟುಕೊಂಡಿರ್ತಾರೆ. ನಿನ್ನ ಕವಿತೆಗಳನ್ನ, ಲೇಖನಗಳನ್ನ ತುಂಬಾ ಮೆಚ್ಚಿಕೊಂಡಿದ್ದಾರೆ. ಒಂದು ರೀತಿಯಲ್ಲಿ ನಿನ್ನ ಬೀಸಣಿಗೆ' ಎಂದು ಲಕ್ಷ್ಮಿ ಹೇಳಿ ನಕ್ಕಾಗ ನಾನು ಉಬ್ಬಿಹೋಗಿದ್ದೆ. ಹಣಕಾಸಿನ ಅಂತಸ್ತಿನಲ್ಲಿ ಅಲ್ಲದಿದ್ದರೂ ಬುದ್ಧಿಯಲ್ಲಾದರೂ ತಾನೇ ಮೇಲು ಎಂದು ಕೊಚ್ಚಿಕೊಂಡು ಲಕ್ಷ್ಮಿಯಿಂದ ಬಯ್ಯಿಸಿಕೊಂಡಿದ್ದೆ.

ಮಂಜುನಾಥನ ಕವಿತೆಗಳನ್ನ ಓದಿ, ಮೊದಮೊದಲು ಪ್ರೋತ್ಸಾಹದ ಮಾತುಗಳನ್ನಾಡಿದ್ದೆ, ಅದೂ ಲಕ್ಷ್ಮಿ ಗಂಡ ಎಂದು. ಕಾವ್ಯಾಂಶ ಕಡಿಮೆಯಿದೆ. ಹಸಿಹಸಿಯಾಗಿ ಇಳಿಸುವದಕ್ಕಿಂತ ಸಂಕೇತ, ಪ್ರತಿಮೆಗಳಿಂದ ಕಾವ್ಯದಲ್ಲಿ ಬಿಗುವಿರಬೇಕು ಎಂದು ತಿಳಿಸಿ ಹೇಳಿದ್ದೆ. ಭಾಷಾಜ್ಞಾನ, ಶಬ್ದಸಂಪತ್ತು ಸಾಲದು. ಇನ್ನಷ್ಟು ಓದಿ ಚೆನ್ನಾಗಿ ಅಭ್ಯಾಸ ಮಾಡೋವರೆಗೆ ಒಂದೆರಡು ವರ್ಷ ಬರೆಯುವದನ್ನೇ ನಿಲ್ಲಿಸಿಬಿಡಿ ಎಂದು ಬೇಸರದಿಂದ ಹೇಳಿದ್ದೆ. ಒಂದು ಸಂಕಲನವನ್ನಾದರೂ ಪ್ರಕಟಿಸಬೇಕೆನ್ನುವ ಆಸೆಯಿಂದ ಮಂಜುನಾಥ ಮುನ್ನುಡಿ ಬರೆಯಲು ಕೇಳಿದಾಗ ಸ್ಪಷ್ಟವಾಗಿ ನಿರಾಕರಿಸಿದ್ದೆ. ಸ್ವತಃ ಲಕ್ಷ್ಮಿಯೇ ಬಂದು

ಕೇಳಿವರೆ ಏನು ಮಾಡಬೇಕೆಂದು ವಿಚಾರಿಸಿದ್ದೆ. ಮಂಜುನಾಥನ ಒಳ್ಳೆಯದಕ್ಕೇ ನಾನು ಹೇಳ್ತಿರೋದು ಎಂದು ನನ್ನೊಳಗೇ ಸಮರ್ಥಿಸಿಕೊಂಡಿದ್ದೆ.

ಒಂದು ದಿನ ಲಕ್ಷ್ಮಿಯೇ ಮನೆಗೆ ಬಂದು ತುಂಬ ಸುಂದರವಾಗಿ, ಅಚ್ಚು ಕಟ್ಟಾಗಿ, ಅಚ್ಚಾದ ಪುಸ್ತಕದ ಪ್ರತಿ ಕೊಟ್ಟು ಹೋದಳು. ಬೇರೆ ಒಬ್ಬ ಲೇಖಕ ರಿಂದ 'ಮುನ್ನುಡಿ' ಬರೆಸಿದ್ದರು ಮಂಜುನಾಥ. ನನ್ನ ಮೈ ಉರಿಯಿತು. ಪ್ರಮುಖ ಪತ್ರಿಕೆಯಲ್ಲಿ ಅವರ ಬಗ್ಗೆ ವಿಮರ್ಶೆಯೆನ್ನುವ ಹೆಸರಿನಲ್ಲಿ ಚೆನ್ನಾಗಿ ಬಯ್ದು ಬರೆದೆ. ಆಮೇಲೆಯೆ ನನ್ನ ಸಿಟ್ಟು ಕೊಂಚ ಶಾಂತವಾದದ್ದು. ಲಕ್ಷ್ಮಿಯ ಗಂಡನಾದಷ್ಟಕ್ಕೆ ಅವನನ್ನು ಹೊಗಳಬೇಕೆ ? ನನ್ನ ಲೇಖನಿಗೆ ಎಲ್ಲರೂ ಸಮಾನರು ಎಂದು ಇಂದಿರಾಳ ಮುಂದೆ ಕೊಚ್ಚಿಕೊಂಡೆ. ಅವಳು ಏನೂ ಉತ್ತರ ಕೊಡದೆ ತುಟಿ ಕೊಂಕಿಸಿ ನಕ್ಕಿದ್ದಳು. ಲಕ್ಷ್ಮಿ ನನ್ನ ಕೈಗೆ ಸಿಗಲಿಲ್ಲವೆನ್ನುವ ಹತಾಶೆ ಈ ರೂಪು ತಾಳಿದೆ ಎನ್ನುವ ಶಂಕೆ ನನ್ನ ಒಳ-ಹೊರಗನ್ನು ಚೆನ್ನಾಗಿ ಬಲ್ಲ ಇಂದಿರಾಳಿಗೆ ಮೂಡಿರಬಹುದು.

ಮುಂದೆ ಭೆಟ್ಟಿಯಾದಾಗ ಗಂಡ-ಹೆಂಡತಿ ಇಬ್ಬರೂ ನನ್ನ ವಿಮರ್ಶೆಯ ಬಗ್ಗೆ ಮಾತು ಎತ್ತಿರಲಿಲ್ಲ. ಬೇರೆ ಪತ್ರಿಕೆಗಳ ಒಳ್ಳೆಯ ಮಾತುಗಳಿಂದ ತೃಪ್ತ ರಾದಂತಿತ್ತು. ಆಕ್ಷೇಪಿಸಿದ್ದರೆ, ಜಗಳವಾಡಿದ್ದರೆ, ಏನಾದರೂ ಹೇಳಿ ನನ್ನನ್ನು ಸಮರ್ಥಿಸಿಕೊಳ್ಳಬಹುದಿತ್ತು ಎಂದು ತುಂಬ ಚಡಪಡಿಸಿದೆ. ಅವರು ಮಾತ್ರ ಮೊದಲಿನ ಸ್ನೇಹ ಆತ್ಮೀಯತೆಯಿಂದ ಕಾಣುತ್ತಿದ್ದದ್ದು ನುಂಗಲಾರದ ಬಿಸಿ ತುಪ್ಪವಾಗಿತ್ತು.

ಹಳ್ಳಿಯಿಂದ ಗಂಗಕ್ಕನನ್ನು ಕರೆಸಿದ್ದೆ. ತುಂಬು ಗರ್ಭಿಣಿ. ಗರ್ಭ ನಿಂತಾಗಿಂದ ಅಸ್ವಸ್ಥಮಾದಿಂದ ನರಳುತ್ತಿದ್ದಳು. ಮೂರನೆಯ ಹೆರಿಗೆ. ತುಂಬ ನಿಶ್ಶಕ್ತಳಾಗಿದ್ದರಿಂದ ಒಳ್ಳೆಯ ಚಿಕಿತ್ಸೆ ಬೇಕಾಗಿತ್ತು. ಬಂದ ಮರುದಿನವೇ ಎಲ್ಲ ರನ್ನು ಗಾಬರಿ ಮಾಡಿದ್ದಳು. ಅಕ್ಕ ಉಸಿರಿಗೆ ಒದ್ದಾಡುವುದನ್ನು ನೋಡಲಾರದೆ ಲುಂಗಿಯಲ್ಲೇ ಲಕ್ಷ್ಮಿಯ ಮನೆಗೆ ಓಡಿಹೋಗಿದ್ದೆ.

"ಸಾಧ್ಯವಿದ್ದಷ್ಟು ಬೇಗ ಬಾ ಲಕ್ಷ್ಮಿ" ಲಕ್ಷ್ಮಿ ಹೊರಗೆ ಬಂದಿರಲಿಲ್ಲ. ಮಂಜುನಾಥರೇ ಬಂದು "ದಯವಿಟ್ಟು ಕ್ಷಮಿಸಿ, ಅವಳೀಗ ಬರೋದಿಲ್ಲ" ಎಂದಾಗ ನನ್ನ ಕೆನ್ನೆಗೇ ಹೊಡೆದಂತಾಗಿತ್ತು. ತಾನು ಕರೆದೊಡನೆ ಲಕ್ಷ್ಮಿ ಕಾರಿ ನಲ್ಲಿ ಬರುತ್ತಾಳೆಂದುಕೊಂಡು ಸ್ಕೂಟರ್ ಕೂಡ ತರದೆ ಓಡಿಬಂದಿದ್ದೆ. ಲಕ್ಷ್ಮಿ

ಯನ್ನು ಹೊರಗೆ ಬರದಂತೆ ತಡೆದ ಮಂಜುನಾಥ ವಿಲನ್‌ನಂತೆ ಕಂಡುಬಂದಿದ್ದರು. ಸಿಟ್ಟಿನಲ್ಲಿ ಮೂಕನಾಗಿ ಬೇರೆ ಡಾಕ್ಟರಲ್ಲಿ ಓಡಿದ್ದೆ. ಕೊನೆಗೂ ಅವರು ಸಣ್ಣತನ ತೋರಿಸಿಕೊಂಡರೆಂದು ಹೆಮ್ಮೆಯಿಂದ ಒಳಗೇ ಬೀಗಿದ್ದೆ. ಡಾಕ್ಟರಳಾಗಿ ಕರ್ತವ್ಯ ಮಾಡದ ಲಕ್ಷ್ಮಿಯ ಬಗ್ಗೆ ಅವಳ ಮೇಲಿನ ಅಧಿಕಾರದಿಂದ ನನ್ನೊಡನೆ ಅವಳು ಬರದಂತೆ ತಡೆದ ಮಂಜುನಾಥರ ಬಗ್ಗೆ ಜಿಗುಪ್ಸೆಪಟ್ಟುಕೊಂಡೆ. ಆ ಹೆಂಗೆಯಲ್ಲಿ ಅಕ್ಕನ ಜೀವ ಉಳಿಯಲಿಲ್ಲ. ಮನಸ್ಸು ಇನ್ನೂ ಕಹಿಯಾಯಿತು.

ಇಬ್ಬರೂ ಕೂಡಿ ದುಃಖ ಸೂಚಿಸಲು ಮನೆಗೆ ಬಂದಾಗ ಒಳಗೆ ಇದ್ದೂ ಇಲ್ಲವೆಂದು ಹೇಳಿಸಿದೆ. ಇಂದಿರಳೊಡನೆ ಮಾತಾಡಿ ಹೋದರು.

"ಅವರು ಮನುಷ್ಯರೇ ಅಲ್ಲ, ಕೊಲೆಗಡುಕರು" ಎಂದು ಜರಿದೆ.

"ಪಾಪ! ಅವರಿಗೆ ಏನು ತೊಂದರೆಯಿತ್ತೋ. ಸುಮ್ಮನೆ ಹಾಗೆ ಮಾಡೋರಲ್ಲ. ಚೆನ್ನಾಗಿ ಪ್ರ್ಯಾಕ್ಟೀಸಿದೆ ಒಳ್ಳೇ ಹೆಸರಿದೆ" ಇಂದಿರಾ ಅವರನ್ನೇ ವಹಿಸಿಕೊಂಡಿದ್ದಳು. ನನ್ನ ಮುಂಗೋಪ, ಅಹಂ, ಅವಳಿಗಲ್ಲದೆ ಇನ್ನಾರಿಗೆ ಗೊತ್ತು.

"ಅಂತೂ ನನ್ನ ವಿಮರ್ಶೆಯ ಮೇಲೆ ಚೆನ್ನಾಗಿ ಸೇಡು ತೀರಿಸಿಕೊಂಡರು" ಚೀರಿದೆ. ಇಂದಿರಾ ಬೆಪ್ಪಾಗಿ ಸುಮ್ಮನಾದಳು. ಸಾವಿನ ಸಂಕಟ ಅವರ ಮನೆಯ ದಾರಿಗೆ ಅಡ್ಡಗೋಡೆಯಾಯ್ತು.

ನಾಲ್ಕೈದು ವರ್ಷ ಕಳೆದ ಮೇಲೆ ಮಂಜುನಾಥ ಅನಿರೀಕ್ಷಿತವಾಗಿ ಮನೆಗೆ ಬಂದರು. ಒಂದು ಸಣ್ಣ ಕಾರ್ಯಕ್ರಮವಿದೆ. ನೀವಿಬ್ಬರೂ ಮನೆಗೆ ಬರಲೇಬೇಕೆಂದು ಆಮಂತ್ರಿಸಿದರು. ತಮ್ಮ ಎರಡನೆಯ ಕವನಸಂಕಲನವನ್ನು ಪ್ರಮುಖ ಲೇಖಕರಾದ ಡಾ. ಸೋಮನಾಥರಿಂದ ಬಿಡುಗಡೆ ಮಾಡಿಸಿದರು. ಮೊದಲ ಪ್ರತಿಯನ್ನು ನನ್ನ ಕೈಗಿಟ್ಟು ಆತ್ಮೀಯತೆಯಿಂದ ಅಪ್ಪಿಕೊಂಡರು. ಪುಸ್ತಕದ ಮೊದಲ ಪುಟ ತಿರುವಿದಾಗ ಆಶ್ಚರ್ಯ ಕಾದಿತ್ತು.

'ಸಾಹಿತ್ಯ ರಚನೆಯಲ್ಲಿ ಮಾರ್ಗದರ್ಶನ ನೀಡಿದ ಗೆಳೆಯ, ಖ್ಯಾತ ವಿಮರ್ಶಕ ಕವಿ, ಚಂದ್ರಶೇಖರರಿಗೆ ಅರ್ಪಣೆ' ಎಂದಿತ್ತು. ನನ್ನ ಕಣ್ಣುಗಳನ್ನು ನಂಬಲಾಗದೆ ದಿಟ್ಟಿಸುತ್ತಿದ್ದೆ. ಬಫೆಗೆ ಸಿದ್ಧಪಡಿಸುತ್ತ ಅತ್ತಿತ್ತ ಓಡಾಡುತ್ತಿದ್ದ ಲಕ್ಷ್ಮಿ ನನ್ನ ಹತ್ತಿರ ಬಂದಳು.

"ನಾನು ಬಂದು ನಿಮ್ಮಕ್ಕನಿಗೆ ಚಿಕಿತ್ಸೆ ಮಾಡಲಿಲ್ಲವೆಂದು ನಿನಗೆ ಸಿಟ್ಟು ಬಂದು ನಮ್ಮನ್ನು ದೂರ ಮಾಡಿದೆ ಚಂದ್ರು. ನಾನು ಬಂದಿದ್ದರೂ ಗಂಗಕ್ಕ ನನ್ನು ಉಳಿಸಿಕೊಳ್ಳೋದು ಸಾಧ್ಯವಿರಲಿಲ್ಲ ಅನ್ನೋ ವಿಷಯ ನಾನು ಆಸ್ಪತ್ರೆ ಯಲ್ಲಿ ವಿಚಾರಿಸಿಕೊಂಡಾಗ ತಿಳೀತು. ನನ್ನಿಂದ ಅನ್ಯಾಯವಾಗಲಿಲ್ಲ. ನಿನ್ನ ಆತುರದ ಕೋಪ ನನಗೆ ಚೆನ್ನಾಗಿ ಗೊತ್ತು. ನಾನು ನಿನ್ನ ಬಾಲ್ಯ ಕಾಲ ಸಖಿ. ಆದರೆ ನಾನು ಹೆಣ್ಣು ಅನ್ನೋದೆ ನೀನು ಮರೆತುಬಿಟ್ಟೆ. ಆ ದಿನ ನನಗೆ ಗರ್ಭ ಪಾತವಾಗಿ ಹಾಸಿಗೆ ಬಿಟ್ಟು ಏಳಲಾರದ ಸ್ಥಿತಿಯಲ್ಲಿದ್ದೆ. ಮಂಜು, ತುಂಬಾ ಸಂಕಟಪಟ್ಟರು.

ಎತ್ತರವಾಗಿ ಬೆಳೆದ ಅವರನ್ನು ನೋಡಲಾಗದೆ ತಲೆ ತಗ್ಗಿಸಿದೆ. "ತಪ್ಪು ಮಾಡುವದು ಸಹಜ. ಅದನ್ನು ತಿದ್ದಿಕೊಳ್ಳೋದು ಮುಖ್ಯ, ಅಲ್ಲವೇ ಚಂದ್ರಶೇಖರ." ಮಂಜುನಾಥ ಹೆಗಲಿಗೆ ಕೈ ಹಾಕಿ ಎಳೆದೊಯ್ದರು. ಸಖಿ ನಗುತ್ತಿದ್ದಳು....

ಬರೆಯುತ್ತಿದ್ದ ಚಂದ್ರಶೇಖರನ ಕೈ ನಿಂತಿತು. ಬರೆದದ್ದನ್ನು ಮತ್ತೆ ಮತ್ತೆ ಓದಿದ. ಹುಬ್ಬುಗಂಟಿಕ್ಕಿದ. ಬೆರಳುಗಳಿಂದ ಹಣೆ ಬಡಿದುಕೊಂಡ. ಸಿಗರೇಟು ಹೊತ್ತಿಸಿ, ಕಾಲು ಮುಂದೆ ಚಾಚಿ ಆರಾಮವಾಗಿ ಕೂತು ಮೇಲ್ಚಾ ವಣಿ ದಿಟ್ಟಿಸಿದ. ಒಂದು ನಿರ್ಧಾರಕ್ಕೆ ಬಂದು ಕಾಗದಗಳನ್ನೆಲ್ಲ ಕೂಡಿಸಿ ಚರ ಚರ ಹರಿದು ಹಾಕಿ ಲೆಟರ್‌ಪ್ಯಾಡ್ ಎತ್ತಿಕೊಂಡ.

ಪ್ರಿತಿಯ ರಾಮಣ್ಣ,

ನನ್ನ ಐವತ್ತನೆಯ ಹುಟ್ಟುಹಬ್ಬಕ್ಕೆ ಅಭಿಮಾನಿಗಳು, ಗೆಳೆಯರು ಸೇರಿ ಹೊರತರಲಿರುವ ಸಂಭಾವನಾ ಗ್ರಂಥಕ್ಕೆ ನನ್ನ ಜೀವನದ ಕೆಲವು ನೆನಪುಗಳನ್ನು ಬರೆಯಲು ಕೇಳಿದ್ದೀರಿ. ಸದ್ಯ ನನ್ನಿಂದ ಏನೂ ಬರೆಯಲಾಗುತ್ತಿಲ್ಲ. ದಯವಿಟ್ಟು ಕ್ಷಮಿಸಿ. ನನ್ನ ಲೇಖನವಿಲ್ಲದೆ ಪುಸ್ತಕ ಹೊರತರುವದೇ ಒಳ್ಳೆಯದು.

ವಂದನೆಗಳು,
ಚಂದ್ರಶೇಖರ

ಹಾಯಾಗಿ ಉಸಿರು ಬಿಟ್ಟು, ಕಡ್ಡಿ ಗೀರಿ ಚೂರುಗಳಿಗೆ ಬೆಂಕಿ ಇಟ್ಟ.

ಸಣ್ಣ ಕಥೆಯನ್ನೇ ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಆಯ್ದುಕೊಂಡ ಲೇಖಕಿಯರಲ್ಲಿ ಶಾಂತಾದೇವಿ ಕಣವಿ ಅವರಿಗೆ ಮಹತ್ವದ ಸ್ಥಾನವಿದೆ. ಸ್ವ ಅನುಭವದ ಒತ್ತಡಗಳಿಗಿಂತ ಸಹ ಅನುಭೂತಿಯ ಕಂಪನಗಳೇ ಅವರ ಕೃತಿಗಳ ನೆಲೆಯಾದುದರಿಂದ ಅವುಗಳ ಸಾಮಾಜಿಕ ಮುಖವೇ ನಮಗೆ ಹೆಚ್ಚು ಸ್ಪಷ್ಟವಾಗಿ ಕಾಣುತ್ತದೆ. ಅದರಲ್ಲಿಯೂ ನಮ್ಮ ಸಮಾಜದಲ್ಲಿ ಹೆಣ್ಣು ಎದುರಿಸುತ್ತಿರುವ ಸಮಸ್ಯೆಗಳು ಅವರಿಗೆ ತೀವ್ರ ಆಸ್ಥೆಯ ವಿಷಯಗಳಾಗಿವೆ ಈ ಸಂಗ್ರಹದಲ್ಲಿಯೂ ಕೂಡ ಸ್ತ್ರೀ ಕೇಂದ್ರಿತ ಕತೆಗಳೇ ಹೆಚ್ಚು ಯಶಸ್ವಿಯಾದವುಗಳು.

ಇಂದಿನ ಸಾಮಾಜಿಕ ಸಂದರ್ಭದಲ್ಲಿ ಮಹಿಳೆಯರನ್ನು ಕುರಿತ ಎಲ್ಲ ಗಂಭೀರ ಬರೆಹಗಳಲ್ಲಿಯೂ ಪ್ರತಿಭಟನೆ ಅನಿವಾರ್ಯವಾಗಿ ಕಾಣಿಸಿಕೊಳ್ಳುತ್ತದೆ ಆದರೆ ಶಾಂತಾದೇವಿಯವರ ಕತೆಗಳಲ್ಲಿ ಪ್ರತಿಭಟನೆ ಘೋಷಣೆಯ ಸರಳ ರೂಪವನ್ನು ತಾಳುವುದಿಲ್ಲ. 'ಒಂದು ಮೂಗುತಿಯ ಕಥೆ'ಯಲ್ಲಿ ಮಾನವ್ವನ ಹೊಂದಾಣಿಕೆ, 'ಎರಡೂ ಧೃದಗಳಿ' ಕತೆಯಲ್ಲಿ ಸುಪ್ರಿಯಾಳ ಮರುಮದುವೆ, 'ಮತ್ತದೇ ರಾಗ'ದಲ್ಲಿ ಇಂದಿರಾಳ ಸಂದಿಗ್ಧ—ಇವೆಲ್ಲವೂ ವಾಸ್ತವ ಘಟನೆಗಳಾಗಿ ನಮ್ಮೆದುರಿಗೆ ಬರುತ್ತವೆಯೇ ವಿನಹ ತಾತ್ತ್ವಿಕ ಪ್ರತಿಭಟನೆಯ ಸೋಲು ಗೆಲುವುಗಳೆಂದಲ್ಲ. ಮಾಸ್ತಿ ಸಂಪ್ರದಾಯದ ಮುಖ್ಯ ಗುಣವಾದ ವಸ್ತುನಿಷ್ಠತೆ ಶಾಂತಾದೇವಿಯವರ ಗುಣವೂ ಆಗಿದೆ.

ಆದರೆ, ಶಾಂತಾದೇವಿಯವರ ವೈಶಿಷ್ಟ್ಯವನ್ನೂ ನಾವು ಗಮನಿಸಬೇಕು 'ಹರಕೆ', 'ಅಂತ್ಯ ಸಂಸ್ಕಾರ', 'ದೇವಿ' ಇಂಥ ಕತೆಗಳಲ್ಲಿ ವ್ಯಕ್ತವಾಗುವ ಧೋರಣೆಗಳು ಪ್ರಗತಿಯತ್ತ ಮುಖ ಮಾಡಿದವುಗಳು. 'ಹರಕೆ'ಯ ಪಾರವ್ವ ಸಂಪ್ರದಾಯಬದ್ಧಳಾದರೂ ಕಮಲೆಯ ಪ್ರತಿಭಟನೆಯನ್ನೂ ತಾಳಿ ಕೇಳುತ್ತಾಳೆ, 'ಅಂತ್ಯ ಸಂಸ್ಕಾರ'ದ ಸರಸ್ವತಿ ಜಾತಿಯ ಕಟ್ಟುಗಳನ್ನು ಮೀರಬಲ್ಲವಳು, 'ದೇವಿ'ಯ ಪಾರಕ್ಕ ಅಂಧಶ್ರದ್ಧೆಯಲ್ಲಿಯೇ ಬೆಳೆದರೂ ಕೊನೆಗೆ ಅದರಿಂದ ಮುಕ್ತಿ ಪಡೆಯುತ್ತಾಳೆ. ಈ ಕತೆಗಳಲ್ಲಿ ಶಾಂತಾದೇವಿಯವರ ವಸ್ತುನಿಷ್ಠ ಆಶಾವಾದ ಸೂಕ್ಷ್ಮವಾಗಿ ಕಾಣಿಸಿಕೊಳ್ಳುತ್ತದೆ.

'ನೀಲಿಮಾ ತೀರ' ದಂಥ ಒಂದೆರಡು ಕತೆಗಳಲ್ಲಿ ಭಾವುಕತೆ ಹೆಚ್ಚೆನಿಸಿದರೂ ಇದು ಶಾಂತಾದೇವಿಯವರ ಸ್ವಭಾವಗುಣವೆಂದೆನಿಸುವುದಿಲ್ಲ. ಅವರ ನಿಜವಾದ ಮಾರ್ಗ ವಾಸ್ತವಮಾರ್ಗ, ಈ ಮಾರ್ಗದಲ್ಲಿ ಅವರು ಈಗಾಗಲೇ ಗಮನಾರ್ಹವಾದ ಯಶಸ್ಸು ಸಾಧಿಸಿದ್ದಾರೆ.

ಜಿ. ಎಸ್. ಆಮೂರ